ಗಳ ಸ್ತಂಭವಾಶ್ರಯಿಸಿ ಕುಳಿತನು. ವಸುದೇವನು ಮದನವೇಗೆಯೊಂದಿಗೆ ಆ ವಿದ್ಯಾಧರ ನಿಕಾಯದ ಪರಿಚಯವನ್ನು ಕೇಳಿದನು. ಅವಳು ಹೀಗೆ ನಿರೂಪಿಸಿದಳು :

“ಸ್ವಾಮಿ, ಪದ್ಮಪಾಣಗಳೂ ಪದ್ಮಮಾಲಾಧರರೂ ಆಗಿ ನಮ್ಮ ಸ್ತಂಭವನ್ನಾಶ್ರಯಿಸಿ ಕುಳಿತ ಇವರು ಗೌರಿಕ ವಿದ್ಯಾಧರರು ; ರಕ್ತಮಾಲಾಧರರೂ ರಕ್ತಕಂಬಲವಸ್ತ್ರರೂ ಆಗಿ ಗಾಂಧಾರಸ್ತಂಭವನ್ನು ನೆಮ್ಮಿ ಕುಳಿತ ಇವರು ಗಾಂಧಾರ ಖೇಚರರು ; ನಾನಾ ವರ್ಣಮಯ ಸ್ವರ್ಣಪೀತ ಕೌಶೇಯವಸ್ತ್ರರಾಗಿ ಮಾನವಸ್ತಂಭವನ್ನು ನೆಮ್ಮಿ ಕುಳಿತ ಇವರು ಮಾನವಪುತ್ರಕರು ; ಕಿಂಚಿದಾರಕ್ತ ವಸ್ತ್ರರೂ ಮಣಿಭೂಷಣರೂ ಆಗಿ ಮಾನಸ್ತಂಭವನ್ನು ನೆಮ್ಮಿ ಕುಳಿತ ಇವರು ಮನುಪುತ್ರಕರು ; ವಿಚಿತ್ರೌಷಧಿಹಸ್ತರೂ ವಿಚಿತ್ರಾಭರಣಸ್ರಜರೂ ಆಗಿ ಓಷಧಿಸ್ತಂಭವನ್ನು ನೆಮ್ಮಿ ಕುಳಿತ ಇವರು ಮೂಲವೀರ್ಯರು; ಸರ್ವರ್ತುಕುಸುಮಾಮೋದ ಕಾಂಚನಾಭರಣಸ್ರಜರಾಗಿ ಭೂಮಿಮಂಡಕ ಸ್ತಂಭದ ಬಳಿ ಕುಳಿತ ಇವರು ಅಂತರ್ಭೂಮಿಚರ ವಿದ್ಯಾಧರರು ; ವಿಚಿತ್ರ ಕುಂಡಲಧರರೂ ನಾಗಾಂಗದ ಭೂಷಣರೂ ಆಗಿ ಶಂಕುಸ್ತಂಭದ ಬಳಿ ಕುಳಿತ ಇವರು ಶಂಕುಕರು ; ಆಬದ್ಧಮುಕುಟಾಪೀಡರೂ ಮಣಿಕುಂಡಲರೂ ಆಗಿ ಕೌಶಿಕಸ್ತಂಭವನ್ನು ನೆಮ್ಮಿ ಕುಳಿತ ಇವರು ಕೌಶಿಕರು. ಸ್ವಾಮಿ, ಸಂಗ್ರಹವಾಗಿ ಆರ್ಯವಿದ್ಯಾಧರರ ವಿಚಾರ ಹೇಳಿದ್ದೇನೆ; ಈಗ ಮಾತಂಗ ನಿಕಾಯದ ಖೇಚರರ ಪರಿಚಯ ಕೇಳು :

ನೀಲಾಂಬುದಚಯಶ್ಯಾಮರೂ ನೀಲಾಂಬರವರಸ್ರಜರೂ ಆಗಿ ಮಾತಂಗ ಸ್ತಂಭದ ಸಮೀಪದಲ್ಲಿ ಕುಳಿತ ಇವರು ಮಾತಂಗ ವಿದ್ಯಾಧರರು ; ಶ್ಮಶಾನಾಸ್ಥಿ ಕೃತೋತ್ತಂಸರೂ ಭಸ್ಮರೇಣುವಿಧೂಸರರೂ ಆಗಿ ಶ್ಮಶಾನಸ್ತಂಭವನ್ನಾಶ್ರಯಿಸಿ ಕುಳಿತ ಇವರು ಶ್ಮಶಾನನಿಲಯರು; ನೀಲವೈಡೂರ್ಯಮಣಿವರ್ಣವಸ್ತ್ರಧರರಾಗಿ ಪಾಂಡುರಸ್ತಂಭವನ್ನು ನೆಮ್ಮಿ ಕುಳಿತ ಇವರು ಪಾಂಡುಕರು ; ಕೃಷ್ಣಾಜಿನಧರರೂ ಕೃಷ್ಣಚರ್ಮಾಂಬರಸ್ರಜರೂ ಆಗಿ ಕಾಲಸ್ತಂಭವನ್ನು ನೆಮ್ಮಿ ಕುಳಿತ ಇವರು ಕಾಲಶ್ವಪಾಕಿಗಳು ; ಪಿಂಗಲಕೇಶಿಗಳೂ ತಪ್ತಕಾಂಚನಭೂಷರೂ ಆತ ಶ್ವಪಾಕಿ ವಿದ್ಯೆಗಳ ಸ್ತಂಭವನ್ನು ನೆಮ್ಮಿ ಕುಳಿತ ಇವರು ಶ್ವಪಾಕಿಗಳು ; ಪತ್ರಿಪರ್ಣಾಂಶುಕಚ್ಛನ್ನರೂ ವಿಚಿತ್ರಮುಕುಟಸ್ರಜರೂ ಆಗಿ ಪಾರ್ವತ ಸ್ತಂಭದ ಬಳಿ ಕುಳಿತ ಇವರು ಪಾರ್ವತೇಯರು ; ವಂಶೀಪತ್ರಕೃತೋತ್ತಂಸರೂ ಸರ್ವರ್ತು ಕುಸುಮಸ್ರಜರೂ ಆಗಿ ವಂಶಸ್ತಂಭವನ್ನು ಆಶ್ರಯಿಸಿ ಕುಳಿತ ಇವರು ವಂಶಾಲಯರು ; ಮಹಾಭುಜಗ ಸಂದಷ್ಟಭೂಷಣರಾಗಿ ವೃಕ್ಷಮೂಲ ಮಹಾಸ್ತಂಭವನ್ನಾಶ್ರಯಿಸಿದ ಇವರು ಪಾರ್ಕ್ಷಮೂಲಿಕರು.

ಹೀಗೆ ಸ್ವವೇಷ ಕೃತಸಂಚಾರರೂ ಸ್ವಚಿಹ್ನಕೃತಭೂಷಣರೂ ಆದ ಈಯೆಲ್ಲ ವಿದ್ಯಾಧರನಿಕಾಯಗಳ ಸಂಕ್ಷೇಪವರ್ಣನೆಯನ್ನು ಮಾಡಿದ್ದೇನೆ.”

ಹೀಗೆ ಮದನವೇಗೆ ನಿರೂಪಿಸಲು, ವಿದ್ಯಾಧರಾಂತರವನ್ನು ತಿಳಿದು ವಸುದೇವನು ಸ್ವಸ್ಥಾನಕ್ಕೆ ಹೋದನು. ಖೇಚರರೂ ತೆರಳಿದರು.

ಒಂದು ದಿನ ವಸುದೇವನು ಯಾವುದೋ ಕಾರಣಕ್ಕೆ ಮದನವೇಗೆಯನ್ನು “ಬಾ

ವೇಗವತಿ” ಎಂದುಬಿಟ್ಟನು. ಇದರಿಂದ ಅವಳಿಗೆ ಕೋಪಬಂದು ಅವಳು ಮನೆಯೊಳಕ್ಕೆ ಹೊರಟುಹೋದಳು. ಅದೇ ಹೊತ್ತಿಗೆ ತ್ರಿಶಿಖರನ ವಿಧವೆಯಾದ ಪತ್ನಿ ಸೂರ್ಪಣಖಿ ಮದನವೇಗೆಯ ರೂಪಿನಲ್ಲಿ ಬಂದು ಮೋಸದಿಂದ ವಸುದೇವನನ್ನು ಅಪಹರಿಸಿ ಒಯ್ದಳು. ಆಕಾಶಕ್ಕೆ ಒಯ್ದು ಅಲ್ಲಿಂದ ಅವನನ್ನು ಕೆಳಕ್ಕೆ ಬಿಟ್ಟುಬಿಡಬೇಕೆಂದು ಅವಳ ಹಂಚಿಕೆಯಾಗಿತ್ತು. ಅಷ್ಟರಲ್ಲಿ ಅಕಸ್ಮಾತ್ತಾಗಿ ಆಕಾಶದಲ್ಲಿಯೇ ಕೆಳಗಡೆ ವಸುದೇವನ ವೈರಿ ಮಾನಸವೇಗನನ್ನು ನೋಡಿದಳು. ಆಕಾಶದಿಂದ ಕೆಳಕ್ಕೆ ಹಾಕಿ ವಸುದೇವನನ್ನು ಕೊಂದುಬಿಡಲು ಮಾನಸವೇಗನನ್ನು ನಿಯೋಜಿಸಿ ಸೂರ್ಪಣಖಿ ಇಷ್ಟಬಂದೆಡೆಗೆ ಹೊರಟುಹೋದಳು.ವಸುದೇವನು ಕೆಳಗೆ ತೃಣಕೂಟಕದಮೇಲೆ ಬಿದ್ದನು.ಅಲ್ಲಿ ಮನುಷ್ಯಸಂಕೀರ್ತಿತವಾದ ಜರಾಸಂಧನ ಧವಲಖ್ಯಾತಿಯನ್ನು ಕೇಳಿ ಅದು ರಾಜಗೃಹನಗರವೆಂದು ತಿಳಿದು ಹರ್ಷಿಸಿ ಅದನ್ನು ಪ್ರವೇಶಿಸಿದನು. ರಾಜಗೃಹದಲ್ಲಿ ವಸುದೇವನು ದ್ಯೂತದಲ್ಲಿ ಕೋಟಿ ಹೊನ್ನನ್ನು ಗೆದ್ದು ತ್ಯಾಗಶೀಲನಾಗಿ ಆಯೆಲ್ಲವನ್ನೂ ಅಲ್ಲಿಲ್ಲಿ ಜನರಿಗೆ ಹಂಚಿಬಿಟ್ಟನು. “ಯಾವಾತ ದ್ಯೂತದಲ್ಲಿ ಕೋಟಿ ಹೊನ್ನನ್ನು ಗೆದ್ದು ಹಂಚಿಬಿಡುತ್ತಾನೋ ಆತನೇ ನಿನ್ನನ್ನು ಕೊಲ್ಲುವಾತನ ತಂದೆಯಾಗುವನು” ಎಂದು ನೈಮಿತ್ತಿಕರು ಜರಾಸಂಧನಿಗೆ ಹೇಳಿದ್ದರು. ಅವರ ಆದೇಶಾನುಸಾರವಾಗಿ ಅಲ್ಲಿ ಆ ಸಮಯದಲ್ಲಿ ಅಂಥ ವ್ಯಕ್ತಿಗಾಗಿ ಹುಡುಕಾಟ ನಡೆದಿತ್ತು. ಜರಾಸಂಧನ ಅಧಿಕಾರಿಗಳು ವಸುದೇವನನ್ನು ಕಂಡು, ಹಿಡಿದು ಕೊಂಡು, “ತಕ್ಷಣವೇ ಸಾಯಲಿ” ಎಂದು ಅವನನ್ನು ತೊಗಲ ಚೀಲದಲ್ಲಿ ಕಟ್ಟಿ ಪರ್ವತಾಗ್ರದಿಂದ ಕೆಳಕ್ಕೆ ಹಾಕಿಬಿಟ್ಟರು. ವಸುದೇವನು ಕೆಳಕ್ಕೆ ಬೀಳುತ್ತಿರುವಾಗ ಆಕಸ್ಮಿಕವಾಗಿ ವೇಗವತಿ ಸರ್ರನೆ ಬಂದು ಅವನನ್ನು ಬಲವಾಗಿ ಹಿಡಿದುಕೊಂಡಳು. ಹಾಗೆ ಹಿಡಿದುಕೊಂಡು ಎತ್ತಲೋ ಒಯ್ಯುವಾಗ ವಸುದೇವನು ತನ್ನಲ್ಲಿಯೇ ಹೀಗೆಂದುಕೊಂಡನು: “ಹಿಂದೆ ಭೇರುಂಡವು ಹೇಗೆ ಚಾರುದತ್ತನನ್ನು ಕೊಂಡೊಯ್ದಿತೋ ಹಾಗೆಯೇ ಅದು ಈಗ ನನ್ನನ್ನು ಒಯ್ಯುತ್ತಿರಬೇಕು; ಇನ್ನೇನು ದುಃಖ ಕಾದಿದೆಯೋ ? ಬಂಧುಸಂಬಂಧ, ಭೋಗಸಂಪದ, ದಿವ್ಯಶರೀರ--ಇವೆಲ್ಲ ದುಃಖದಾಯಕಗಳು. ಆದರೆ ಮೂರ್ಖಜನ ಸುಖಪ್ರದವೆಂದು ತಿಳಿಯುತ್ತಾರೆ. ಪಾಪಪುಣ್ಯ ಸುಖದುಃಖ ಜನನಮರಣ ಇವನ್ನು ಜೀವ ಒಂಟಿಯಾಗಿಯೇ ಅನುಭವಿಸಬೇಕು. ಹೀಗಿದ್ದರೂ ಬೇಕಾದ ಸ್ವಜನರನ್ನು ಕಟ್ಟಿಕೊಳ್ಳುತ್ತಾರೆ. ಭೋಗಸಂಬಂಧವನ್ನು ಬಿಟ್ಟು ಮೋಕ್ಷಮಾರ್ಗಸ್ಥಿರರಾದವರೇ ಸುಖಿಗಳು, ಧೀರರು. ನನ್ನ ಕರ್ಮವಾದರೋ ಭಾರವಾದ್ದು. ಆದ್ದರಿಂದಲೇ ಈ ಭೋಗತೃಷ್ಣೆಯ ಅಲೆಗಳಲ್ಲಿ ಮುಳುಗಿ ತೇಲುತ್ತಿದ್ದೇನೆ. ಸಂಸಾರದಲ್ಲಿ ಅಲೆಯುತ್ತಿದ್ದೇನೆ.”

ಹೀಗೆ ಚಿಂತಿಸುತ್ತಲಿದ್ದ ವಸುದೇವನನ್ನು ವೇಗವತಿ ಗಿರಿತಟದಲ್ಲಿಳಿಸಿ ತೊಗಲ ಚೀಲದಿಂದ ಅವನನ್ನು ಹೊರಕ್ಕೆಳೆದುಕೊಂಡಳು. ಪತಿಯನ್ನು ನೋಡಿ ವಿರಹಾಕುಲಿತೆಯಾಗಿ ರೋದಿಸಿದಳು. ವಸುದೇವನು ಅವಳನ್ನು ಅಪ್ಪಿ ಸಂತೋಷಿಸಿದನು. ಆಮೇಲೆ ವಸುದೇವನು ಪ್ರಶ್ನಿಸಲಾಗಿ ಪತಿಯ ಅಪಹರಣವಾದ ಮೇಲೆ ನಡೆದ ಸುಖದುಃಖವನ್ನೆಲ್ಲ ಅವನಿಗೆ ಹೇಳಿಕೊಂಡಳು : “ನಾನು ನಿನಗಾಗಿ ವಿಜಯಾರ್ಧದ ಉಭಯಶ್ರೇಣಿಗಳಲ್ಲೂ

ಹುಡುಕಿದೆ ; ಅನೇಕ ಅರಣ್ಯಗಳಲ್ಲಿ ನಗರಗಳಲ್ಲಿ ನೋಡಿದೆ ; ಭರತಕ್ಷೇತ್ರದಲ್ಲೆಲ್ಲ ಬಹುಕಾಲ ಸುತ್ತಾಡಿದೆ. ಆದರೂ ನೀನು ನನಗೆ ದೊರೆಯಲಿಲ್ಲ. ಕೊನೆಗೆ ನಿನ್ನನ್ನು ಮದನವೇಗೆಯ ಬಳಿಯಲ್ಲಿ ನೋಡಿದೆ. ನಾನು ಅಲ್ಲಿಯೇ ಇದ್ದುಕೊಂಡರೆ, ನಿನ್ನನ್ನು ಕೂಡಿ ಇರದಿದ್ದರೇನು, ನಿನ್ನ ದರ್ಶನವಾದರೂ ಇರುತ್ತದಲ್ಲಾ ಎಂದುಕೊಂಡೆ. ನಾನು ಅಲ್ಲಿಯೇ ಅಲಕ್ಷಿತ ರೂಪದಿಂದ ಇರಲು ಇಚ್ಛಿಸಿದೆ. ಆದರೆ ತ್ರಿಶಿಖರನ ಭಾರ್ಯೆ ಸೂರ್ಪಣಖಿ ಮದನ ವೇಗೆಯ ರೂಪದಿಂದ ನಿನ್ನ ಬಳಿಗೆ ಬಂದು, ನಿನ್ನನ್ನು ಕೊಲ್ಲಲೆಳಸಿ ಅಪಹರಿಸಿಕೊಂಡು ಆಕಾಶಕ್ಕೆ ಹೋದಳು. ಅತ್ತ ಆ ಪರ್ವತ ಶಿಖರದಿಂದ ನೀನು ಕೆಳಗೆ ಬೀಳುತ್ತಿದ್ದೆ; ನಾನು ನಡುವೆಯೇ ಸರಕ್ಕನೆ ಬಂದು ನಿನ್ನನ್ನು ಹಿಡಿದುಕೊಂಡೆ. ಈಗ ನೀನು ಪಂಚನದ ತೀರ್ಥ ಮತ್ತು ಹ್ರೀಮಂತ ಪರ್ವತದ ಮೇಲಿರುವೆ.''—ಹೀಗೆ ವೇಗವತಿಯಿಂದ ನಡೆದ ವೃತ್ತಾಂತವನ್ನೆಲ್ಲ ತಿಳಿದ ವಸುದೇವನು, ವೇಗವತಿಯೊಂದಿಗೆ ಹ್ರೀಮಂತಪರ್ವತದ ಸುಂದರ ಸಾನು ಪ್ರದೇಶಗಳಲ್ಲಿ ಕ್ರೀಡಿಸಲು ತೊಡಗಿದನು.

ಒಂದು ದಿನ ಅಲ್ಲಿಯೇ ವಸುದೇವನು ಸ್ವೇಚ್ಛೆಯಿಂದ ಸುತ್ತಾಡುತ್ತಿರುವಾಗ, ನಾಗಪಾಶದಿಂದ ಬಲವಾಗಿ ಕಟ್ಟುವಡೆದ ಒಬ್ಬ ಕನ್ಯೆಯನ್ನು ನೋಡಿದನು. ಅವಳನ್ನು ಕಾಣುತ್ತಲೇ ಅವನ ಹೃದಯ ದಯಾರ್ದ್ರವಾಯಿತು. ಅವನು ಆಕೆಯನ್ನು ಆ ಬಂಧನದಿಂದ ಬಿಡಿಸಿದನು. ಬಂಧಮುಕ್ತೆಯಾದ ಕೂಡಲೇ ಆ ಕನ್ಯೆ ಅಚಿಂತಿತ ಬಂಧುವಾದ ವಸುದೇವನನ್ನು ವಂದಿಸಿ ಇಂತೆಂದಳು : ''ನಾಥ, ನಿನ್ನ ಪ್ರಸಾದದಿಂದ ನನ್ನ ವಿದ್ಯೆ ಸಿದ್ಧಿಸಿತು. ನಾನು ದಕ್ಷಿಣಶ್ರೇಣಿಯ ಗಗನವಲ್ಲಭ ನಗರವಾಸಿ ರಾಜಕನ್ಯೆ. ನನ್ನ ಹೆಸರು ಬಾಲಚಂದ್ರೆ. ನಾನು ವಿದ್ಯುದ್ದಂಷ್ಟ್ರನ ವಂಶದಲ್ಲಿ ಹುಟ್ಟಿದವಳು. ನಾನು ನದಿಯಲ್ಲಿ ಕುಳಿತು ಮಹಾವಿದ್ಯೆಯನ್ನು ಸಾಧಿಸುತ್ತಿರಲು ಒಬ್ಬ ಶತ್ರು ವಿದ್ಯಾಧರನು ನನ್ನನ್ನು ನಾಗ ಪಾಶದಿಂದ ಬಂಧಿಸಿ ಬಿಟ್ಟನು. ಪ್ರಭು, ನೀವು ನನ್ನನ್ನು ಆ ಬಂಧನದಿಂದ ಬಿಡಿಸಿದಿರಿ. ನಮ್ಮ ವಂಶದಲ್ಲಿ ಈ ಮೊದಲೇ ಕೇತುಮತಿಯೆಂಬ ಕನ್ಯೆಯಿದ್ದಳು. ಅವಳನ್ನು ನನ್ನ ಹಾಗೆಯೇ ಪುಂಡರೀಕನೆಂಬ ಅರ್ಧಚಕ್ರಿ ಅಕಸ್ಮಾತ್ತಾಗಿ ಬಂದು ಬಂಧನದಿಂದ ಬಿಡಿಸಿದ್ದನು. ಅವಳು ಹೇಗೆ ಅದೇ ಅರ್ಧಚಕ್ರಿಯ ನಿಃಸಪತ್ನಳಾದ ಪತ್ನಿಯಾದಳೋ ಹಾಗೆಯೇ ನಾನು ಕೂಡ ತಪ್ಪದೆ ನಿಮ್ಮ ಪತ್ನಿಯಾಗಲಿದ್ದೇನೆ. ಇದು ನಿಶ್ಚಯವೆಂದು ತಿಳಿಯುವಿರಿ. ನಾಥ, ನೀವು ವಿದ್ಯಾಧರರಿಗೂ ಅತಿಶಯ ದುರ್ಲಭವಾದ ಈ ವಿದ್ಯೆಯನ್ನು ಪರಿಗ್ರಹಿಸಿ.''—ಹೀಗೆ ಆಕೆ ಹೇಳಲು. ವಸುದೇವನು ಆ ವಿದ್ಯೆ ತನ್ನ ಇಚ್ಛೆಯಂತೆ ವೇಗವತಿಗೆ ಕೊಡುವುದಾಗಲಿ ಎಂದನು. ಆ ಕನ್ಯೆ ''ಹಾಗೆಯೇ ಆಗಲಿ'' ಎಂದು ವೇಗವತಿಗೆ ಅದನ್ನು ಕೊಟ್ಟಳು. ಆಮೇಲೆ ಗಗನಕ್ಕೆ ನೆಗೆದು ಗಗನವಲ್ಲಭನಗರಕ್ಕೆ ಹೊರಟು ಹೋದಳು. ಬಾಲಚಂದ್ರೆ ವೇಗವತಿಗೆ ವಿದ್ಯೆಯನ್ನಿತ್ತು ನಿಃಶಲ್ಯಳಾದಳು.

ಇದು ಜಿನಧರ್ಮದ ಉಪಾಸನೆಯ ಫಲ.

೨೭. ಸಂಜಯಂತಪುರಾಣ ವರ್ಣನ

ಈಗ ಶ್ರೇಣಿಕನು ಗೌತಮಗಣಧರನನ್ನು ''ಮುನಿಯೇ, ಈ ವಿದ್ಯುದ್ದಂಷ್ಟ್ರ ಯಾರು ? ಅವನ ವಿಚಾರವೇನು ?'' ಎಂದು ಪ್ರಶ್ನಿಸಿದನು. ಆಗ ಗೌತಮನು "ನಮಿಯ ವಂಶದಲ್ಲಿ ಗಗನವಲ್ಲಭನಗರದಲ್ಲಿ ವಿದ್ಯುದ್ದಂಷ್ಟ್ರನೆಂಬ ಒಬ್ಬ ವಿದ್ಯಾಧರನಿದ್ದನು. ಈತನು ಉಭಯಶ್ರೇಣಿಗಳ ಒಡೆಯ, ಪರಾಕ್ರಮಿ. ಒಮ್ಮೆ ಇವನು ಪಶ್ಚಿಮವಿದೇಹ ಕ್ಷೇತ್ರದಿಂದ ಸಂಜಯಂತ ಎಂಬ ಮುನಿಯನ್ನು ತನ್ನ ಮನೆಗೆ ಎತ್ತಿ ತಂದು ಅವನಿಗೆ ಉಪಸರ್ಗವನ್ನು ಮಾಡಿಸಿದನು."—ಎಂದು ತಿಳಿಸಿದನು. ಶ್ರೇಣಿಕನ ಕುತೂಹಲ ಕೆರಳಿ " ವಿದ್ಯುದ್ದಂಷ್ಟ್ರನು ಸಂಜಯಂತ ಮುನಿಗೆ ಏಕೆ ಉಪಸರ್ಗ ಮಾಡಿಸಿದನು" ಎಂದು ಮತ್ತೆ ಪ್ರಶ್ನಿಸಿದನು. ಆಗ ಗೌತಮನು ಪಾಪವಿನಾಶಕವಾದ ಸಂಜಯಂತನ ಪುರಾಣವನ್ನು ಹೀಗೆ ನಿರೂಪಿಸತೊಡಗಿದನು :

''ಈ ಜಂಬೂದ್ವೀಪದ ಪಶ್ಚಿಮ ವಿದೇಹಕ್ಷೇತ್ರದಲ್ಲಿ ಗಂಧಮಾಲಿನಿಯೆಂಬೊಂದು ದೇಶವಿದೆ. ಅಲ್ಲಿ ವೀತಶೋಕಾ ಎಂಬ ನಗರವುಂಟು. ಹಿಂದೊಮ್ಮೆ ಅಲ್ಲಿ ವೈಜಯಂತ ಎಂಬರಸು ಆಳುತ್ತಿದ್ದನು. ಸರ್ವಶ್ರೀ ಇವನ ಪತ್ನಿ. ಇವರಿಗೆ ಸಂಜಯಂತ ಮತ್ತು ಜಯಂತ ಎಂಬವರು ಇಬ್ಬರು ಪುತ್ರರು. ಹೀಗಿರಲು ಒಮ್ಮೆ ಸ್ವಯಂಭೂ ತೀರ್ಥಂಕರನು ವಿಹಾರಿಸುತ್ತ ಅಲ್ಲಿಗೆ ಬಂದನು. ಅವನಲ್ಲಿ ಧರ್ಮಶ್ರವಣಮಾಡಿ ತಂದೆ ಮಕ್ಕಳು ದೀಕ್ಷೆಗೊಂಡರು. ಬಳಿಕ ತಮ್ಮ ಪಿಹಿತಾಸ್ರವರೆಂಬ ಆಚಾರ್ಯರೊಂದಿಗೆ ಆ ಮೂವರೂ ವಿಹಾರಿಸುತ್ತಿದ್ದರು. ಇಂತಿರಲು ವೈಜಯಂತ ಮುನಿಗೆ ಕೈವಲ್ಯಜ್ಞಾನವುಂಟಾಯಿತು. ಆ ಕೇವಲಜ್ಞಾನೋತ್ಸವದ ಸಂದರ್ಭದಲ್ಲಿ ಚತುರ್ನಿಕಾಯಾಮರರು ಕೇವಲಿಯ ವಂದನಾರ್ಥವಾಗಿ ಬಂದಿದ್ದರು. ಆಗ ಅವರಲ್ಲಿ ಧರಣೇಂದ್ರನನ್ನು ಕಂಡು ಜಯಂತ ಮುನಿ ತಾನೂ ಧರಣೇಂದ್ರನಾಗಬೇಕೆಂದು ನಿದಾನಿಸಿ, ಸತ್ತಮೇಲೆ ಧರಣೇಂದ್ರನೇ ಆಗಿ ಹುಟ್ಟಿದನು. ಒಮ್ಮೆ ಜಯಂತನ ಅಣ್ಣ ಸಂಜಯಂತಮುನಿ ವೀತಶೋಕಾನಗರದ ಶ್ಮಶಾನವಲ್ಲಿ ಏಳು ದಿನಗಳ ಪ್ರತಿಮಾಯೋಗದಲ್ಲಿ ನಿಂತನು. ಆ ಸಮಯದಲ್ಲಿಯೇ ವಿದ್ಯುದ್ದಂಷ್ಟ್ರನು ಭದ್ರಶಾಲವನದಲ್ಲಿ ಬಂದಿದ್ದು ಸ್ವಸ್ತ್ರೀಸಮೇತನಾಗಿ ಅಲ್ಲಿ ನಿಡುಗಾಲ ಕ್ರೀಡಿಸುತ್ತಿದ್ದು ತನ್ನ ನಗರಕ್ಕೆ ಹಿಂತಿರುಗುವಾಗ, ಆಕಸ್ಮಿಕವಾಗಿ ಅವನ ದೃಷ್ಟಿ ಸಂಜಯಂತ ಮುನಿಯ ಮೇಲೆ ಬಿತ್ತು. ಪೂರ್ವವೈರ ಕಾರಣವಾಗಿ ಅವನ ಮೇಲೆ ಕೋಪವುಂಟಾಗಿ ಅವನನ್ನು ಎತ್ತಿಕೊಂಡು ಭರತಕ್ಷೇತ್ರದ ವಿಜಯಾರ್ಧದ ದಕ್ಷಿಣಭಾಗಕ್ಕೆ ಸಮೀಪದಲ್ಲಿಯ ವರುಣಪರ್ವತದ ಮೇಲೆ ಹೋದನು. ಅಲ್ಲಿ ಹರಿದ್ವತಿ, ಚಂಡಾವೇಗಾ, ಗಜವತಿ, ಕುಸುಮವತಿ, ಸುವರ್ಣವತಿ ಎಂಬೈದು ನದಿಗಳ ಸಂಗಮಸ್ಥಾನದೆಡೆಯಲ್ಲಿ ಸಂಜೆಯ ಹೊತ್ತಿನಲ್ಲಿ ಅವನನ್ನಿರಿಸಿ ತೆರಳಿದನು. ಬೆಳಗ್ಗೆ ವಿದ್ಯಾಧರರಿಗೆ ''ಇಂದು ರಾತ್ರಿ ನಾನು ಸ್ವಪ್ನದಲ್ಲಿ ಮಹಾಕಾಯನಾದ ಒಬ್ಬ ರಾಕ್ಷಸನನ್ನು ನೋಡಿದೆ. ಅವನು ನಮ್ಮನ್ನೆಲ್ಲ ಕೊಲ್ಲುವಂಥವನಾಗುತ್ತಾನೆ. ಆದ್ದರಿಂದ ನಡೆಯಿರಿ. ನಾವು ಈ ಕೂಡಲೇ ಹೋಗಿ ಅವನನ್ನು ಕೊಂದುಬಿಡೋಣ'' ಎಂದು ಹೇಳಿ ಅವರನ್ನು ಪ್ರೇರಿಸಿದನು. ಸಶಸ್ತ್ರರಾದ

ವಿದ್ಯಾಧರರೊಂದಿಗೆ ಅಲ್ಲಿಂದ ಹೊರಟು ಆ ವಿದ್ಯುದ್ದಂಷ್ಟ್ರನು ಅವನನ್ನು ಕೊಂದು ಬಿಟ್ಟನು. ಸಂಜಯಂತಮುನಿ ಆ ಅಂತ್ಯಕಾಲದಲ್ಲಿ ಕೇವಲಜ್ಞಾನ ಪಡೆದು, ಶೀತಲನಾಥ ತೀರ್ಥಂಕರನ ಆ ತೀರ್ಥಕಾಲದಲ್ಲಿ ನಿರ್ವಾಣಪಡೆದನು. ಅನಂತರ ಅವನ ಶರೀರದ ಪೂಜಾರ್ಥವಾಗಿ ಜಯಂತಚರನಾದ ಧರಣೇಂದ್ರ ಬಂದು ವಿದ್ಯುದ್ದಂಷ್ಟ್ರನ ಆ ಕೆಲಸವನ್ನು ತಿಳಿದು ಕೆರಳಿದನು ; ಅವನ ಸಮಸ್ತವಿದ್ಯೆಯನ್ನೂ ಅಪಹರಿಸಿ ಅವನನ್ನು ಕೊಲ್ಲಲೆಂದು ಬಯಸಿದನು. ಆಗ ಆದಿತ್ಯಾಭ ದಿವಾಕರದೇವನೆಂಬ ಲಾಂತವೇಂದ್ರನು ಅಲ್ಲಿಗೆ ಬಂದು "ಹೇ ಧರಣೇಂದ್ರ ಫಣೀಂದ್ರ, ವೃಥಾ ಪ್ರಾಣಿವಧೆ ಮಾಡಬೇಡ" ಎಂದಾಡಿ ಅವನನ್ನು ಹಿಂಸಾಕಾರ್ಯ ಮಾಡದಂತೆ ತಡೆದನು. ನೀನು (ಜಯಂತ), ನಾನು (ಲಾಂತವೇಂದ್ರ), ಈ ವಿದ್ಯಾಧರರಾಜನಾದ ವಿದ್ಯುದ್ದಂಷ್ಟ್ರ ಮತ್ತು ಸಂಜಯಂತ—ಹೀಗೆ ನಾವೆಲ್ಲ ವೈರವನ್ನು ಕಟ್ಟಿಕೊಂಡು ಹೇಗೆ ಈ ಸಂಸಾರದಲ್ಲಿ ಸುತ್ತಾಡುತ್ತಿದ್ದೇವೆ ಎಂಬುದನ್ನು ಕೇಳು, ನಾನು ನಿನಗಾಗಿ ಹೇಳುತ್ತೇನೆ" ಎಂದನು.

"ಈ ಭರತ ಕ್ಷೇತ್ರದಲ್ಲಿ ಶಕಟವೆಂಬ ಒಂದು ದೇಶ. ಅದರ ಸಿಂಹಪುರ ನಗರದಲ್ಲಿ ಹಿಂದೊಮ್ಮೆ ಸಿಂಹಸೇನನೆಂಬರಸು ಆಳುತ್ತಿದ್ದನು. ಇವನ ಪತ್ನಿ ರಾಮದತ್ತೆ. ನಿಪುಣಮತಿ ಎಂಬವಳು ದಾದಿ. ರಾಜನಿಗೆ ಶ್ರೀಭೂತಿ ಎಂಬ ಒಬ್ಬ ಪುರೋಹಿತ. ಇವನು ಸತ್ಯವಾದಿ, ಅಲುಬ್ಧ ಎಂದು ಪ್ರಸಿದ್ಧನಾಗಿದ್ದನು. ಇವನ ಪತ್ನಿ ಶ್ರೀದತ್ತೆ. ಶ್ರೀಭೂತಿ ನಗರದ ಎಲ್ಲ ದಿಕ್ಕುಗಳಲ್ಲಿಯೂ ಭಾಂಡಶಾಲೆಗಳನ್ನು ಮಾಡಿಸಿದ್ದು, ವಣಿಗ್ವರ್ಗದ ವಿಶ್ವಾಸವನ್ನು ಗಳಿಸಿದ್ದನು. ಅದೇ ಸಮಯದಲ್ಲಿ ಪದ್ಮಖಂಡವೆಂಬ ನಗರದಲ್ಲಿ ಸುಮಿತ್ರದತ್ತನೆಂಬ ವ್ಯಾಪಾರಿಯಿದ್ದನು. ಅವನು ಯಾವಾಗಲೋ ಒಮ್ಮೆ ತನ್ನ ಐದು ರತ್ನಗಳನ್ನು ಶ್ರೀಭೂತಿಯಲ್ಲಿ ನ್ಯಾಸವಾಗಿರಿಸಿ ಧನಾಕಾಂಕ್ಷಿಯಾಗಿ ಹಡಗಿನಲ್ಲಿ ಪಯಣಿಸಿ ಎಲ್ಲಿಗೋ ಹೋದನು. ನಡುವೆ ಹಡಗು ಒಡೆಯಿತು. ಮರಳಿ ಬಂದು ಪುರೋಹಿತನಿಂದ ತನ್ನ ರತ್ನಗಳನ್ನು ಬೇಡಿದನು. ಆದರೆ ಆತನು ಅವನ್ನು ಕೊಡಲಿಲ್ಲ. ರಾಜದ್ವಾರದಲ್ಲಿ ವ್ಯಾಪಾರಿ ಪ್ರಾರ್ಥಿಸಿದನಾದರೂ ಪುರೋಹಿತನ ಪ್ರಾಮಾಣಿಕತೆಯಲ್ಲಿ ವಿಶ್ವಾಸವಿದ್ದ ರಾಜನ ಅಧಿಕಾರಿಗಳು ವ್ಯಾಪಾರಿಯನ್ನು ನಿರಾಕರಿಸಿದರು. ಕೊನೆಗೆ ಪ್ರತ್ಯಾಶಾದಗ್ಧಚಿತ್ತನಾದ ಆತನು ರಾಜಾಲಯದ ಸಮೀಪದ ಒಂದು ಎತ್ತರದ ಮರವೇರಿ ಪ್ರತಿನಿತ್ಯವೂ, "ಸಿಂಹಸೇನರಾಜಾ, ದಯಾವತಿ ರಾಮದತ್ತೆ, ಸಜ್ಜನರೇ, ದಯೆಮಾಡಿ ನನ್ನ ಈ ಪ್ರಾರ್ಥನೆಯನ್ನು ಕೇಳಿ : ನಾನು ಇಂಥ ಮಾಸ–ಪಕ್ಷ-ದಿನದಲ್ಲಿ ಶ್ರೀಭೂತಿ ಪುರೋಹಿತನ ಸತ್ಯಶೀಲದಿಂದ ಪ್ರಭಾವಗೊಂಡು ಅವನ ಕೈಯಲ್ಲಿ ಇಂಥಿಂಥ ತರಹೆಯ ಐದುರತ್ನಗಳನ್ನು ನ್ಯಾಸವಾಗಿಟ್ಟೆ ; ಆದರೆ ಈಗ ಆತನು ಅತ್ಯಂತಲುಬ್ಧನಾಗಿ ಅವನ್ನು ನನಗೆ ಕೊಡಲು ಇಷ್ಟಪಡುತ್ತಿಲ್ಲ"-ಎಂದು ಕೂಗುತ್ತ ರೋದಿಸುತ್ತಿದ್ದನು. ಇಷ್ಟನ್ನು ಪ್ರತಿದಿನ ಬೆಳಗ್ಗೆ ಹೇಳಿಕೊಂಡು ಗೋಳಿಟ್ಟು ಯಥಾಸ್ಥಾನಕ್ಕೆ ಹೊರಟುಹೋಗುತ್ತಿದ್ದನು. ಹೀಗೆಯೇ ಹಲವು ತಿಂಗಳು ಕಳೆದುಹೋಗಲು, ಒಂದು ದಿನ ರಾಣಿ ರಾಮದತ್ತೆಯು ರಾತ್ರಿಯ ವೇಳೆ ರಾಜನೊಂದಿಗೆ "ರಾಜಾ, ಇದು ತುಂಬ ಅನ್ಯಾಯ. ಲೋಕದಲ್ಲಿ ಸಬಲರೂ

ದುರ್ಬಲರೂ ಎಲ್ಲಾ ಇರುತ್ತಾರೆ. ಸಬಲರ ಕೈಯಿಂದ ದುರ್ಬಲರು ಬದುಕುವುದು ಶಕ್ಯವಿಲ್ಲವೇ ? ಈ ಬಡಪಾಯಿ ದುರ್ಬಲನ ರತ್ನಗಳನ್ನು ಆ ಪುರೋಹಿತನು ಬಚ್ಚಿಟ್ಟುಕೊಂಡಿದ್ದಾನೆ. ಆದ್ದರಿಂದ ಈ ವಿಷಯದಲ್ಲಿ ನಿನಗೆ ಕರುಣೆಯುಂಟಾದರೆ ಆ ರತ್ನಗಳನ್ನು ಆ ವ್ಯಾಪಾರಿಗೆ ಹಿಂದಕ್ಕೆ ಕೊಡಿಸುವುದಾಗಲಿ"—ಎಂದಳು. ಅದಕ್ಕೆ ಅರಸನು "ಪ್ರಿಯೆ, ಸಮುದ್ರದಲ್ಲಿ ಈತನ ಹಡಗು ಒಡೆದು ಹೋಯಿತು. ತನ್ನ ಹಣ ನಷ್ಟವಾದ್ದರಿಂದ ಈ ನಿರ್ಲಜ್ಜನು ಮರುಳುಗೊಂಡವನಾಗಿ ಆ ಅವಸ್ಥೆಯಲ್ಲಿ ಹೀಗೆ ಪ್ರಲಾಪಿಸುತ್ತಾನೆ" ಎಂದನು. ಮತ್ತೆ ರಾಣಿಯು "ಈತನು ಧನಗ್ರಹದ ಪೀಡೆ ಹಿಡಿದವನಲ್ಲ ; ಏಕೆಂದರೆ ಈತನು ಪ್ರತಿದಿನ ಆಡಿದಷ್ಟು ಮಾತನ್ನೇ ಆಡುತ್ತಿರುತ್ತಾನೆ ; ಆದ್ದರಿಂದ ಇದರ ಪರೀಕ್ಷೆ ನಡೆಯಲಿ" ಎಂದಳು. ಹೀಗೆನ್ನುತ್ತಲೂ ಅರಸನು ಮಾರನೆಯ ಬೆಳಗ್ಗೆ ಪುರೋಹಿತನನ್ನು ರಹಸ್ಯದಲ್ಲಿ ಪ್ರಶ್ನಿಸಿದನು. ಆದರೆ ಆ ದ್ರೋಹಿ ಸರ್ವಥಾ ಒಪ್ಪಿಕೊಳ್ಳಲಿಲ್ಲ. ಆಮೇಲೆ ರಾಜನು ದ್ಯೂತದ ನೆಪದಲ್ಲಿ ಪುರೋಹಿತನನ್ನು ಪರೀಕ್ಷಿಸಲು ನೋಡಿದನು. ರಾಮದತ್ತೆ ದ್ಯೂತವು ಆರಂಭಿಸುವ ಮೊದಲೇ ಯಾವುದೋ ನೆಪದಲ್ಲಿ ಶ್ರೀಭೂತಿಯನ್ನು "ಇಂದು ನೀವು ರಾತ್ರಿ ಏನು ಊಟಮಾಡಿದಿರಿ" ಎಂದು ಕೇಳಿದಳು. ರಾಣಿಯ ಅಪ್ಪಣೆಯಂತೆ ದಾದಿ ನಿಪುಣಮತಿ ಪುರೋಹಿತನ ಪತ್ನಿಯಲ್ಲಿಗೆ ಹೋಗಿ ರತ್ನಗಳನ್ನು ಕೊಡುವಂತೆ ಕೇಳಿದಳು. ಗುರುತಿಗಾಗಿ ರಾತ್ರಿಯೂಟದ ಮಾತು ಹೇಳಿದಳು. ಆದರೆ ಅವಳು ರತ್ನಗಳನ್ನು ಕೊಡಲಿಲ್ಲ. ಎರಡನೆಯ ಬಾರಿ ದ್ಯೂತದಲ್ಲಿ ಗೆದ್ದು ಬ್ರಹ್ಮಸೂತ್ರವನ್ನು ಎತ್ತಿಕೊಂಡು ಹೋಗಿ ರತ್ನಗಳನ್ನು ಕೇಳಿದಳು. ಆಗಲೂ ಕೊಡಲಿಲ್ಲ. ಏಕೆಂದರೆ ರತ್ನಗಳನ್ನು ಕೊಡಬಾರದೆಂದು ಅವಳಿಗೆ ಗಂಡನ ಅಪ್ಪಣೆಯಾಗಿತ್ತು. ಮೂರನೆಯ ಬಾರಿ ಪತಿಯ ಹೆಸರಿದ್ದ ಮುದ್ರಿಕೆಯನ್ನು ನೋಡಿ ಪುರೋಹಿತನ ಪತ್ನಿ ರತ್ನಗಳನ್ನು ದಾದಿಗೆ ಕೊಟ್ಟುಬಿಟ್ಟಳು. ರಾಮದತ್ತೆಯ ಆಜ್ಞಾನುಸಾರ ದ್ಯೂತವು ನಿಂತಿತು. ಅರಸನು ವ್ಯಾಪಾರಿಯ ರತ್ನಗಳನ್ನು ಬೇರೆಯವರ ರತ್ನಗಳೊಂದಿಗೆ ಬೆರಸಿ ಕೊಟ್ಟಾಗಲೂ ವ್ಯಾಪಾರಿ ಅವುಗಳಲ್ಲಿ ತನ್ನವನ್ನು ಮಾತ್ರ ಗುರುತಿಸಿ ತೆಗೆದುಕೊಂಡನು. ಆತನ ಪ್ರಾಮಾಣಿಕತೆಗೆ ಮೆಚ್ಚಿ ಅರಸನು ಅವನನ್ನು ಸನ್ಮಾನಿಸಿದನು. ಪರಸ್ವಹರಣಪ್ರ ತನಾದ ಪುರೋಹಿತನ ಸರ್ವಸ್ವವನ್ನೂ ದೊರೆ ಸೆಳೆದುಕೊಂಡನು. ಅವನಿಗೆ ಗೊಬ್ಬರ ತಿನ್ನಿಸಲಾಯಿತು, ಮಲ್ಲರ ಮುಷ್ಟಿಯ ಪೆಟ್ಟು ಕೊಡಿಸಲಾಯಿತು. ಇದರಿಂದ ಅವನು ಮೃತನಾದನು. ಹೀಗಿದ್ದರೂ ಅವನು ಹಣದಾಸೆಯಿಂದಲೇ ಸತ್ತು ರಾಜನ ಭಾಂಡಾಗಾರದೊಳಗೆ ಅಗಂಧನವೆಂಬ ಸರ್ಪವಾದನು. ತನ್ನ ದೌಷ್ಟ್ಯಕಾರಣವಾಗಿ ರಾಜನಲ್ಲಿ ದ್ರೋಹ ತಳೆದನು. ಶ್ರೀಭೂತಿಯ ಸ್ಥಾನದಲ್ಲಿ ಧಮ್ಮಿಲ್ಲನೆಂಬ ಇನ್ನೊಬ್ಬ ಬ್ರಾಹ್ಮಣನನ್ನು ಪುರೋಹಿತನನ್ನಾಗಿ ನೇಮಿಸಿಕೊಳ್ಳಲಾಯಿತು. ಅವನೂ ಮಿಥ್ಯಾದೃಷ್ಟಿಯವನೇ ಆಗಿದ್ದನು.

ಸುಮಿತ್ರದತ್ತನು ರತ್ನಗಳನ್ನು ಕೊಂಡು ತನ್ನ ಪದ್ಮಖಂಡಪುರಕ್ಕೆ ಹೋದನು. ಅವನು ಜೈನಧರ್ಮಿಯಾದ್ದರಿಂದ "ನಾನು ರಾಮದತ್ತೆಗೆ ಮಗನಾಗುತ್ತೇನೆ" ಎಂದು ನಿದಾನಮಾಡಿ, ಆ ಇಚ್ಛೆಯಿಂದ ವಿಶೇಷವಾಗಿ ದಾನಮಾಡುತ್ತಿದ್ದನು. ಅವನ ಪತ್ನಿ

ಸುಮಿತ್ರದತ್ತಿಕೆ, ಯಾವಾಗಲೂ ಅವನಿಗೆ ವಿರೋಧವಾಗಿಯೆ ನಡೆಯುತ್ತಿದ್ದವಳು, ಸತ್ತು ಒಂದು ಪರ್ವತದ ಮೇಲೆ ಹುಲಿಯಾದಳು. ಒಂದು ದಿನ ಸುಮಿತ್ರದತ್ತನು ಯಾವನೋ ಮುನಿಶ್ರೇಷ್ಠನ ವಂದನಾರ್ಥವಾಗಿ ಅದೇ ಪರ್ವತಕ್ಕೆ ಹೋದನು. ಆ ಹುಲಿ ಅವನನ್ನು ತಿಂದುಹಾಕಿತು. ಅವನು ಸತ್ತು ರಾಮದತ್ತೆಗೆ ಪುತ್ರನಾದನು. ಅವನಿಗೆ ಸಿಂಹಚಂದ್ರನೆಂದು ಹೆಸರಾಯಿತು. ತಾಯಿಗೆ ಇವನಲ್ಲಿ ತುಂಬ ಪ್ರೀತಿ. ಇವನಿಗೆ ಪೂರ್ಣಚಂದ್ರನೆಂಬ ಒಬ್ಬ ತಮ್ಮನೂ ಆದನು. ಇವರು ಸೂರ್ಯಚಂದ್ರರಂತೆ ಲೋಕದಲ್ಲಿ ಖ್ಯಾತರಾಗಿದ್ದರು. ಒಮ್ಮೆ ಸಿಂಹಸೇನರಾಜನು ಕಾರ್ಯವಶದಿಂದ ಭಾಂಡಾಗಾರವನ್ನು ಹೊಕ್ಕಾಗ ಪೂರ್ವವೈರ ಕಾರಣವಾಗಿ ಅಗಂಧನಸರ್ಪವು ಅವನನ್ನು ಕಚ್ಚಿತು. ಅದೇ ನಗರದಲ್ಲಿ ಗರುಡದಂಡನೆಂಬ ಒಬ್ಬ ಮಹಾಗಾರುಡಿಗನಿದ್ದನು. ಅವನು ಮಂತ್ರಪೂರ್ವಕವಾಗಿ ಅಗಂಧನವೇ ಆದಿಯಾದ ಎಲ್ಲಾ ಹಾವುಗಳನ್ನೂ ಕರೆಸಿ "ನಿಮ್ಮಲ್ಲಿರುವ ಒಬ್ಬ ಅಪರಾಧಿ ಸರ್ಪವು ಮಾತ್ರ ಇಲ್ಲಿ ನಿಲ್ಲಲಿ ; ಉಳಿದುವೆಲ್ಲ ಯಥಾಸ್ಥಾನಕ್ಕೆ ಹೋಗಲಿ" ಎಂದನು. ಹಾಗೆನ್ನುತ್ತಲೂ ಅರಸನನ್ನು ಕಚ್ಚಿದ ಅಗಂಧನಸರ್ಪ ಅಲ್ಲೇ ಉಳಿಯಿತು ; ಉಳಿದುವು ಹೊರಟು ಹೋದುವು. ಗರುಡದಂಡನು "ಎಲೇ ದುಷ್ಟ, ನೀನು ಬಿಟ್ಟಂಥ ವಿಷವನ್ನು ಕೂಡಲೇ ಸೆಳೆದುಕೋ, ಸೆಳೆದುಕೊಳ್ಳಲು ಇಚ್ಛೆಯಿಲ್ಲವಾದರೆ ಈಗಲೇ ಅಗ್ನಿಯನ್ನು ಪ್ರವೇಶಿಸು" ಎಂದನು. ಅಗಂಧನವು ಕ್ರುದ್ಧವಾಗಿ, ಅದು ವಿಷವನ್ನು ಸೆಳೆದುಕೊಳ್ಳಲಿಲ್ಲ ; ಪ್ರತಿಯಾಗಿ ಉರಿಯುವ ಬೆಂಕಿಯಲ್ಲಿ ಬಿದ್ದು ಮರಣವನ್ನಪ್ಪಿತು ; ಚಮರೀಮೃಗವಾಗಿ ಹುಟ್ಟಿತು. ವಿಷವೇಗದಿಂದ ದೊರೆ ಸತ್ತು ಸಲ್ಲಕೀವನದಲ್ಲಿ ಆನೆಯಾಗಿ ಹುಟ್ಟಿದನು. ಹಾಗೆಯೇ ಧಮ್ಮಿಲ್ಲನು ಅದೇ ವನದಲ್ಲಿ ವಾನರನಾಗಿ ಹುಟ್ಟಿದನು. ರಾಮದತ್ತೆಯ ಸಿಂಹಚಂದ್ರ ಪೂರ್ಣಚಂದ್ರರೆಂಬ ಮಕ್ಕಳು ಮಹಾರಾಜ ಯುವರಾಜರಾಗಿ ಆಸಮುದ್ರಾಂತ ಕ್ಷಿತಿಯನ್ನಾಳಿದರು.

ಪೋದನಪುರದಲ್ಲಿ ರಾಮದತ್ತೆಯ ತಂದೆ ತಾಯಿಗಳಾದ ಪೂರ್ಣಚಂದ್ರ ಮತ್ತು ಹಿರಣ್ಯವತಿ ಎಂಬುವರಿದ್ದರು. ಅವರು ಜಿನಧರ್ಮದಲ್ಲಿ ಶ್ರದ್ಧಾನ್ವಿತರು. ಒಮ್ಮೆ ಈ ಪೂರ್ಣಚಂದ್ರನು ರಾಹುಭದ್ರನೆಂಬ ಮುನಿಯಲ್ಲಿ ದೀಕ್ಷೆಗೊಂಡು ಅವಧಿಜ್ಞಾನಿಯಾದನು. ಹಿರಣ್ಯವತಿಯು ದತ್ತವತಿ ಆರ್ಯಿಕೆಯಲ್ಲಿ ದೀಕ್ಷೆಗೊಂಡು, ಆರ್ಯಿಕೆಯಾದಳು. ಒಮ್ಮೆ ಈ ಹಿರಣ್ಯವತಿ ಆರ್ಯಿಕೆಯು ಅವಧಿಜ್ಞಾನಿಯಾದ ಪೂರ್ಣಚಂದ್ರ ಮುನಿಯಿಂದ ರಾಮದತ್ತೆಯ ವೃತ್ತಾಂತವನ್ನೆಲ್ಲ ಕೇಳಿ ತಿಳಿದವಳಾಗಿ ಅವಳಲ್ಲಿಗೆ ಹೋಗಿ ಅವಳನ್ನು ಪ್ರತಿಬೋಧಿಸಿದಳು. ರಾಮದತ್ತೆ ವೈರಾಗ್ಯಗೊಂಡು ದೀಕ್ಷೆ ಹಿಡಿದಳು. ಹಾಗೆಯೇ ಹಿರಣ್ಯವತ್ಯಾರ್ಯಿಕೆ ಸಿಂಹಚಂದ್ರನನ್ನೂ ಪ್ರತಿಬೋಧಿಸಲಾಗಿ, ಅವನೂ ರಾಹುಭದ್ರಮುನಿಯ ಬಳಿ ದೀಕ್ಷೆಗೊಂಡನು. ಈಗ ಯುವರಾಜ ಪೂರ್ಣಚಂದ್ರನು ಮಹಾರಾಜನಾದನು. ಆದರೆ ಸಮ್ಯಗ್ದರ್ಶನದೂರನೂ ವ್ರತರಹಿತನೂ ಆಗಿ ಇವನು ಭೋಗಾಸಕ್ತನಾದನು.

ಒಮ್ಮೆ ರಾಮದತ್ತಾರ್ಯಿಕೆ ಅವಧಿಜ್ಞಾನಿಯಾದ ಸಿಂಹಚಂದ್ರಮುನಿಯನ್ನು ವಂದಿಸಿ, ಅವನಿಂದ ತನ್ನ ತಾಯಿ, ಹಾಗೂ ತನ್ನ ಪುತ್ರರ ಪೂರ್ವಭವಗಳನ್ನು ಪ್ರಶ್ನಿಸಿದಳು. ಆ ಮುನಿ ಹೀಗೆ ನಿರೂಪಿಸಿದನು :

"ಇದೇ ಭರತಕ್ಷೇತ್ರದ ಕೋಸಲದೇಶದಲ್ಲಿ ವರ್ಧಕಿಗ್ರಾಮವೆಂದು ಒಂದು ಗ್ರಾಮವಿತ್ತು. ಅಲ್ಲಿ ಮೃಗಾಯಣನೆಂಬ ವಿಪ್ರನಿದ್ದನು. ಅವನ ಪತ್ನಿ ಮಧುರೆ. ಇವರಿಗೆ ವಾರುಣಿ ಎಂಬವಳು ಮಗಳು. ಆ ಮೃಗಾಯಣನೇ ಸತ್ತು ಸಾಕೇತನಗರದಲ್ಲಿ ಅತಿಬಲರಾಜನಿಗೆ ಅವನ ಪತ್ನಿ ಶ್ರೀಮತಿಯಲ್ಲಿ ನಿಮ್ಮ ತಾಯಾದ ಹಿರಣ್ಯವತಿಯಾಗಿ ಜನಿಸಿದನು. ಆ ಮಧುರೆಯೇ ಈಗ ರಾಮದತ್ತೆಯಾಗಿರುವ ನೀನು ; ವಾರುಣಿಯ ಜೀವವೇ ನಿನ್ನ ಚಿಕ್ಕಮಗ ಪೂರ್ಣಚಂದ್ರ; ವ್ಯಾಪಾರಿ ಸುಮಿತ್ರದತ್ತನ ಜೀವವೇ ನಿನ್ನ ದೊಡ್ಡ ಮಗ ಸಿಂಹಚಂದ್ರನಾದ ನಾನು. ತಂದೆ ಸಿಂಹಸೇನನನ್ನು ಶ್ರೀಭೂತಿಜೀವವಾದ ಅಗಂಧನಸರ್ಪ ಕಡಿಯಿತು. ಇದರಿಂದ ಅವನು ಸತ್ತು ಆನೆಯಾಗಿ ಹುಟ್ಟಿದನು. ನಾನು ಆ ಆನೆಗೆ ಶ್ರಾವಕಧರ್ಮವನ್ನಿತ್ತೆ. ಅಗಂಧನಸರ್ಪ ಸತ್ತು ಚಮರೀಮೃಗವಾಯಿತು. ಅದು ಚಮರಮೃಗಕ್ಕಾಗಿ ಕಾತರಿಸಿ ಸತ್ತು ರೂಕ್ಷಪಕ್ಷಗಳನ್ನು ತಳೆದ ದುಷ್ಟಕುಕ್ಕುಟಸರ್ಪವಾಗಿ ಜನಿಸಿತು. ತಂದೆ ಸಿಂಹಸೇನನ ಜೀವ, ಆನೆಯಾಗಿದ್ದುದು, ಉಪವಾಸವ್ರತ ಹಿಡಿದು ಕೃಶಿಸಿ ಹೋಗಿತ್ತು ಮದವು ಇಂಗಿ ಹೋಗಿತ್ತು ; ಈ ಸ್ಥಿತಿಯಲ್ಲಿ ಆ ಕುಕ್ಕುಟ ಸರ್ಪವು ಆನೆಯನ್ನು ಮತ್ತೆ ಕಡಿಯಿತು. ಆನೆಯು ಶುಭಪರಿಣಾಮದಿಂದ ಮಡಿದು ಸಹಸ್ರಾರ ಕಲ್ಪಕ್ಕೆ ಸಂದಿತು. ಆ ಕಲ್ಪದ ಶ್ರೀಪ್ರಭವಿಮಾನದಲ್ಲಿ ಅದು ಶ್ರೀಧರದೇವನಾಗಿ ಹುಟ್ಟಿತು. ಧಮ್ಮಿಲ್ಲನ ಜೀವ, ವಾನರನಾಗಿದ್ದುದು, ಆನೆಯನ್ನು ಕಚ್ಚಿದ ಕುಕ್ಕುಟ ಸರ್ಪದ ಮೇಲೆ ಕೆರಳಿ ಅದನ್ನು ಕೊಂದು ಹಾಕಿತು. ಆ ಸರ್ಪವು ಸತ್ತು ವಾಲುಕಾಪ್ರಭೆಯೆಂಬ ಮೂರನೆಯ ನರಕಕ್ಕೆ ಇಳಿಯಿತು. ಶೃಗಾಲದತ್ತನೆಂಬ ಭಿಲ್ಲನೊಬ್ಬನು ಆ ಸತ್ತ ಆನೆಯ ದಂತಗಳನ್ನೂ ಅಸ್ಥಿಗಳನ್ನೂ ಮುತ್ತುಗಳನ್ನೂ ಕೂಡಿಸಿಕೊಂಡು ಹೋಗಿ ಧನಮಿತ್ರನೆಂಬ ಸೆಟ್ಟಿಗೆ ಕೊಟ್ಟನು. ಆ ವ್ಯಾಪಾರಿ ಅವನ್ನು ಅರಸನಾದ ಪೂರ್ಣಚಂದ್ರನಿಗೆ ಅರ್ಪಿಸಿದನು. ಪೂರ್ಣಚಂದ್ರನು ಸಂತೋಷದಿಂದ ಅವನ್ನು ಪಡೆದು. ಅವುಗಳಲ್ಲಿ ದಂತಾಸ್ಥಿಗಳಿಂದ ಸಿಂಹಾಸನವನ್ನು ಮಾಡಿಸಿಕೊಂಡನು. ಆ ಮುತ್ತುಗಳಿಂದ ದೊಡ್ಡ ಹಾರವನ್ನು ಮಾಡಿಸಿಕೊಂಡನು.ಈಗಂತೂ ಅವನು ಅದೇ ಸಿಂಹಾಸನದ ಮೇಲೆ ಕುಳಿತುಕೊಳುತ್ತಾನೆ, ಅದೇ ಹಾರವನ್ನು ಧರಿಸುತ್ತಾನೆ. ಮೋಹಿಗಳ ಸಂಸಾರವೈಚಿತ್ರ್ಯವನ್ನು ಏನೆನ್ನೋಣ ?"

ಸಿಂಹಚಂದ್ರಮುನಿಯ ಈ ಕಥನವನ್ನು ಕೇಳಿ ರಾಮದತ್ತಾರ್ಯಿಕೆ ಹೊರಟು ಬಂದು ಪ್ರಮಾದವಶನಾಗಿದ್ದ ಪೂರ್ಣಚಂದ್ರನಿಗೆ ಎಲ್ಲವನ್ನೂ ಶ್ರುತಪಡಿಸಿ ಒಳ್ಳೆಯ ರೀತಿಯಲ್ಲಿ ಪ್ರತಿಬೋಧಿಸಿದಳು. ಅದರಿಂದಾಗಿ ಆತನು ದಾನ ಪೂಜಾದಿಗಳನ್ನು ಚೆನ್ನಾಗಿ ಆಚರಿಸಿ ೧೬ನೆಯ ಸಹಸ್ರಾರಕಲ್ಪದಲ್ಲಿ ವೈಡೂರ್ಯಪ್ರಭವಿಮಾನದಲ್ಲಿ ದೇವನಾದನು. ರಾಮದತ್ತೆ ಸಮ್ಯಕ್ತ್ವದಿಂದಾಗಿ ಸ್ತ್ರೀಜನ್ಮವನ್ನು ಬಿಟ್ಟು ಅದೇ ಸಹಸ್ರಾರಕಲ್ಪದಲ್ಲಿ ಪ್ರಭಂಕರ ವಿಮಾನದಲ್ಲಿ ಸೂರ್ಯಪ್ರಭದೇವನಾದಳು. ಸಿಂಹಚಂದ್ರಮುನಿ ಚತುರ್ವಿಧಾರಾಧನೆಯನ್ನು ಆರಾಧಿಸಿ ಪ್ರೀತಿಂಕರ ಗ್ರೈವೇಯಕದಲ್ಲಿ ಅಹಮಿಂದ್ರನಾದನು.

ಸೂರ್ಯಪ್ರಭದೇವನು ಆಯುರಂತ್ಯದಲ್ಲಿ ಬಂದು ವಿಜಯಾರ್ಧದ ದಕ್ಷಿಣಶ್ರೇಣಿಯ ಧರಣೀತಿಲಕನಗರದಲ್ಲಿ ಅತಿಬಲನೆಂಬರಸಿಗೂ ಸುಲಕ್ಷಣೆಯೆಂಬ ರಾಣಿಗೂ ಶ್ರೀಧರೆಯೆಂಬ

ಮಗಳಾಗಿ ಹುಟ್ಟಿದನು. ಅಲಕಾನಗರಿಯ ಅರಸು ಸುದರ್ಶನನಿಗೆ ಅವಳನ್ನು ಕೊಡಲಾಯಿತು. ಸುದರ್ಶನ ಶ್ರೀಧರೆಯರಿಗೆ. ವೈಡೂರ್ಯಪ್ರಭವಿಮಾನದಲ್ಲಿ ದೇವನಾಗಿ ಜನಿಸಿದ್ದ ಪೂರ್ಣಚಂದ್ರಜೀವನು ಆಯುರಂತ್ಯದಲ್ಲಿ ಬಂದು ಯಶೋಧರೆಯೆಂಬ ಮಗಳಾಗಿ ಜನಿಸಿದನು. ಇವಳನ್ನು ಉತ್ತರಶ್ರೇಣಿಯ ಪ್ರಭಾಕರಪುರದರಸು ಸೂರ್ಯಾವರ್ತನಿಗೆ ಕೊಡಲಾಯಿತು. ಈ ಸೂರ್ಯಾವರ್ತ ಯಶೋಧರೆಯರಿಗೆ, ಶ್ರೀಧರದೇವನಾಗಿದ್ದ ಸಿಂಹಸೇನರಾಜಜೀವನು ಆಯುರಂತ್ಯದಲ್ಲಿ ಭೂಮಿಗೆ ಬಂದು ರಶ್ಮಿವೇಗನೆಂಬ ಮಗನಾಗಿ ಹುಟ್ಟಿದನು. ಸೂರ್ಯಾವರ್ತನು ಮೋಕ್ಷಾಪೇಕ್ಷಿಯಾಗಿ ರಶ್ಮಿವೇಗನಿಗೆ ರಾಜ್ಯವಿತ್ತು ಮುನಿಚಂದ್ರಗುರುವಿನ ಬಳಿ ತಪೋದೀಕ್ಷೆಗೊಂಡನು. ಆಗಲೇ ಶ್ರೀಧರೆ ಯಶೋಧರೆಯರೂ ಗುಣವತಿ ಆರ್ಯಿಕೆಯ ಬಳಿ ದೀಕ್ಷೆಗೊಂಡರು.

ಒಮ್ಮೆ ರಶ್ಮಿವೇಗನು ವಂದನಾರ್ಥವಾಗಿ ಸಿದ್ಧಕೂಟಕ್ಕೆ ಹೋಗಿದ್ದಾಗ ಅಲ್ಲಿ ಹರಿಚಂದ್ರನೆಂಬ ಮುನಿಯಿಂದ ಧರ್ಮಶ್ರವಣಮಾಡಿ ತಾನೂ ಮುನಿಯಾದನು. ಒಂದು ದಿನ ರಶ್ಮಿವೇಗಮುನಿ ಕಾಂಚನವೆಂಬ ಗುಹೆಯಲ್ಲಿ ಸ್ವಾಧ್ಯಾಯನಿರತನಾಗಿದ್ದಾಗ ಅಲ್ಲಿಗೆ ಆರ್ಯಿಕೆಯರಾದ ಶ್ರೀಧರೆ ಯಶೋಧರೆಯರಿಬ್ಬರೂ ಅವನ ವಂದನಾರ್ಥವಾಗಿ ಹೋದರು. ಶ್ರೀಭೂತಿಪುರೋಹಿತಜೀವನು, ವಾಲುಕಾಪ್ರಭೆಯಲ್ಲಿ ನಾರಕಿಯಾಗಿದ್ದವನು, ಹಲಗಾಲ ಸಂದಮೇಲೆ ಅಲ್ಲಿಂದ ಮೇಲೆಬಂದು ಸಂಸಾರದಲ್ಲಿ ಸುತ್ತುತ್ತಿದ್ದು ಅದೇ ಗುಹೆಯಲ್ಲಿ ಅಜಗರವಾಗಿ ಹುಟ್ಟಿದ್ದನು. ಉಪಸರ್ಗವುಂಟಾದ್ದನ್ನು ನೋಡಿದ ರಶ್ಮಿವೇಗಮುನಿ ಕಾಯೋತ್ಸರ್ಗಗೊಂಡನು. ಆರ್ಯಿಕೆಯರಿಬ್ಬರೂ ಸಾವಧಿಕ ಸಂನ್ಯಾಸವನ್ನು ಗ್ರಹಿಸಿದರು. ಆ ದೊಡ್ಡಹೊಟ್ಟೆಯ ಹೆಬ್ಬಾವು ಆ ಮೂವರನ್ನೂ ನುಂಗಿಹಾಕಿತು. ರಶ್ಮಿವೇಗ ಸತ್ತು ಕಾಪಿಷ್ಠಸ್ವರ್ಗದಲ್ಲಿ ಅರ್ಕಪ್ರಭದೇವನಾದನು. ಆ ಆರ್ಯಿಕೆಯರಿಬ್ಬರೂ ಸತ್ತು ಅದೇ ಕಲ್ಪದ ರುಚಕವಿಮಾನದಲ್ಲಿ ದೇವರಾದರು. ರೌದ್ರಧ್ಯಾನದೂಷಿತವಾದ ಆ ಅಜಗರವು ಸತ್ತು ಪಂಕಪ್ರಭೆ ಎಂಬ ೪ನೆಯ ನಗರದಲ್ಲಿ ಹುಟ್ಟಿತು. ಪ್ರೀತಿಂಕರ ವಿಮಾನದಲ್ಲಿ ಅಹಮಿಂದ್ರನಾಗಿದ್ದ ಸಿಂಹಚಂದ್ರಜೀವನು ಅಲ್ಲಿಂದ ಚ್ಯುತನಾಗಿ ಬಂದು ಚಕ್ರಪುರದಲ್ಲಿ ಅಪರಾಜಿತರಾಜನಿಗೂ ಸುಂದರಿ ರಾಣಿಗೂ ಚಕ್ರಾಯುಧನೆಂಬ ಮಗನಾದನು. ಚಕ್ರಾಯುಧನ ಪತ್ನಿ ಚಿತ್ರಮಾಲೆ. ಇವರಿಗೆ ಅರ್ಕಪ್ರಭದೇವನು ಸ್ವರ್ಗಚ್ಯುತನಾಗಿ ಬಂದು ವಜ್ರಾಯುಧನೆಂಬ ಮಗನಾಗಿ ಹುಟ್ಟಿದನು. ಹಾಗೆಯೇ ಕಾಪಿಷ್ಠಕಲ್ಪದಲ್ಲಿ ದೇವನಾಗಿದ್ದ ಶ್ರೀಧರಾರ್ಯಿಕೆ ಪೃಥ್ವೀತಿಲಕನಗರದಲ್ಲಿ ಪ್ರೀತಿಂಕರ ಮತ್ತು ಅತಿವೇಗೆ ಎಂಬ ರಾಜರಾಣಿಯರಿಗೆ ರತ್ನಮಾಲೆಯೆಂಬ ಮಗಳಾದಳು. ಇವಳನ್ನು ವಜ್ರಾಯುಧನಿಗೆ ಕೊಡಲಾಯಿತು. ಈ ದಂಪತಿಗಳಿಗೆ ಕಾಪಿಷ್ಠಕಲ್ಪದಲ್ಲಿ ದೇವನಾಗಿದ್ದ ಯಶೋಧರಾರ್ಯಿಕೆಯ ಜೀವ ರತ್ನಾಯುಧನೆಂಬ ಮಗನಾದನು. ಚಕ್ರಾಯುಧನು ತನ್ನ ಮಗ ವಜ್ರಾಯುಧನಿಗೆ ರಾಜ್ಯವೊಪ್ಪಿಸಿ ತಾನು ಪಿಹಿತಾಸ್ರವಮುನಿಗಳಲ್ಲಿ ತಪೋದೀಕ್ಷೆಗೊಂಡನು. ಅಂತ್ಯದಲ್ಲಿ ನಿರ್ವಾಣಪದ ಪಡೆದನು. ವಜ್ರಾಯುಧನು ಕೂಡ ರಾಜ್ಯಭಾರವನ್ನು ತನ್ನ ಮಗ ರತ್ನಾಯುಧನಿಗೊಪ್ಪಿಸಿ ತಪೋದೀಕ್ಷೆಗೊಂಡನು. ಆದರೆ ರತ್ನಾಯುಧನು ರಾಜ್ಯಮದದಿಂದ ಉಬ್ಬಿ

ಮಿಥ್ಯಾತ್ವವುಳ್ಳವನಾದನು. ಈ ರತ್ನಾಯುಧನಿಗೆ ಮೇಘನಿನಾದವೆಂಬ ರಾಜಹಸ್ತಿಯೊಂದಿತ್ತು. ಒಮ್ಮೆ ಅದು ಜಲಾವಗಾಹನಕ್ಕಾಗಿ ಹೋಗಿದ್ದು ನಡುವೆ ಮುನಿದರ್ಶನವಾಗಿ ಜಾತಿಸ್ಮರಣೆಗೊಂಡು ನೀರ್ಗುಡಿಯದೆ ಹೋಯಿತು. ರತ್ನಾಯುಧನು ಅದರ ಈ ಚರ್ಯೆ ಏನೆಂದು ತಿಳಿಯದವನಾಗಿ ವದ್ರದತ್ತಮುನಿಯಲ್ಲಿ ಅದರ ಕಾರಣವನ್ನು ಪ್ರಶ್ನಿಸಿದನು. ಮುನಿ ಅದನ್ನಿಂತು ನಿರೂಪಿಸಿದನು :

“ಇದೇ ಭರತಕ್ಷೇತ್ರದ ಚಿತ್ರಕಾರಪುರದಲ್ಲಿ ಪ್ರೀತಿಭದ್ರನೆಂಬ ಅರಸನಿದ್ದನು. ಇವನ ಪತ್ನಿ ಸುಂದರಿ. ಇವರಿಗೆ ಮಗ ಪ್ರೀತಿಂಕರ. ದೊರೆಯ ಮಂತ್ರಿ ಚಿತ್ರಬುದ್ಧಿ. ಮಂತ್ರಿಯ ಪತ್ನಿ ಕಮಲಾ. ಇವರ ಮಗ ವಿಚಿತ್ರಮತಿ. ಪ್ರೀತಿಂಕರ ಮತ್ತು ವಿಚಿತ್ರಮತಿ ಇಬ್ಬರೂ ಒಮ್ಮೆ ಶ್ರುತಸಾಗರ ಮುನಿಯಿಂದ ತಪಸ್ಸಿನ ಫಲವನ್ನು ಕೇಳಿ ತಿಳಿದು ಆ ಯುವಾವಸ್ಥೆಯಲ್ಲಿಯೇ ಅವನ ಸಮೀಪದಲ್ಲಿ ತಪಸ್ಸಿಗೆ ನಿಂತರು. ಈ ತಪೋಧನರಿಬ್ಬರೂ ಒಮ್ಮೆ ಸಿದ್ಧಕ್ಷೇತ್ರಗಳನ್ನು ಸಂದರ್ಶಿಸುತ್ತ ಬಂದು ಸಾಕೇತನಗರಕ್ಕೆ ಬಂದರು. ಅಲ್ಲಿ ಬುದ್ಧಿಸೇನೆ ಎಂಬ ಒಬ್ಬ ವೇಶ್ಯೆಯಿದ್ದಳು. ಅವಳನ್ನು ನೋಡುತ್ತಲೇ ವಿಚಿತ್ರಮತಿ ಕರ್ಮವಶದಿಂದಾಗಿ ಮುನಿಪದದಿಂದ ಭ್ರಷ್ಟನಾಗಿ ಅದನ್ನು ಪರಿತ್ಯಜಿಸಿದನು. ಗಂಧಮಿತ್ರರಾಜನ ಅಡಿಗೆಯವನಾದನು. ಮಾಂಸಪಾಕ ವಿಶೇಷಜ್ಞನಾದ್ದರಿಂದ ತನ್ನ ಆ ಕಲೆಯಿಂದ ಅರಸನನ್ನು ಮೆಚ್ಚಿಸಿ ಮೆಚ್ಚಾಗಿ ಆ ವೇಶ್ಯೆಯನ್ನು ವಶಮಾಡಿಕೊಂಡನು. ಆ ಮಾಂಸಾಶನಪ್ರಿಯನು ಆ ವೇಶ್ಯೆಯೊಂದಿಗೆ ಸುಖದಲ್ಲಿರುತ್ತ, ಸತ್ತ ಮೇಲೆ, ೭ನೆಯ ನರಕಕ್ಕೆ ಹೋದನು. ಅಲ್ಲಿಂದ ಮೇಲೆ ಬಂದು ಮತ್ತೆ ಸಂಸಾರದಲ್ಲಿ ತೊಳಲಾಡುತ್ತಿದ್ದನು. ಯಾವುದೋ ಪಾಪವಿಶೇಷವು ಕಾರಣವಾಗಿ ಈಗ ನಿನ್ನ ಮದವಾರಣವಾಗಿ ಹುಟ್ಟಿದ್ದಾನೆ. ಅದು ಮುನಿದರ್ಶನಯೋಗದಿಂದ ಜಾತಿಸ್ಮರಣೆಗೊಂಡು ಸಂಸಾರದಲ್ಲಿ ಮಂದರುಚಿಯಾಗಿ ತನ್ನ ಕರ್ಮವನ್ನು ನಿಂದಿಸಿಕೊಳ್ಳುತ್ತ ಉಪಶಾಂತಿ ತಳೆದಿದೆ.”

ವಜ್ರದತ್ತಮುನಿಯಿಂದ ಈ ವೃತ್ತಾಂತ ಕೇಳಿ ಮೇಘನಿನಾದ ಹಸ್ತಿಯೂ ರತ್ನಾಯುಧ ರಾಜನೂ ಮಿಥ್ಯಾತ್ವವುಳಿದು ಶ್ರಾವಕವ್ರತ ಹಿಡಿದರು. ಶ್ರೀಭೂತಿಜೀವ ಹೆಬ್ಬಾವಾಗಿದ್ದುದು ಪಂಕಪ್ರಭೆಯಲ್ಲಿ ಬಿದ್ದಿದ್ದು. ಮೇಲೆ ಬಂದ ಮೇಲೆ ಮಂಗಿ ಮತ್ತು ದಾರುಣ ಎಂಬ ಭಿಲ್ಲದಂಪತಿಗಳಿಗೆ ಹೆಸರಿಂದಲೂ ವರ್ತನೆಯಿಂದಲೂ ಅತಿದಾರುಣನೆಂಬ ಮಗನಾಗಿ ಹುಟ್ಟಿತು. ಒಂದು ದಿನ ಸಿಂಹಸೇನಜೀವವಾದ ವಜ್ರಾಯುಧಮುನಿ ಪ್ರಿಯಂಗಖಂಡವೆಂಬ ವನದಲ್ಲಿ ಯೋಗಸ್ಥನಾಗಿರುವಾಗ ಅತಿದಾರುಣ ಭಿಲ್ಲನು ಅವನನ್ನು ಕೊಂದಿಕ್ಕಿದನು. ವಜ್ರಾಯುಧನು ಸತ್ತು ಸರ್ವಾರ್ಥಸಿದ್ಧಿಗೆ ಸಂದನು. ಅತಿದಾರುಣನು ಮಹಾತಮಃಪ್ರಭೆಗೆ ಹೋದನು. ಅವನು ಮುನಿವಧೆಯಿಂದುಂಟಾದ ಘೋರದುಃಖವನ್ನು ಭೋಗಿಸಬೇಕಾಯಿತು. ರತ್ನಮಾಲೆ ಸತ್ತು ಅಚ್ಯುತಸ್ವರ್ಗದಲ್ಲಿ ದೇವನಾದಳು. ರತ್ನಾಯುಧನೂ ಅಲ್ಲಿಯೇ ದೇವನಾದನು. ಧಾತಕೀಖಂಡದ್ವೀಪದಲ್ಲಿ ಪೂರ್ವಮೇರುವಿನ ಪಶ್ಚಿಮವಿದೇಹದಲ್ಲಿ ಗಂಧಿಲಾವಿಷಯವುಂಟು. ಅಲ್ಲಿಯ ಅಯೋಧ್ಯಾನಗರದಲ್ಲಿ ಅರ್ಹದ್ದಾಸನೆಂಬರಸು ಆಳುತ್ತಿದ್ದನು. ಈತನಿಗೆ ಸುವ್ರತೆ ಮತ್ತು ಜಿನದತ್ತೆ ಎಂಬವರು ಪತ್ನಿಯರು.

ರತ್ನಮಾಲೆ ರತ್ನಾಯುಧ ಜೀವರು, ಅಚ್ಯುತಸ್ವರ್ಗದಲ್ಲಿ ದೇವರಾಗಿದ್ದವರು, ಅಲ್ಲಿಂದ ಚ್ಯುತರಾಗಿ ಬಂದು, ಈಯಿಬ್ಬರು ರಾಣಿಯರಿಗೆ ಕ್ರಮವಾಗಿ ವೀತಭಯನೆಂಬ ಬಲದೇವನಾಗಿಯೂ ವಿಭೀಷಣನೆಂಬ ವಾಸುದೇವನಾಗಿಯೂ ಹುಟ್ಟಿದರು. ಇವರಲ್ಲಿ ವಿಭೀಷಣನು ಆಯುರಂತ್ಯದಲ್ಲಿ ರತ್ನಪ್ರಭೆಯೆಂಬ ಮೊದಲ ನರಕದಲ್ಲಿ ಜನಿಸಿದನು. ವೀತಭಯನು ಅನಿವೃತ್ತಿಮುನಿಯ ಬಳಿಯಲ್ಲಿ ತಪಸ್ಸುಮಾಡಿ ಆದಿತ್ಯಾಭನೆಂಬ ಲಾಂತವೇಂದ್ರನಾದನು. ಆ ಲಾಂತವೇಂದ್ರನು ನಾನೇ. ನಾನು ರತ್ನಪ್ರಭೆಗೆ ಹೋಗಿ ವಿಭಿಷಣಚರ ನಾರಕಿಯನ್ನು ತಕ್ಕಂತೆ ಪ್ರತಿಬೋಧಿಸಿದೆನು. ಅವನು ಇದೇ ಜಂಬೂದ್ವೀಪದ ವಿದೇಹಕ್ಷೇತ್ರದಲ್ಲಿ ಗಂಧಮಾಲಿನಿ ಎಂಬ ದೇಶದ ವಿಜಯಾರ್ಧಗಿರಿಯಲ್ಲಿ ಆಳುವ ಶ್ರೀಧರ್ಮನೆಂಬ ಅರಸನಿಗೂ ಅವನ ಪತ್ನಿ ಶ್ರೀದತ್ತೆಗೂ ಈಗ ಶ್ರೀದಾಮನೆಂಬ ಮಗನಾಗಿ ಹುಟ್ಟಿದನು. ಅವನು ಒಮ್ಮೆ ನನಗೆ ಸುಮೇರುಪರ್ವತದ ಮೇಲೆ ಭೇಟಿಯಾಗಿ, ಅಲ್ಲಿಯೂ ನಾನು ಅವನನ್ನು ಪ್ರತಿಬೋಧಿಸಿದೆ. ಆ ಶ್ರೀದಾಮನು ಅನಂತಮತಿಗಳೆಂಬ ಗುರುಗಳ ಶಿಷ್ಯನಾಗಿ, ತೀರಿಕೊಂಡ ಮೇಲೆ, ಬ್ರಹ್ಮಕಲ್ಪದಲ್ಲಿ ಚಂದ್ರಾಭ ವಿಮಾನದಲ್ಲಿ ಇಂದ್ರನಾದನು. ಶ್ರೀಭೂತಿಯ ಜೀವ, ಭಿಲ್ಲನಾಗಿದ್ದವನು, ಏಳನೆಯ ನರಕದಿಂದ ಬಂದು ಸರ್ಪವಾದನು. ಮತ್ತೆ ಮೊದಲನೆಯ ನರಕಕ್ಕೆ ಸಂದನು. ಅಲ್ಲಿಂದ ಹೊರಟು ತಿರ್ಯಗ್ಗತಿಯಲ್ಲಿ ತೊಳಲಾಡುತ್ತ ದುಃಖವನ್ನು ಭೋಗಿಸುತ್ತಿದ್ದನು. ಆಮೇಲೆ ಭೂತರಮಣವೆಂಬ ಅಡವಿಯಲ್ಲಿ ಐರಾವತೀ ನದಿಯ ದಡದಲ್ಲಿ ಖಮಾಲಿ ಎಂಬ ತಪಸ್ವಿಗೆ ಆತನ ಪತ್ನಿ ಕನಕಕೇಶಿಯೆಂಬವಳಲ್ಲಿ ಮಗನಾಗಿ ಹುಟ್ಟಿದನು. ಅವನು ಮೃಗೋಪಮನಾಗಿದ್ದು, ಮೃಗಶೃಂಗನೆಂದು ಅವನ ಹೆಸರಾಗಿತ್ತು. ಒಮ್ಮೆ ಅವನು ಪಂಚಾಗ್ನಿತಪಸ್ಸನ್ನು ಮಾಡುತ್ತಿದ್ದಾಗ, ಸ್ವೇಚ್ಛೆಯಿಂದ ಆಕಾಶದಲ್ಲಿ ಚರಿಸುತ್ತಿದ್ದ ಚಂದ್ರಾಭನೆಂಬ ವಿದ್ಯಾಧರನ ಕಡೆಗೆ ಅವನ ದೃಷ್ಟಿಬಿತ್ತು. ತಾನೂ ವಿದ್ಯಾಧರನಾಗಬೇಕೆಂದು ನಿದಾನಿಸಿ, ತತ್ಪರಿಣಾಮವಾಗಿ ತೀರಿಕೊಂಡ ಮೇಲೆ, ವಜ್ರದಂಷ್ಟ್ರನಿಗೆ ವಿದ್ಯುತ್ಪ್ರಭೆ ಎಂಬ ಪತ್ನಿಯಲ್ಲಿ ವಿದ್ಯುದ್ದಂಷ್ಟ್ರನೆಂಬ ಹೆಸರಿನ ಮಗನಾಗಿ ಹುಟ್ಟಿದನು. ವಜ್ರಾಯುಧನ ಜೀವ ಸರ್ವಾರ್ಥಸಿದ್ಧಿಯಿಂದ ಬಂದು ಸಂಜಯಂತನಾಗಿದ್ದಾನೆ. ಹಾಗೆಯೇ ಜಯಂತಜೀವನಾದ ನೀನು ಬ್ರಹ್ಮಕಲ್ಪದಿಂದ ಚ್ಯುತನಾಗಿ ಬಂದು ಧರಣೇಂದ್ರನಾಗಿದ್ದೀಯೆ. ವೈರದ ಮಹಿಮೆಯನ್ನು ನೋಡು, ಹೀಗಿದೆ. ಸಿಂಹಸೇನರಾಜನು ಶ್ರೀಭೂತಿ ಪುರೋಹಿತನಿಗೆ ಒಂದು ಜನ್ಮದಲ್ಲಿ ಅಪಕಾರ ಮಾಡಿದ್ದರಿಂದ ವೈರವನ್ನು ಕಟ್ಟಿಕೊಂಡು, ಅನೇಕ ಜನ್ಮಗಳ ವರೆಗೆ ಅವನಿಂದ ವಧಿಸಲ್ಪಟ್ಟನು. ಕ್ರೋಧವಶನಾದ ಶ್ರೀಭೂತಿಗಾದರೂ ಸಿಂಹಸೇನನ ವಧೆಯಿಂದ ಬಂದದ್ದೇನು ? ಆತನ ಸುಖಕ್ಕೆ ಅದು ಅಡ್ಡಿಯಾಯಿತು. ಸಿಂಹಸೇನನ ಜೀವವು ಹಸ್ತಿಯಾಗಿದ್ದಾಗ ಜೈನಧರ್ಮವನ್ನು ಹೊಂದಿ ವೈರರಹಿತವಾಯಿತು. ಫಲಸ್ವರೂಪವಾಗಿ ಕೊನೆಯ ಭವದಲ್ಲಿ ಸಂಜಯಂತನಾಗಿ ಮುಂದೆ ಮೋಕ್ಷಕ್ಕೆ ಸಂದಿತು. ನೀನಾದರೂ ವೈರಬುದ್ಧಿಯಿಂದ ಸಂಸಾರದಲ್ಲಿ ಸುತ್ತುತ್ತಿರುವೆ. ಈ ವೈರಬಂಧವನ್ನು ಘೋರಸಂಸಾರವರ್ಧಕವೆಂದು ತಿಳಿದು ತ್ಯಜಿಸು : ಮಿಥ್ಯಾತ್ವವನ್ನು ವರ್ಜಿಸು."

ಹೀಗೆ ಆದಿತ್ಯಾಭ ದೇವನು ಪ್ರತಿಬೋಧಿಸಲು ಧರಣೇಂದ್ರನು ವೈರಭಾವವನ್ನು ಬಿಟ್ಟು ಸಮ್ಯಕ್ತ್ವವನ್ನು ಗ್ರಹಿಸಿದನು. ಆಮೇಲೆ ರೆಕ್ಕೆಗಡಿದ ಹಕ್ಕಿಗಳಂತೆ ವಿದ್ಯಾವಿಚ್ಛೇದಗೊಂಡ ಎಲ್ಲಾ ವಿದ್ಯಾಧರರನ್ನೂ ಕುರಿತು "ನೀವೆಲ್ಲಾ ಕೂಡಲೇ ಈ ಪರ್ವತದ ಮೇಲೆ ಸಂಜಯಂತ ಸ್ವಾಮಿಯ ಪಂಚಶತ ಧನುಷ್ಪ್ರಮಾಣದ ಪ್ರತಿಮೆಯನ್ನು ಸ್ಥಾಪಿಸಿ, ಅದರ ಪಾದಮೂಲದಲ್ಲಿ ಸೇವಿಸುತ್ತಿದ್ದರೆ ನಿಮಗೆ ಹಲಗಾಲದ ಮೇಲೆ ತುಂಬ ಕಷ್ಟದಿಂದ ನಿಮ್ಮ ವಿದ್ಯೆಗಳು ಸಿದ್ಧಿಸುತ್ತವೆ ; ಬೇರೆ ರೀತಿಯಿಂದ ಸಾಧ್ಯವಿಲ್ಲ ; ಇಂದಿನಿಂದ ವಿದ್ಯುದ್ದಂಷ್ಟ್ರನ ವಂಶದಲ್ಲಿ ಕೇವಲ ಸ್ತ್ರೀಯರಿಗೆ ಮಾತ್ರ ಪ್ರಜ್ಞಪ್ತಿ, ರೋಹಿಣಿ, ಗೌರೀವಿದ್ಯೆಗಳು ಸಿದ್ಧಿಸುತ್ತವೆಯಾಗಲಿ, ಪುರುಷರಿಗೆ ಶಕ್ಯವಿಲ್ಲ"—ಎಂದನು. ಈ ರೀತಿ ಹೇಳಲು ವಿದ್ಯಾಧರರು ಅದನ್ನು ನಮಸ್ಕಾರಪೂರ್ವಕವಾಗಿ ಸ್ವೀಕರಿಸಿದರು. ಯಥಾಯೋಗ್ಯವಿಧಿಯಿಂದ ವಿದ್ಯೆಗಳನ್ನು ಮತ್ತೆ ಸಾಧಿಸಿಕೊಂಡರು. ದೇವರು ಯಥಾಸ್ಥಾನಗಳಿಗೆ ಹೋದರು. ಧರಣೇಂದ್ರನ ಆದೇಶದಂತೆ ಆ ಪರ್ವತದ ಮೇಲೆ ನಾನಾ ಉಪಕರಣಗಳಿಂದ ಹೇಮರತ್ನಮಯದ ಸಂಜಯಂತಪ್ರತಿಮೆಯನ್ನು ಸ್ಥಾಪನೆಮಾಡಿಸಿದರು. ಹೃತವಿದ್ಯರಾದ್ದರಿಂದ ಲಜ್ಜಾವನತಮುಖರಾಗಿ ಆ ಪರ್ವತದಲ್ಲಿ ಅವರು ಕುಳಿತಿದ್ದುದರಿಂದ ಜನರು ಅದನ್ನು ಹ್ರೀಮಂತಗಿರಿಯೆಂದರು. ಮಥುರೆಯಲ್ಲಿ ರತ್ನವೀರ್ಯನೆಂಬರಸು ಇದ್ದನು. ಅವನ ಪತ್ನಿ ಮೇಘಮಾಲೆ. ಆದಿತ್ಯಾಭನೆಂಬ ಲಾಂತವೇಂದ್ರನು ಇವರಿಗೆ ಮೇರುವೆಂಬ ಮಗನಾದನು. ಅದೇ ರತ್ನವೀರ್ಯನ ಇನ್ನೊಬ್ಬ ಹೆಂಡತಿ ಅಮಿತಪ್ರಭೆಯಲ್ಲಿ ಧರಣೇಂದ್ರನು ಮಂದರನೆಂಬ ಮಗನಾದನು. ಇವರು ಯೌವನದಲ್ಲಿ ಸುಖಾನುಭವ ಮಾಡಿದ ಮೇಲೆ ಶ್ರೇಯಾಂಸಜಿನೇಂದ್ರನ ಶಿಷ್ಯರಾದರು. ಇವರಲ್ಲಿ ಮೇರುಮುನಿಯು ಕೇವಲಜ್ಞಾನ ಪಡೆದು ಮೋಕ್ಷಕ್ಕೆ ಸಂದನು. ಮಂದರಮುನಿ ಶ್ರೇಯಾಂಸಜಿನನ ಗಣಧರನಾದನು.

ಈ ಲೋಕದಲ್ಲಿ ತೀರ್ಥಂಕರ ಪದವನ್ನು ಬಯಸುವಾತನು, ಭವ್ಯಜೀವನು, ಈ ಸಂಜಯಂತ ಚರಿತವನ್ನು ಭಕ್ತಿಭಾವದಿಂದ ಆದರಿಸಲಿ, ಸ್ಮರಿಸಲಿ ಎಂದು ಗೌತಮಸ್ವಾಮಿ ಹೇಳುತ್ತಾನೆ.

೨೮. ಮೃಗಧ್ವಜ ಮಹಿಷೋಪಾಖ್ಯಾನ ವರ್ಣನ

ಗೌತಮನು ಶ್ರೇಣಿಕನಿಗೆ "ಈಗ ನೀನು ವೇಗವತೀವಿಯುಕ್ತನಾದ ವಸುದೇವನ ಮುಂದಿನ ವೃತ್ತಾಂತವನ್ನು ಕೇಳು" ಎಂದು ನುಡಿದು ಅದನ್ನು ಹೇಳಲು ಉಪಕ್ರಮಿಸಿದನು :

ಒಂದು ದಿನ ವಸುದೇವನು ಕಾಡಿನಲ್ಲಿ ನಿರಾಯಾಸವಾಗಿ ಸುತ್ತಾಡುತ್ತಿರುವಾಗ ತಾಪಸಾಶ್ರಮವೊಂದನ್ನು ಹೊಕ್ಕನು. ಅಲ್ಲಿ ಕೆಲ ತಪಸ್ವಿಗಳು ವಿಕಥೆಯಲ್ಲಿ ತೊಡಗಿದ್ದರು. ವಸುದೇವನು ಅವರನ್ನು ಕುರಿತು "ಅಯ್ಯಾ ತಪಸ್ವಿಗಳೇ, ನೀವು ಹೀಗೇಕೆ ರಾಜಕಥೆ ಯುದ್ಧಕಥೆಗಳಲ್ಲಿ ಆಸಕ್ತರಾಗಿದ್ದೀರಿ ? ತಪೋಯುಕ್ತರಾಗಿರುವುದು ತಪಸ್ಸು ; ಅದರಲ್ಲಿ ವಾಕ್ಸಂಯಮಾದಿಗಳಿರಬೇಕು" ಎಂದು ನುಡಿದನು. ಅವರು ಆಗಂತುಕನಲ್ಲಿ

ಆದರವನ್ನು ತೋರಿ ಹೀಗೆಂದರು : "ಅಯ್ಯಾ, ನಾವು ಹೊಸದಾಗಿ ದೀಕ್ಷೆಗೊಂಡವರು. ನಮಗೆ ಮುನಿವೃತ್ತಿ ತಿಳಿಯದು. ಇದೇ ಶ್ರಾವಸ್ತಿನಗರದಲ್ಲಿ ಏಣೀಪುತ್ರನೆಂಬ ಒಬ್ಬ ಅರಸುಂಟು. ಇವನಿಗೆ ಪ್ರಿಯಂಗುಸುಂದರಿ ಎಂಬವಳು ಮಗಳು. ಅವಳ ಸ್ವಯಂವರಕ್ಕೆ ದೊರೆ ನಮ್ಮನ್ನೆಲ್ಲ ಕರಸಿದ್ದನು. ಆದರೆ ಏತಕ್ಕೋ ಏನೋ ಆ ಕನ್ಯೆ ಯಾರನ್ನೂ ವರಿಸಲಿಲ್ಲ. ಕನ್ಯಾಲುಬ್ಧರಾದ ಕೆಲವರು ಅವಳು ದೊರೆಯದುದರಿಂದ ಲಜ್ಜಿತರಾಗಿ ದೊರೆಯ ಮೇಲೆ ಯುದ್ಧಮಾಡಲು ಸಿದ್ಧರಾದರು. ಆದರೆ ಏಣೀಪುತ್ರನು ಒಂಟಿಯಾಗಿಯೇ ಆ ಸಹಸ್ರಾರು ರಾಜರನ್ನು ಕೂಡಲೇ ವಿಕ್ಷುಬ್ಧಗೊಳಿಸಿ ಅಡಗಿಸಿಬಿಟ್ಟನು. ಆತ್ಮಾಭಿಮಾನಿಗಳಾದ ಕೆಲವರು ಸೋಲನ್ನೊಪ್ಪದೆ ರಣಾಂಗಣದಲ್ಲೇ ಮಡಿದರು. ಉಳಿದ ನಾವೆಲ್ಲ ಹೆದರಿ ಓಡಿಬಂದು ಈ ದಟ್ಟಡವಿಯಲ್ಲಿ ಸೇರಿಕೊಂಡಿದ್ದೇವೆ. ಅಯ್ಯಾ, ನಾವು ಧರ್ಮತತ್ತ್ವ ತಿಳಿದವರಲ್ಲ. ಆದ್ದರಿಂದ ನಮಗೆ ನೀನು ಧರ್ಮೋಪದೇಶಮಾಡು. ನಿನ್ನ ಮಧುರೋಕ್ತಿಗಳನ್ನು ಲಕ್ಷಿಸಿದರೆ ನೀನು ಧರ್ಮತತ್ತ್ವವನ್ನು ಚೆನ್ನಾಗಿ ಬಲ್ಲವನಂತೆ ತೋರುತ್ತೀಯೆ." ವಸುದೇವನು ಅವರಿಗೆ ಶ್ರಾವಕಧರ್ಮ ಮತ್ತು ಯತಿಧರ್ಮಗಳೆರಡನ್ನೂ ಬೋಧಿಸಿದನು. ಅವರು ಯಥಾರ್ಥವಾದ ಯತಿಚರ್ಯೆಯನ್ನು ಅಂಗೀಕರಿಸಿದರು.

ಅನಂತರ ವಸುದೇವನು ಪ್ರಿಯಂಗುಸುಂದರಿಯನ್ನು ತಾನು ಪಡೆಯಬೇಕೆಂಬ ಅಪೇಕ್ಷೆಯಿಂದ ಪ್ರೇರಿತನಾಗಿ ಆ ಶ್ರಾವಸ್ತಿಗೆ ಹೋದನು. ಆ ನಗರದ ಬಾಹ್ಯೋದ್ಯಾನದಲ್ಲಿ ಕಾಮದೇವನ ಮಂದಿರದ ಮುಂದೆ ನಿರ್ಮಿಸಿ ನಿಲ್ಲಿಸಿದ ಒಂದು ತ್ರಿಪಾದಿಯಾದ ಸ್ವರ್ಣಮಯಮಹಾಮಹಿಷವನ್ನು ನೋಡಿದನು. ಒಬ್ಬ ಬ್ರಾಹ್ಮಣನನ್ನು ಕುರಿತು "ಅಯ್ಯಾ. ಇಲ್ಲಿ ಈ ರತ್ನನಿರ್ಮಿತವಾದ ತ್ರಿಪಾದಿಮಹಿಷವನ್ನು ಏತಕ್ಕಾಗಿ ಮಾಡಿ ನಿಲ್ಲಿಸಿದೆ ? ಇದಕ್ಕೆ ಏನಾದರೂ ಕಾರಣವಿರಬೇಕಲ್ಲವೇ ?" ಎಂದು ಪ್ರಶ್ನಿಸಿದನು. ಬ್ರಾಹ್ಮಣನು ಆ ಸಂಗತಿಯನ್ನು ಹೀಗೆ ತಿಳಿಸಿದನು :

ಈ ನಗರದಲ್ಲಿ ಹಿಂದೆ ಇಕ್ಷ್ವಾಕುವಂಶೀಯನಾದ ಜಿತಶತ್ರುವೆಂಬರಸಿದ್ದನು. ಇವನ ಮಗ ಮೃಗಧ್ವಜ. ಇದೇ ಊರಿನಲ್ಲಿ ಕಾಮದತ್ತನೆಂಬ ಶ್ರೇಷ್ಠಿಯಿದ್ದನು. ಇವನು ಒಮ್ಮೆ ಗೋಶಾಲೆಯನ್ನು ನೋಡಲು ಹೋಗಿದ್ದಾಗ ಅಲ್ಲಿ ಒಂದು ದೀನಹೀನವಾದ ಎಮ್ಮೆಯ ಕರು ಅವನ ಪಾದಗಳ ಮೇಲೆ ಬಂದು ಬಿತ್ತು. ಆದರ ಈ ಆಶ್ಚರ್ಯಕರ ಕಾರ್ಯವನ್ನು ನೋಡಿ ಶ್ರೇಷ್ಠಿಯು ಗೋಶಾಲೆಯ ಅಧಿಕಾರಿಯಾದ ಪಿಂಡಾರನೆಂಬವನನ್ನು ಇದಕ್ಕೆ ಕಾರಣವೇನೆಂದು ಕೇಳಿದನು. ಆತನು ಇಂತೆಂದನು : "ಎಂದು ಇದು ಹುಟ್ಟಿತೋ ಅಂದಿನಿಂದಲೇ ಇದರ ಮೇಲೆ ನನಗೆ ತುಂಬ ದಯೆಯುಂಟಾಯಿತು. ವನಕ್ಕೆ ಹೋಗಿ ಮುನಿಯನ್ನು ದರ್ಶಿಸಿ ವಂದಿಸಿ ಇದರ ವಿಷಯವಾಗಿ 'ಮುನಿಯೇ, ಇದರ ಮೇಲೆ ನನಗೇಕೆ ಇಷ್ಟು ದಯೆ' ಎಂದು ಕೇಳಿದೆ. ಆ ಮುನಿ 'ಅಯ್ಯಾ ಗೋಪಾಲ, ನಾನಿದರ ಕಾರಣವನ್ನು ಹೇಳುತ್ತೇನೆ. ಕೇಳು. ಈ ಒಡಪಾಯಿ ಐದು ಬಾರಿ ಒಂದು ಎಮ್ಮೆಗೆ ಕರುವಾಗಿ ಹುಟ್ಟಿತು. ಹುಟ್ಟುತ್ತಲೇ ಇದನ್ನು ನೀನು ಕೊಂದು ಹಾಕುತ್ತಿದ್ದೆ. ಈಗ ಆರನೆಯ ಬಾರಿಯೂ ಅದೇ ಎಮ್ಮೆಗೆ ಇದು ಹುಟ್ಟಿದೆ. ಈಗ ಇದಕ್ಕೆ ಜಾತಿಸ್ಮರಣೆಯುಂಟಾಗಿ

ಹೆದರಿ ಥಟ್ಟನೆ ಎದ್ದು ನಿನ್ನ ಕಾಲುಗಳ ಮೇಲೆ ಬಂದುಬಿತ್ತು. ಕರುಗಳ ರಕ್ಷಣೆಯಾದರೂ ನಿನ್ನದೇ ಅಲ್ಲವೇ ? ' ಎಂದನು. ಅದರಿಂದ ನಾನು ಇಲ್ಲಿ ಮಗನಂತೆ ಇದನ್ನು ರಕ್ಷಿಸಿದ್ದೇನೆ. ಈಗ ಬದುಕಿರಬೇಕೆಂಬ ಇಚ್ಛೆಯಿಂದ ಇದು ಇಲ್ಲಿ ನಿಮ್ಮ ಪಾದಗಳ ಮೇಲೂ ಬಿದ್ದಿದೆ." ಗೋಪಾಲನ ಮಾತು ಕೇಳಿ ಆ ಶ್ರೇಷ್ಠಿ ದಯೆಯಿಂದ ಆ ಎಮ್ಮೆಯ ಕರುವನ್ನು ತನ್ನೊಂದಿಗೆ ನಗರಕ್ಕೆ ಕೊಂಡೊಯ್ದನು. ರಾಜನ ಅಧಿಕಾರಿಗಳಿಂದ ಅದಕ್ಕೆ ಅಭಯವನ್ನು ಪಡೆದು, ಅದನ್ನು ಭದ್ರಕವೆಂದು ಕರೆದನು. ಭದ್ರಕನು ದಿನದಿನಕ್ಕೆ ದೊಡ್ಡದಾಯಿತು. ಎಂದೋ ಒಂದು ದಿನ ರಾಜಪುತ್ರನಾದ ಮೃಗಧ್ವಜನು ಅನ್ಯಭವಸಂಬಂಧವಾದ ವೈರಬಂಧದಿಂದ ಆ ಎಮ್ಮೆಯ ಒಂದು ಕಾಲನ್ನು ಚಕ್ರದಿಂದ ಕತ್ತರಿಸಿಬಿಟ್ಟನು. ರಾಜನಿಗೆ ಇದು ತಿಳಿದಾಗ ಅವನು ಕೋಪಗೊಂಡು ಮೃಗಧ್ವಜನನ್ನು ಕೊಲ್ಲಲು ಅಪ್ಪಣೆ ಮಾಡಿದನು. ಮಂತ್ರಿ ಬುದ್ಧಿಶಾಲಿಯಾದ್ದರಿಂದ ಅವನನ್ನು ಕೊಲ್ಲಿಸದೆ ಉಪಾಯಾಂತರದಿಂದ ಅವನನ್ನು ವನಕ್ಕೆ ಕರೆದೊಯ್ದು ಅಲ್ಲಿ ಅವನಿಗೆ ಮುನಿದೀಕ್ಷೆ ಕೊಡಿಸಿದನು. ಭದ್ರಕನು ಶುಭಪರಿಣಾಮದಿಂದ ೧೮ನೆಯ ದಿನ ಸತ್ತುಹೋಯಿತು. ೨೧ನೆಯ ದಿನ ಶುದ್ಧಧ್ಯಾನದಿಂದ ಮೃಗಧ್ವಜಮುನಿ ಕೇವಲಜ್ಞಾನಿಯಾದನು. ದೇವತೆಗಳು ಆ ಕೇವಲಿಯ ಪೂಜೆ ಮಾಡಿದರು.

ತಂದೆಯಾದ ಜಿತಶತ್ರು ಮೃಗಧ್ವಜ ಕೇವಲಿಯನ್ನು ಮೃಗಧ್ವಜ ಮಹಿಷರ ವೈರಸಂಬಂಧವಾಗಿ ಪ್ರಶ್ನಿಸಿದನು. ಕಥಾಶ್ರವಣ ಕುತೂಹಲದಿಂದ ತನ್ನನ್ನು ಬಳಸಿದ ಸರ್ವರಿಗೂ ಮುನಿ ಅದನ್ನು ಹೀಗೆ ನಿರೂಪಿಸಿದನು : "ಹಿಂದೊಮ್ಮೆ ಅಲಕಾನಗರಿಯಲ್ಲಿ ಪ್ರಥಮ ವಾಸುದೇವ ತ್ರಿಪಿಷ್ಟನ ಪತಿವಾಸುದೇವನಾದ ಅಶ್ವಗ್ರೀವನೆಂಬ ವಿದ್ಯಾಧರರಾಜನಿದ್ದನು. ಇವನ ಮಂತ್ರಿ ಹರಿಶ್ಮಶ್ರು. ಇವನು ತರ್ಕಶಾಸ್ತ್ರಪಾರಂಗತ. ಕಠಿನಸ್ವಭಾವದವನು. ಏಕಾಂತವಾದಿ ನಾಸ್ತಿಕನು, ಪ್ರತ್ಯಕ್ಷೈಕ ಪ್ರಮಾಣನು. ಈತನು ತನ್ನ ಏಕಾಂತ ಕುತರ್ಕ ವಾದದಿಂದ ರಂಜಿತನಾಗಿದ್ದನು. ಆಗಮ ಅನುಮಾನ ಪ್ರಮಾಣಗಳ ಮೂಲಕ ಜ್ಞೇಯವಾದ ಜೀವಾದಿ ಪದಾರ್ಥಗಳ ಬಗೆಗೆ ಸದಾ ಪರಾಙ್ಮುಖನಾಗಿರುತ್ತಿದ್ದನು. ಪರಲೋಕ ಕಥೆಗಳಲ್ಲಿ ತಿರಸ್ಕೃತನೂ ದುಷ್ಕಥೆಗಳಲ್ಲಿ ಆಸಕ್ತನೂ ಕಾಮಭೋಗೈಕನಿಷ್ಠನೂ ಧರ್ಮದೂಷಕನೂ ಆಗಿದ್ದನು. ನಾಸ್ತಿಕನೂ ತೀರ್ಥಂಕರ ಚಕ್ರವರ್ತಿ ಮೊದಲಾದ ಮಹಾಪುರುಷರನ್ನು ದೂಷಿಸುವವನೂ ದುಷ್ಪ್ರವರ್ತನೆಯುಳ್ಳವನೂ ಆದ ಈತನ ಸಂಸರ್ಗದಿಂದ ಅಶ್ವಗ್ರೀವನೂ ನಾಸ್ತಿಕನಾಗಿ ಹೋದನು ; ಧರ್ಮವಿಮುಖನಾಗಿ ಹೋದನು. ಒಮ್ಮೆ ಎಂದೋ ಯುದ್ಧದಲ್ಲಿ ಅಶ್ವಗ್ರೀವನನ್ನು ತ್ರಿಪಿಷ್ಟವಾಸುದೇವನೂ, ಹರಿಶ್ಮಶ್ರುವನ್ನು ವಿಜಯಬಲದೇವನೂ ಹೊಡೆದುರುಳಿಸಿದರು. ಹಾಗೆ ಅವರು ಸತ್ತು ಏಳನೆಯ ನರಕಕ್ಕೆ ಹೋದರು. ಅಯ್ಯಾ ರಾಜಾ. ಹಲಗಾಲದವರೆಗೆ ಹಲವು ಯೋನಿಗಳಲ್ಲಿ ತೊಳಲುತ್ತ ಅಶ್ವಗ್ರೀವ ಜೀವನು ಮೃಗಧ್ವಜನಾದ ನಾನಾಗಿದ್ದೇನೆ. ಹರಿಶ್ಮಶ್ರುವಿನ ಜೀವ ಭದ್ರಕವೆಂಬ ಎಮ್ಮೆಯಾಗಿದೆ. ಪೂರ್ವಕ್ರೋಧದ ಸಂಸ್ಕಾರದಿಂದ ನಾನೇ ಆ ಎಮ್ಮೆಯನ್ನು ಹೊಡೆದು ಕೊಂದೆ. ಅಕಾಮನಿರ್ಜರೆಯ ಪ್ರಭಾವದಿಂದ ಆ ಎಮ್ಮೆ ಲೋಹಿತ

ನೆಂಬ ಅಸುರನಾಗಿದೆ. ಈ ಲೋಹಿತಾಸುರ ಈಗ ವಂದನಾಭಕ್ತಿನಿಮಿತ್ತ ಇಲ್ಲಿಗೆ ಬಂದಿದ್ದಾನೆ. ದೇವವಿಭೂತಿಯಿಂದ ಕೂಡಿ ಇಲ್ಲೇ ಕುಳಿತಿದ್ದಾನೆ. ಈ ಕ್ರೋಧದ ಸಂಸ್ಕಾರ ಪ್ರಾಣಿಗಳನ್ನು ಕುರುಡಾಗಿಸುತ್ತದೆ. ಮೋಕ್ಷಕಾಂಕ್ಷಿಗಳು ಕ್ರೋಧವನ್ನು ತಡೆದು ಶಾಂತರಾಗಬೇಕು.''

ಮೃಗಧ್ವಜನ ಕಥನವನ್ನು ಕೇಳಿ ಜಿತಶತ್ರು ಮುಂತಾದ ಅನೇಕ ಅರಸರು ದೀಕ್ಷೆಗೊಂಡರು. ಮಹಿಷಾಸುರನು ಶಾಂತನಾದನು. ಸಭಾಸದರು ಲೌಲ್ಯವನ್ನು ಬಿಟ್ಟು ನಿಃಶಲ್ಯರಾದರು. ದೇವದಾನವರು ಕೇವಲಿಯನ್ನು ವಂದಿಸಿ ತೆರಳಿದರು. ಮೃಗಧ್ವಜನು ಸಿದ್ಧಸ್ಥಾನವನ್ನು ಅಲಂಕರಿಸಿದನು.

"ಯಾವ ಭವ್ಯಜೀವನು ಈ ಮಹಿಷಮೃಗಧ್ವಜವೃತ್ತಾಂತವನ್ನು ಸದಾ ಶುದ್ಧಮನದಿಂದ ಧಾರಣೆಮಾಡುತ್ತಾನೋ ಅವನು ದರ್ಶನವಿಶುದ್ಧಿಯನ್ನು ಪಡೆಯುತ್ತಾನೆ" - ಎಂದು ಗೌತಮಸ್ವಾಮಿ ಹೇಳುತ್ತಾನೆ.

೨೯. ಬಂಧುಮತೀ ಪ್ರಿಯಂಗುಸುಂದರೀಲಾಭ ವರ್ಣನ

ಕಾಮದತ್ತ ಸೆಟ್ಟಿ ನಗರದಲ್ಲಿ ಜನಸಂಚಾರ ಹೆಚ್ಚಾಗಿರುವ ಸ್ಥಳದಲ್ಲಿ ಜಿನಾಲಯದ ಮುಂದೆ ಮೃಗಧ್ವಜ-ಮಹಿಷರ ಪ್ರತಿಮೆಗಳನ್ನು ಸ್ಥಾಪಿಸಿದನು. ಹಾಗೆಯೇ ಪ್ರಜೆಗಳ ಕುತೂಹಲಕ್ಕೆಂದು ಅದೇ ಜಿನಾಲಯದಲ್ಲಿ ಕಾಮದೇವನ ಮತ್ತು ರತಿಯ ಪ್ರತಿಮೆಗಳನ್ನೂ ನಿಲ್ಲಿಸಿದ್ದನು. ರತಿ ಮದನರ ಮೂರ್ತಿಗಳನ್ನು ನೋಡಲೆಂದು ಜನರು ಆ ಜಿನಾಲಯಕ್ಕೆ ಬರುತ್ತಾರೆ ; ಅಲ್ಲಿಯೇ ಸ್ಥಾಪಿಸಿದ ಭದ್ರಕ-ಮೃಗಧ್ವಜರ ವೃತ್ತಾಂತವನ್ನು ಕೇಳುತ್ತಾರೆ ; ಹಾಗೆ ಕೇಳಿ ಪ್ರತಿದಿನವೂ ಅನೇಕರು ಜಿನಧರ್ಮವನ್ನು ಸ್ವೀಕರಿಸುತ್ತಾರೆ. ಈ ಜಿನಗೃಹ ಕಾಮದೇವಗೃಹವೆಂದು ಖ್ಯಾತವಾದ್ದು ; ಕುತೂಹಲದಿಂದ ಬರುವ ಮಂದಿ ಜಿನಮತವನ್ನು ಸ್ವೀಕರಿಸಲು ಪ್ರೇರಕವಾದ್ದು. ಅದೇ ಕಾಮದತ್ತನ ವಂಶದಲ್ಲಿ ಅನೇಕರು ಹುಟ್ಟಿ ವ್ಯತಿಕ್ರಾಂತರಾಗಲು ಈಗ ಕಾಮದೇವನೆಂಬ ಶ್ರೇಷ್ಠಿ ಹುಟ್ಟಿದ್ದಾನೆ. ಈತನಿಗೆ ಬಂಧುಮತಿಯೆಂಬ ಕನ್ಯೆಯುಂಟು. ತಂದೆಯು ಪ್ರಶ್ನಿಸಲಾಗಿ ದೈವಜ್ಞನು "ಯಾವಾತನು ಈ ಸ್ಮರಗೃಹದ ದ್ವಾರವನ್ನು ಉದ್ಘಾಟಿಸಿ ಹೋಗಿ ಸ್ಮರಪೂಜೆಯನ್ನು ಸಲ್ಲಿಸುವನೋ ಆತನೇ ಇವಳಿಗೆ ಪತಿಯಾಗುತ್ತಾನೆ'' ಎಂದು ತಿಳಿಸಿದ್ದಾನೆ.

ಹೀಗೆ ಬ್ರಾಹ್ಮಣನು ನುಡಿಯಲು ವಸುದೇವನು ಅದನ್ನಾಲಿಸಿ ಆ ಕಾಮದೇವಗೃಹದ್ವಾರವನ್ನು ಸೇರಿ ಖಿ ಅಗುಳಿಗಳಿಂದ ದುರ್ಭೇದ್ಯವಾಗಿದ್ದ ಆ ಬಾಗಿಲನ್ನು ತೆರೆದು ಕೂಡಲೇ ಒಳಗೆ ಹೋದನು. ಮೊದಲು ಜಿನಪೂಜೆ ಸಲ್ಲಿಸಿ ಆಮೇಲೆ ರತಿ ಮನ್ಮಥರ ಪೂಜೆ ಮಾಡಿದನು. ಅದೇ ವೇಳೆಗೆ ಕಾಮದೇವ ಸೆಟ್ಟಿ ಅರ್ಚನಾರ್ಥವಾಗಿ ಅಲ್ಲಿಗೆ ಬಂದು ಒಳಹೊಕ್ಕ ವಸುದೇವನನ್ನು ಕಂಡನು. ದೈವಜ್ಞನ ಮಾತು ದಿಟವಾದುದನ್ನು ಕಂಡು ಹರ್ಷಿಸಿ ಆತನಿಗೆ ತನ್ನ ಮಗಳಾದ ಬಂಧುಮತಿಯನ್ನಿತ್ತನು. ನಗರದ ನಾಲ್ದೆಸೆಗಳಲ್ಲಿಯೂ ''ಕಾಮದೇವ ಶ್ರೇಷ್ಠಿಗೆ ಕಾಮದೇವನು ಕಾಮದೇವನಂಥ ಅಳಿಯನನ್ನು

ನೀಡಿದ್ದಾನೆ'' ಎಂಬ ವಾರ್ತೆ ಹರಡಿತು. ಆ ಸುದ್ದಿಯಿಂದ ಪ್ರೇರಿತನಾಗಿ ರಾಜನೂ ಅಂತಃಪುರದವರೂ ಪೌರರೂ ತಮ್ಮ ಇಷ್ಟಾನುಸಾರ ವಸುದೇವನನ್ನು ನೋಡಿದರು. ಪ್ರಿಯಂಗುಸುಂದರಿಯೂ ಅವನನ್ನು ಹೇಗೋ ನೋಡಿದಳು. ನೋಡಿ ಅವನಲ್ಲಿ ಅನುರಕ್ತೆಯಾದಳು. ಅವಳಿಗೆ ಅವನದೇ ಚಿಂತೆಯಾಯಿತು. ಅವಳು ತನ್ನ ಸಖಿ ಬಂಧುಮತಿಯನ್ನು ರಹಸ್ಯವಾಗಿ ಕರಸಿಕೊಂಡು ''ಸಖಿ, ನೀನು ನಿನ್ನ ಪತಿಗೆ ಪ್ರೇಯಸಿಯಾಗಿದ್ದೀಯೆ, ಈ ಚಾತುರ್ಯ ನಿನಗೆ ಹೇಗೆ ಸಾಧ್ಯವಾಯಿತು ?'' ಎಂದು ಕೇಳಿದಳು. ಮುಗ್ಧೆ ಬಂಧುಮತಿ ವಿದಗ್ಧನಾದ ವಸುದೇವನ ಚೇಷ್ಟಿತಗಳನ್ನು ಆಕೆಗೆ ವರ್ಣಿಸಿದಾಗ ಆಕೆ ಮೋಹಪರವಶೆಯಾದಳು. ಅವಳು ದ್ವಾರಪಾಲಕನ ಮೂಲಕ ''ನೀನು ನನ್ನೊಂದಿಗೆ ಸಮಾಗಮವನ್ನು ಪಡೆ. ಇಲ್ಲವೆ ಸ್ತ್ರೀವಧೆಯ ಹೊಣೆಯನ್ನು ಒಪ್ಪಿಕೋ'' ಎಂದು ವಸುದೇವನಿಗೆ ಸಂದೇಶವನ್ನು ಕಳುಹಿದಳು. ವಸುದೇವನು "ಈಯೆರಡೂ ಅನ್ಯಾಯ'' ಎಂದು ಆಲೋಚಿಸಿ ಚಿಂತೆಗೊಳಗಾದನು. ಆದರೆ ಅವನು ಚತುರನಾದ್ದರಿಂದ ಯಾವುದೋ ಉಪಾಯಾಂತರದಿಂದ ಕೆಲಸಮಯದವರೆಗೆ ತಡೆಯುವಂತೆ ಅವಳಿಗೆ ಸುದ್ದಿ ಕಳುಹಿದನು. ಪ್ರಿಯಂಗುಸುಂದರಿಗೆ ಅವನು ದೊರೆಯುವನೆಂಬ ಆಸೆಯುಂಟಾಗಿ, ಅದೇ ಆಸೆಯಿಂದ ರಾತ್ರಿ ಶಯ್ಯೆಯ ಮೇಲಿದ್ದು, ತನ್ನ ಮನೋರಥ ನೆರವೇರಿತೆಂದೇ ಬಗೆದಳು.

ಒಂದು ದಿನ ರಾತ್ರಿ ವಸುದೇವನು ಬಂಧುಮತಿಯನ್ನಪ್ಪಿ ಮಲಗಿರುವಾಗ ಜ್ವಲನಪ್ರಭೆಯೆಂಬ ನಾಗಕನ್ಯೆಯೊಬ್ಬಳು ಬಂದು ಅವನನ್ನು ಎಬ್ಬಿಸಿದಳು. ಅವನೆದ್ದು ದೇಹಕಾಂತಿ ಭೂಷಣಕಾಂತಿಗಳಿಂದ ತೊಳಗುತ್ತಿದ್ದ ನಾಗಚಿಹ್ನಾಂಕಿತೆಯಾಗಿದ್ದ ಆ ಸ್ತ್ರೀಯನ್ನು ನೋಡಿ ''ಇವಳಾರು, ಇಲ್ಲಿಗೆ ಬಂದವಳು'' ಎಂದು ವಿಚಾರ ಮಾಡತೊಡಗಿದನು. ಪ್ರಿಯಾಲಾಪ ಚತುರೆಯಾದ ಆ ಕನ್ಯೆ ಮೆಲ್ಲಗೆ ಅವನನ್ನು ಕರೆದು, ಅತಿವಿನಯದಿಂದ ಅಶೋಕವನಕ್ಕೆ ಕರೆದೊಯ್ದು ಹೀಗೆ ನಿರೂಪಿಸಿದಳು : ''ಅಯ್ಯಾ, ನಾನು ಬಂದ ಕಾರಣವನ್ನು ನೆಮ್ಮದಿಯಾಗಿ ಕೇಳು ; ಅದು ನಿನ್ನ ಕಿವಿಯನ್ನು ಅಮೃತರಸದಿಂದ ತಣಿಸುತ್ತದೆ. ಚಂದನವನವೆಂಬ ನಗರದಲ್ಲಿ ಅಮೋಘದರ್ಶನನೆಂಬ ಅರಸಿದ್ದನು. ಅವನ ಪತ್ನಿ ಚಾರುಮತಿ. ಇವರ ಮಗ ಚಾರುಚಂದ್ರ. ಅದೇ ನಗರದಲ್ಲಿ ರಂಗಸೇನೆಯೆಂಬ ಒಬ್ಬ ವೇಶ್ಯೆಯಿದ್ದಳು. ಇವಳ ಮಗಳು ಕಾಮಪತಾಕಾ. ಈಕೆ ಚೆಲುವೆ. ಒಮ್ಮೆ ಧರ್ಮಾಧರ್ಮ ವಿವೇಕಶೂನ್ಯನಾದ ಅರಸನು ಯಜ್ಞದೀಕ್ಷೆಗೆ ತೊಡಗಿದನು. ಅದಕ್ಕೆ ಜಟಾಧಾರಿಗಳಾದ ಕೌಶಿಕಾದಿ ತಪಸ್ವಿಗಳು ಬಂದರು. ಆ ಯಜ್ಞೋತ್ಸವದಲ್ಲಿ ರಾಜಾಜ್ಞೆಯಂತೆ ಕಾಮಪತಾಕೆ ನರ್ತಿಸಿದಳು. ಆ ನೃತ್ಯವು ಚೇತೋಹಾರಿಯಾಗಿದ್ದು ಶಾಸ್ತ್ರಕುಶಲರೂ ಕಂದಮೂಲಫಲಾಶಿಗಳೂ ಆದ ಕೌಶಿಕಾದಿಗಳೇ ಕ್ಷುಬ್ಧರಾದರು. ಎಂದ ಮೇಲೆ ಉಳಿದವರ ಮಾತೇನು? ಯಜ್ಞಕಾರ್ಯ ಮುಗಿದ ಮೇಲೆ ಚಾರುಚಂದ್ರನು ಆ ವೇಶ್ಯಾಪುತ್ರಿಯನ್ನು ತಾನು ಸ್ವೀಕರಿಸಿದನು. ಆಗಲೇ ಕೌಶಿಕ ಋಷಿಯ ಶಿಷ್ಯರು ಕೆಲವರು ರಾಜನನ್ನು ಭಕ್ತನೆಂದು ತಿಳಿದು ಕನ್ಯೆಯನ್ನು ಬೇಡಲು ಅಲ್ಲಿಗೆ ಬಂದರು. ಕೌಶಿಕಋಷಿಗಾಗಿ ಅವರು ಕಾಮಪತಾಕೆಯನ್ನು

ಬೇಡಲು, ಅರಸನು ಆ ಕನ್ಯೆಯನ್ನು ರಾಜಕುಮಾರನು ವರಿಸಿದನೆಂದೂ ಅವರೆಲ್ಲ ಹಿಂದಿರುಗಬೇಕೆಂದೂ ಹೇಳಿಬಿಟ್ಟನು. ಅವರು ಹೊರಟು ಹೋದರು. ಕನ್ಯೆ ದೊರೆಯದೆ ಕೌಶಿಕನ ಮನಸ್ಸಿಗೆ ತುಂಬ ಜುಗುಪ್ಸೆಯಾಯಿತು. ಅವನು ರಾಜನ ಬಳಿಗೆ ಹೋಗಿ “ಅಯ್ಯಾ ರಾಜಾ, ನೀನು ನನಗೆ ಕನ್ಯೆಯನ್ನು ಕೊಡಲಿಲ್ಲ. ಇದರಿಂದ ನಾನು ಹಾವಾಗಿಯಾದರೂ ನಿನ್ನನ್ನು ಕೊಲ್ಲುತ್ತೇನೆ” ಒಂದು ಕೆರಳಿ ನುಡಿದು ಹೊರಟುಹೋದನು. ಅದನ್ನು ಕೇಳಿ ದೊರೆಗೆ ಹೆದರಿಕೆಯಾಯಿತು. ಅವನು ಮಗನಿಗೆ ರಾಜ್ಯಾಭಿಷೇಕಮಾಡಿ ಅವ್ಯಕ್ತಗರ್ಭೆಯಾದ ರಾಣಿ ಚಾರುಮತಿಯೊಂದಿಗೆ ತಪಸ್ವಿಯಾದನು. ಕೆಲ ಸಮಯದ ಮೇಲೆ ತಪಸ್ವಿನಿ ಚಾರುಮತಿ ಋಷಿದತ್ತೆಯೆಂಬ ಮಗಳನ್ನು ಹಡೆದಳು. ಈ ಋಷಿದತ್ತೆ ಒಮ್ಮೆ ಚಾರಣ ಮುನಿಯೊಬ್ಬನಲ್ಲಿ ಅಣುವ್ರತಗಳನ್ನು ಧರಿಸಿದಳು. ಕೆಲಸಮಯಕ್ಕೆ ಈಕೆ ಯೌವನವತಿಯಾದಳು.

ಒಮ್ಮೆ ಶಾಂತಾಯುಧನ ಮಗನಾದ, ಶ್ರಾವಸ್ತಿಯ ಅರಸು ಶೀಲಾಯುಧನು ಆ ತಪಸ್ವಿಗಳ ಆಶ್ರಮಕ್ಕೆ ಬಂದನು.ಅವನನ್ನು ನೋಡಿ ಒಂಟಿಯಾಗಿದ್ದ ಋಷಿದತ್ತೆ ಅವನಿಗೆ ಉತ್ತಮಾಹಾರವಿತ್ತು ಆತಿಥ್ಯ ನಡಸಿದಳು. ರೂಪವಂತರಾದ ಆಯಿಬ್ಬರೂ ಪರಸ್ಪರ ಅನುರಕ್ತರಾಗಿ ತಂತಮ್ಮ ಪೂರ್ವ ಮರ್ಯಾದೆಯನ್ನು ಬಿಟ್ಟರು. ಕಾಮಪಾಶವಶನಾದ ಶೀಲಾಯುಧನು ರಹಸ್ಯವಾಗಿ ಋಷಿದತ್ತೆಯನ್ನು ಸೇರಿ ತನಗೆ ಒಲಿದಿದ್ದ ಅವಳೊಂದಿಗೆ ಯಥಾಕಾಮನಾಗಿ ರಮಿಸಿದನು. ಆಮೇಲೆ ಭಯಗ್ರಸ್ತೆಯಾದ ಆ ತಾಪಸಕನ್ಯೆ ರಾಜನನ್ನು ಕುರಿತು “ಆರ್ಯಪುತ್ರ, ನಾನು ಋತುಮತಿ; ಒಂದು ಪಕ್ಷ ನಾನು ಗರ್ಭವತಿಯಾಗಿಬಿಟ್ಟರೆ ಏನುಮಾಡಲಿ ಹೇಳು” ಎಂದಳು. ವ್ಯಾಕುಲಚಿತ್ತೆಯಾದ ಆ ಋಷಿದತ್ತೆ ಹಾಗೆ ಹೇಳಲು, ಶೀಲಾಯುಧನು “ಪ್ರಿಯೇ, ವ್ಯಾಕುಲಗೊಳ್ಳಬೇಡ, ನಾನು ಇಕ್ಷ್ವಾಕುಕುಲಜನಾದ ಶ್ರಾವಸ್ತಿಯ ಅರಸು ಶೀಲಾಯುಧ. ನೀನು ಸಪುತ್ರಕಳಾಗಿ ನಗರಕ್ಕೆ ಬಂದು ತಪ್ಪದೆ ನನಗೆ ದರ್ಶನ ಕೊಡಬೇಕು” ಎಂದನು. ಹೀಗೆ ರಹಸ್ಯದಲ್ಲಿ ಆಶ್ವಾಸನೆಯಿತ್ತು, ಆಕೆಯನ್ನಪ್ಪಿ ವಿರಹಿಯಾಗಿ ಅಲ್ಲಿಂದ ಹೊರಡಲು ಉದ್ಯುಕ್ತನಾಗುತ್ತಿದ್ದಂತೆ ಅವನ ಸೇನೆ ಆ ತಾಪಸಾಶ್ರಮವನ್ನು ಸಮೀಪಿಸಿ ಬಂತು. ಆ ಸೈನ್ಯವನ್ನು ನೋಡಿ ರಾಜನು ಹರ್ಷಿಸಿ ಅದರೊಂದಿಗೆ ನಗರಕ್ಕೆ ಬಂದನು. ಇತ್ತ ಲೋಕವರ್ತನೆಯನ್ನು ಬಲ್ಲ ಋಷಿದತ್ತೆ ಲಜ್ಜೆಪಡದೆ ತನ್ನ ಮಾತಾಪಿತರಿಗೆ “ನಾನು ನಿರ್ಲಜ್ಜಳಾಗಿ ರಹಸ್ಯದಲ್ಲಿ ಶೀಲಾಯುಧನ ಪತ್ನಿಯಾದೆ, ಗರ್ಭವತಿಯಾಗಿರುವೆ” ಎಂದು ನಡೆದ ಸಂಗತಿ ಹೇಳಿಬಿಟ್ಟಳು. ಆಮೇಲೆ ನವಮಾಸ ನೆರೆದು ಅವಳಿಗೆ ಪತಿಯನ್ನೇ ಹೋಲುವಂಥ ಪುತ್ರನೊಬ್ಬನಾದನು. ಪ್ರಸವ ಸಮಯದಲ್ಲಿ ಅವಳಿಗೆ ಕಷ್ಟವಾಗಿ, ಹಡೆಯುತ್ತಲೇ ತೀರಿಕೊಂಡಳು ; ಸಮ್ಯಗ್ದರ್ಶನ ಪ್ರಭಾವದಿಂದ ಜ್ವಲನಪ್ರಭವಲ್ಲಭಾ ಎಂಬ ನಾಗಕುಮಾರಿಯಾದಳು. ಅವಳೇ ನಾನು. ನನಗೆ ಭವಪ್ರತ್ಯಯ ಅವಧಿಜ್ಞಾನವಿದ್ದುದರಿಂದ ಪೂರ್ವಭವದ ವೃತ್ತಾಂತವನ್ನೆಲ್ಲ ತಿಳಿದವಳಾಗಿ ದಯಾಸ್ನೇಹಗಳಿಂದ ಪ್ರೇರಿತಳಾಗಿ ತಾಯಿತಂದೆಗಳಿರುವ ತಪೋವನಕ್ಕೆ ಹೋದೆ. ಅಲ್ಲಿ ಶೋಕಸಂತಪ್ತರಾದ ತಾಯಿತಂದೆಗಳನ್ನು ಸಂತೈಸಿ, ನಾನು ಹೆಣ್ಣುಜಿಂಕೆ

ಯಾಗಿ ಆ ನನ್ನ ಮಗನಿಗೆ ಮೊಲೆಯೂಡಿಸಿದೆ. ಕೌಶಿಕ ಋಷಿಯ ಜೀವ ನಿದಾನಕಾರಣವಾಗಿ ಸರ್ಪವಾಗಿತ್ತು ; ಪೂರ್ವವೈರದ ದೆಸೆಯಿಂದ ನಮ್ಮ ತಂದೆಯನ್ನು ಕಚ್ಚಿತು. ಆದರೆ ನಾನು ಅಮೋಘಮಂತ್ರಬಲದಿಂದ ನಮ್ಮ ತಂದೆಯನ್ನು ಬದುಕಿಸಿದೆ. ಆಮೇಲೆ ಕ್ರೋಧದೂಷಿತನಾದ ನಮ್ಮ ತಂದೆಗೆ ನಾನು ಧರ್ಮೋಪದೆಶವಿತ್ತೆ. ಅವನು ಸತ್ತು ಉತ್ತಮಗತಿಗೆ ಸಂದನು. ಆಮೇಲೆ ನಾನು ತಾಪಸಿಯ ರೂಪದಲ್ಲಿ ಆ ಮಗನನ್ನು ಎತ್ತಿಕೊಂಡು ಶೀಲಾಯುಧನಲ್ಲಿಗೆ ಹೋದೆ. ವೈಭವಯುತನೂ ನಯಾನ್ವಿತನೂ ಆದ ಆತನನ್ನು ಕುರಿತು ನಾನು “ರಾಜೇಂದ್ರ, ರಾಜಲಕ್ಷಣರಾಜಿತನಾದ ಇವನು ನಿನ್ನ ಮಗ. ಇವನು ನಿನ್ನ ತೀರಿಕೊಂಡ ಗೃಹಿಣಿಯಿಂದ ತ್ಯಕ್ತನಾದವನು. ಇವನ ಹೆಸರು ಏಣಿಪುತ್ರ. ಇವನನ್ನು ಪರಿಗ್ರಹಿಸು”ಎಂದೆನು. ಅದಕ್ಕೆ ಅವನು“ನಾನು ಅಪುತ್ರಕನು, ನನಗೆ ಮಗನೆಂದರೇನು ? ಎಲೆ ತಾಪಸಿ, ಈ ಮಗು ನಿನಗೆ ಹೇಗೆ ದೊರೆಯಿತು, ಸರಿಯಾಗಿ ಹೇಳು’ ಎಂದನು. ಆಗ ನಾನು ಸಾಭಿಜ್ಞಾನಪೂರ್ವಕವಾಗಿ ಸಮಸ್ತವೃತ್ತಾಂತವನ್ನೂ ಅವನಿಗೆ ಹೇಳಿದೆ. ಅಲ್ಲದೆ ಆಗ ಸತ್ತವಳು ಈಗ ದೇವಿಯಾಗಿದ್ದೇನೆಂಬುದನ್ನೂ ಹೇಳಿದೆ. ನನ್ನ ಈ ಕಥನದಿಂದ ವಿಶ್ವಾಸಗೊಂಡು ಶೀಲಾಯುಧನು ಆ ರಾಜಪುತ್ರನನ್ನು ಪರಿಗ್ರಹಿಸಿದನು. ಆ ಪುತ್ರನು ಬೆಳೆಯತೊಡಗಿದನು. ಪುತ್ರಸ್ನೇಹ ಮೋಹಿತೆಯಾಗಿ ನಾನು ಅವನ ಪಾಲನೆಯಲ್ಲೇ ಇರುತ್ತಿದ್ದೆ. ರಾಜನ ಈಪ್ಸಿತವನ್ನು ನೆರವೇರಿಸುತ್ತಿದ್ದೆ. ಒಮ್ಮೆ ಶೀಲಾಯುಧನು ಏಣೀಪುತ್ರನನ್ನು ರಾಜ್ಯದಲ್ಲಿ ನಿಲ್ಲಿಸಿ, ತಾನು ದೀಕ್ಷೆಗೊಂಡು ಮುನಿಯಾದನು. ಸತ್ತು ಸ್ವರ್ಗಕ್ಕೆ ಸಂದನು. ಆಮೇಲೆ ಅರಸನಾದ ಏಣೀಪುತ್ರನಿಗೆ ಪ್ರಿಯಂಗುಸುಂದರಿಯೆಂಬ ಮಗಳಾದಳು. ದೊರೆ ಅವಳ ಸ್ವಯಂವರವನ್ನು ಏರ್ಪಡಿಸಿದನು. ಭೋಗವಿರಕ್ತೆಯಾದ ಅವಳು ಸರ್ವರಾಜಪುತ್ರರನ್ನೂ ನಿರಾಕರಿಸಿಬಿಟ್ಟಳು. ಆದರೆ ಅವಳು ಎಂದು ರಾಜಗೃಹದಲ್ಲಿ ಬಂಧುಮತಿಯೊಂದಿಗೆ ನಿನ್ನನ್ನು ಕಂಡಳೋ ಅಂದಿನಿಂದಲೂ ಕಾಮಬಾಣಪೀಡಿತೆಯಾಗಿ ಕಷ್ಟದಿಂದ ಶರೀರವನ್ನು ಧರಿಸಿದ್ದಾಳೆ. ಆದ್ದರಿಂದ ನೀನು ನನ್ನ ಮಾತಿಗೊಪ್ಪಿ ಅವಳನ್ನು ಕೂಡುವವನಾಗು. ಆ ಕನ್ಯೆ ಅದತ್ತಳೆಂದು ಆಶಂಕೆ ಬೇಡ. ನಾನು ನಿನಗೆ ಅವಳನ್ನು ಕೊಟ್ಟಿದ್ದೇನೆ. ಇದು ಅವಳ ಪಿತೃಬಾಂಧವರು ಕೊಟ್ಟಂತೆಯೇ. ಕಾಮದೇವಗೃಹದಲ್ಲಿ ನಿಮ್ಮಿಬ್ಬರ ಸಮಾಗಮವಾಗಲಿ. ಇದಕ್ಕಾಗಿ ನಾಳೆಯ ರಾತ್ರಿಗೆ ಸಂಕೇತವು ನಿಶ್ಚಯವಾಗಿದೆ ದೇವತಾದರ್ಶನವೆಂಬುದು ಅಮೋಘದರ್ಶನ. ಇದರಿಂದ ನೀನು ನನ್ನಲ್ಲಿ ವರ ಬೇಡಿ ಯಾವುದೇ ಇಷ್ಟಾರ್ಥವನ್ನು ಪಡೆ.”

ವಸುದೇವನು ವಿನಯದಿಂದ “ದೇವಿ. ನಾನು ನಿನ್ನನ್ನು ಸ್ಮರಿಸಿದಾಗ ನಿನಗೆ ನನ್ನ ನೆನಪಿರಲಿ” ಎಂದನು. ಅವಳು “ಹಾಗೆಯೇ ಆಗಲಿ” ಎಂದಳು. ಆಕೆ ಅತ್ತ ಅದೃಶ್ಯಳಾಗುತ್ತಲೂ ವಸುದೇವನು ಇತ್ತ ತನ್ನ ನಿವಾಸಕ್ಕೆ ಬಂದನು. ದೇವತೆಯ ಆದೇಶಾನುಸಾರ ವಸುದೇವನು ರಹಸ್ಯದಲ್ಲಿ ಕಾಮದೇವಗೃಹಕ್ಕೆ ಹೋಗಿ ಪ್ರಿಯಂಗುಸುಂದರಿಯನ್ನು ಸೇರಿದನು. ಅವಳ ಮುಖವರಳಿತು. ಅವಳನ್ನು ಗಾಂಧರ್ವವಿವಾಹವಿಧಿಯಿಂದ ವಸುದೇವನು ಪರಿಗ್ರಹಿಸಿದನು. ಅವಳ ಮನೆಯಲ್ಲಿಯೇ ವಸುದೇವನಿಗೆ ಅನೇಕ ದಿನಗಳು

ಕಳೆದುವು. ಅನ್ಯೋನ್ಯಪ್ರೇಮಬದ್ಧರಾದ ಆ ದಂಪತಿಗಳ ಸಮಾಗಮವನ್ನು ದೇವಿಯು ರಹಸ್ಯವಾಗಿ ಮಾಡಿಸಿದಳು ಎಂಬುದನ್ನು ತಿಳಿದು ಅರಸನು ಸಂತುಷ್ಟನಾಗಿ, ಪ್ರಕಟವಾಗಿ ಅವರ ವಿವಾಹವನ್ನು ಮಾಡಿದನು. ವಸುದೇವನು ಆಕೆಯೊಂದಿಗೆ ಸುಖದಲ್ಲಿರುತ್ತಿದ್ದನು. ಹೀಗೆ ವಸುದೇವನು ಬಂಧುಮತಿ ಪ್ರಿಯಂಗುಸುಂದರಿಯರ ಪ್ರೀತ್ಯಾದರಗಳಿಂದಲೂ, ಪೌರರ ಗೌರವಭಾವನೆಯಿಂದಲೂ ಕೂಡಿ ಶ್ರಾವಸ್ತಿನಗರದಲ್ಲಿ ಹಲಗಾಲದವರೆಗೆ ಇರುತ್ತಿದ್ದನು.

೩೦. ಪ್ರಭಾವತೀಲಾಭ ವರ್ಣನ

ಕಾರ್ತಿಕದ ಹುಣ್ಣಿಮೆಯಂದು ವಸುದೇವನು ಪ್ರಿಯಂಗುಸುಂದರಿಯೊಡನೆ ರಮಿಸಿ ಅವಳ ಭುಜಾಲಿಂಗನದಲ್ಲಿ ಮೈಮರೆತು ಮಲಗಿರಬೇಕಾದರೆ, ಏಕೋ ಏನೋ ನಡುವೆ ಎಚ್ಚರಗೊಂಡನು. ಎಚ್ಚರವಾಗಿ ನೋಡಲು ಎದುರಿಗೆ ಒಬ್ಬ ರೂಪವತಿಯಾದ ಕನ್ಯೆ ಕಂಡಳು. ಅವಳನ್ನು ಯಾರೆಂದು ಪ್ರಶ್ನಿಸಿದನು. ಅದಕ್ಕೆ ಅವಳು "ಕುಮಾರ. ಸ್ವಲ್ಪ ಹೊತ್ತಿನಲ್ಲಿಯೇ ನನ್ನ ವೃತ್ತಾಂತವನ್ನು ತಿಳಿಯುವೆ ; ಈಗ ನೀನು ನನ್ನೊಡನೆ ಬಾ" ಎಂದು ನುಡಿದು ಅವನನ್ನು ಕರೆದು ತಾನು ಹೊರಟಳು. ವಸುದೇವನು ಪ್ರಿಯಾಲಿಂಗನವನ್ನು ಸಡಿಲಿಸಿ , ಆಕೆಯನ್ನು ಹಿಂಬಾಲಿಸಿದನು. ಆ ಕನ್ಯೆ ಒಂದು ರಮ್ಯಹರ್ಮ್ಯತಲದಲ್ಲಿ ಕುಳಿತಳು. ತಾನು ಬಂದುಂದರ ಕಾರಣವನ್ನು ಹೀಗೆ ನಿರೂಪಿಸಿದಳು :

"ಆರ್ಯಪುತ್ರ, ನೆಮ್ಮದಿಯಾಗಿ ಕೇಳು. ಈ ವಿಜಯಾರ್ಧದ ದಕ್ಷಿಣಶ್ರೇಣಿಯ ಗಾಂಧಾರದೇಶದಲ್ಲಿ ಗಂಧಸಮೃದ್ಧವೆಂಬ ನಗರವಿದೆ. ಅದರ ಅರಸು ಗಾಂಧಾರ. ಅವನ ಪತ್ನಿ ಪೃಥಿವಿ. ನಾನು ಅವರ ಮಗಳಾದ ಪ್ರಭಾವತಿ. ನಾನು ಒಂದು ದಿನ ಮಾನಸವೇಗನ ಸ್ವರ್ಣನಾಭಪುರಕ್ಕೆ ಹೋಗಿದ್ದೆ. ಅಲ್ಲಿ ಅವನ ತಾಯಿ ಅಂಗಾರವತಿಯನ್ನು ಅರಿತವಳಾಗಿ ಅವಳ ಮಗಳು ವೇಗವತಿಯ ವೃತ್ತಾಂತವನ್ನು ಕೇಳಿದೆ. ವೇಗವತಿಯ ಸಖಿಯರು ನನಗೆ ಅವಳ ಸಮಾಚಾರವನ್ನು ತಿಳಿಸಿದರು. ಅವರೊಂದಿಗೆ ನಿನ್ನ, ಅವಳ ಅನುರೂಪ ಸಂಗಮವಾಗಿರುವುದನ್ನು ತಿಳಿಸಿದರು. ಅದೇ ನಗರದಲ್ಲಿ ಶುದ್ಧಶೀಲೆಯೂ ನಿನ್ನ ಹೆಸರೇ ಉಸಿರಾಗಿರುವವಳೂ ಆದ ಸೋಮಶ್ರೀ ಎಂಬವಳಿದ್ದಾಳೆ. ವಿರಹಿಣಿಯಾಗಿ ನೋಯುತ್ತಿರುವ ಆ ನಿನ್ನ ಪ್ರಿಯೆ ಸಂದೇಶದೊಂದಿಗೆ ನನ್ನನ್ನು ನಿನ್ನಲ್ಲಿಗೆ ಕಳಿಸಿದ್ದಾಳೆ. ಅವಳ ಸಂದೇಶವಿದು : 'ಆರ್ಯಪುತ್ರ, ಶತ್ರುವಿನ ಅನುನಯಕ್ಕೆ ಅಲಂಘ್ಯವಾದ ನನ್ನ ಸತೀತ್ವದ ಶೀಲಪ್ರಾಕಾರದೊಳಗೆ ನಾನು ಸುರಕ್ಷಿತೆಯಾಗಿರುವೆನಾದರೂ ಹೀಗೆಯೇ ಇಲ್ಲಿ ನನಗೆ ಎಷ್ಟು ಕಾಲ ಇರಲಾದೀತು? ಪುತ್ರತರ್ಜನ ಶೀಲೆಯಾದ ಶತ್ರುವಿನ ತಾಯಿಯೇ ನನ್ನನ್ನು ರಕ್ಷಿಸುತ್ತಿರುವುದರಿಂದ ನಾನು ಈವರೆಗೆ ಬದುಕಿದ್ದೇನೆ. ಪ್ರಾಣನಾಥ. ಈ ಶತ್ರುವಿನಿಂದ ನನ್ನನ್ನು ಬೇಗ ಬಿಡಿಸು. ನಿರಂತರ ವಿಯೋಗದುಃಖದಿಂದ ಆಕಸ್ಮಿಕವಾಗಿ ನನ್ನ ಮೃತ್ಯು ಇಲ್ಲಿಯೇ ಆಗದಿರಲಿ. ಆದ್ದರಿಂದ ನಿಷ್ಠುರಚಿತ್ತನಾಗಿ ನನ್ನನ್ನು ಉಪೇಕ್ಷಿಸಬೇಡ.' ವಿಯೋಗದಿಂದಾಗಿ ಸದಾ ಕಣ್ಣೀರಿಡುವ

ಸೋಮಶ್ರೀಯ ಸಂದೇಶವನ್ನು ನಿನಗೆ ತಿಳಿಸಿದ್ದೇನೆ. ನನ್ನ ಕೆಲಸವಾಯಿತು. ಈಗ ಏನು ಮಾಡಬೇಕೆಂಬುದು ನಿನಗೆ ಸೇರಿದ್ದು. ನೀನು ಅವಳಿಗೆ ಪತಿ. ಆ ಪರ್ವತಸ್ಥಾನವು ನನಗೆ ಅಗಮ್ಯವಾದ್ದು ಎಂದು ಚಿಂತಿಸಬೇಡ. ನೀನು ಇಷ್ಟಪಡುವುದಾದರೆ ನಾನು ನಿಮಿಷಮಾತ್ರದಲ್ಲಿ ನಿನ್ನನ್ನು ಅಲ್ಲಿಗೆ ಕರೆದೊಯ್ಯುತ್ತೇನೆ."

ಅವಳಿಂದ ಸಾಭಿಜ್ಞಾನಪೂರ್ವಕವಾಗಿ ಸೋಮಶ್ರೀಯ ವೃತ್ತಾಂತವರಿತು ವಸುದೇವನು ತನ್ನನ್ನು ಕೂಡಲೇ ಸೋಮಶ್ರೀಯ ಮನೆಗೆ ತಲಪಿಸುವಂತೆ ಆಕೆಯನ್ನು ಕೋರಿದನು. ಅವನ ಅನುಮತಿಯಂತೆ ಪ್ರಭಾವತಿ ವಿದ್ಯಾಪ್ರಭಾವದಿಂದ ಅವನನ್ನು ಎತ್ತಿಕೊಂಡು ಆಗಸದಲ್ಲಿ ಮಿಂಚಿನಂತೆ ಹಾರಿಹೋದಳು. ಪರಸ್ಪರರ ಅಂಗಸ್ಪರ್ಶದಿಂದ ಇಬ್ಬರೂ ರೋಮಾಂಚಿತರಾದರು. ಸ್ವಲ್ಪಹೊತ್ತಿನಲ್ಲಿಯೇ ಸ್ವರ್ಣನಾಭಪುರವನ್ನು ಸೇರಿದರು. ಪ್ರಭಾವತಿ ಗುಪ್ತರೀತಿಯಲ್ಲಿ ಅವನನ್ನು ಸೋಮಶ್ರೀಯ ಮನೆಯ ಬಳಿ ಇಳಿಸಿದಳು. ಅಲ್ಲಿಗೆ ತಲಪುತ್ತಲೂ ವಸುದೇವನು ಸೋಮಶ್ರೀಯನ್ನು ನೋಡಿದನು. ಆಕೆ ಬಹುಕಾಲದಿಂದ ವಿರಹದಲ್ಲಿ ನೊಂದು ಬೆಂದು ದೀನಮ್ಲಾನೆಯಾಗಿ ಅಲಂಕಾರಶೂನ್ಯೆಯಾಗಿ ತೋರುತ್ತಿದ್ದಳು. ಪತಿಯು ಬಂದುದನ್ನು ಕಂಡು ತಟ್ಟನೆ ಮೇಲೆದ್ದಳು. ಅವಳನ್ನು ನೋಡಿ ವಸುದೇವ ಹರ್ಷಿಸಿದನು. ಇಬ್ಬರೂ ಗಾಢಾಲಿಂಗನದಿಂದ ಪುಲಕಿತರಾದರು. ಯಶಸ್ವಿಯಾಗಿ ಕಾರ್ಯವನ್ನು ಸಾಧಿಸಿದ ಪ್ರಾಣಸಖಿ ಪ್ರಭಾವತಿಯನ್ನು ಸೋಮಶ್ರೀ ಅಭಿನಂದಿಸಿದಳು. ವಸುದೇವನ ಆಗಮನದ ರಹಸ್ಯ ಪ್ರಕಟವಾಗದಿರಲೆಂದು ಪ್ರಭಾವತಿ ವಸುವೇವನಿಗೆ ತನ್ನ ನಾಮರೂಪಗಳನ್ನಿತ್ತು (ವಸುದೇವನು ಪ್ರಭಾವತಿಯ ರೂಪದಲ್ಲಿ ಸೋಮಶ್ರೀಯ ಬಳಿ ಇರುವಂತೆ ಮಾಡಿ) ಆ ದಂಪತಿಗಳಿಂದ ಬೀಳ್ಕೊಂಡು ಹೋದಳು. ಹೀಗೆ ಪರಿವರ್ತಿತರೂಪನಾದ ವಸುದೇವನು ಸೋಮಶ್ರೀಯೊಂದಿಗೆ ಮಾನಸವೇಗನ ಮನೆಯಲ್ಲಿ ಬಹಳ ದಿನಗಳವರೆಗೆ ಇರುತ್ತಿದ್ದನು.

ಒಂದು ದಿನ ಸೋಮಶ್ರೀ ಪತಿಗಿಂತ ಮೊದಲೇ ಎಚ್ಚರಗೊಂಡಳು. ನಿಜರೂಪದಲ್ಲಿ ಪತಿಯನ್ನು ನೋಡಿ ಶತ್ರುವಿನಿಂದ ಆಪತ್ತನ್ನು ಶಂಕಿಸಿ ಅಳತೊಡಗಿದಳು. ಇಷ್ಟರಲ್ಲಿ ವಸುದೇವನೆದ್ದು ಅಳುತ್ತಿದ್ದ ಅವಳನ್ನು ನೋಡಿ ಅಳುವುದೇಕೆಂದು ಕೇಳಿದನು. ಅದಕ್ಕೆ ಅವಳು "ನಿನ್ನ ರೂಪ ಬದಲಾಗದ್ದು ನೋಡಿ ಅಳುತ್ತಿದ್ದೇನೆ" ಎಂದಳು. ಆಗ ಅವನು "ಅಳಬೇಡ, ಮನುಷ್ಯರು ನಿದ್ರಿಸುವಾಗ ಅವರ ಶರೀರವನ್ನು ಬಿಟ್ಟು ಬೇರಾಗುವುದೂ, ಎದ್ದ ಮೇಲೆ ಮತ್ತೆ ಸೇರುವುದೂ ವಿದ್ಯೆಗಳ ಸ್ವಭಾವ" ಎಂದು ಸಂತೈಸಿದನು. ಮುನ್ನಿನಂತೆ ಪರಿವರ್ತಿತರೂಪನಾಗಿ ಅವಳೊಂದಿಗೆ ಇರುತ್ತಿದ್ದನು. ಹೀಗಿರಲು ಒಂದು ದಿನ ಮಾನಸವೇಗನು ಹೇಗೋ ವಸುದೇವನನ್ನು ನಿಜರೂಪದಲ್ಲಿ ನೋಡಿಬಿಟ್ಟನು. ಇದರಿಂದ ವಸುದೇವನು ರೂಪವನ್ನು ಮರೆಮಾಚಿ ಸೋಮಶ್ರೀಯೊಂದಿಗೆ ಇರುತ್ತಿದ್ದಾನೆ ಎಂಬ ಆರೋಪಣೆಯೆತ್ತಿಕೊಂಡು ತನ್ನ ಪತ್ನಿಯೊಂದಿಗೆ ವೈಜಯಂತೀನಗರದ ಅರಸು ಬಲಸಿಂಹನಲ್ಲಿಗೆ ಹೋದನು. ಆ ದೊರೆ ನ್ಯಾಯಪರನು. ಆರೋಪಣೆಯನ್ನು ವಿಚಾರಿಸಲು ಮಾನಸವೇಗನೇ ಪರಾಜಿತನಾದನು. ಅವನು ಲಜ್ಜಿತನಾಗಿ ವಸುದೇವನೆದುರು ಯುದ್ಧಕ್ಕೆ ನಿಂತನು.

ಹಲವು ವಿದ್ಯಾಧರರು ವಸುದೇವನ ಪಕ್ಷ ಹಿಡಿದರು. ವಸುದೇವ ಮಾನಸವೇಗರಿಗೆ ಯುದ್ಧವಾಯಿತು. ವೇಗವತಿಯ ತಾಯಿ ಅಳಿಯನಾದ ವಸುದೇವನಿಗೆ ಒಂದು ದಿವ್ಯ ಧನುಸ್ಸು ಮತ್ತು ದಿವ್ಯಾಸ್ತ್ರಗಳ ಎರಡು ಬತ್ತಳಿಕೆಗಳನ್ನು ಕೊಟ್ಟಳು. ಪ್ರಭಾವತಿಗೆ ಯುದ್ಧದ ಸಂಗತಿ ತಿಳಿಯುತ್ತಲೇ ಬಂದು ಪ್ರಜ್ಞಪ್ತಿವಿದ್ಯೆಯನ್ನು ಕೊಟ್ಟಳು. ಅದರ ಪ್ರಭಾವದಿಂದ ಯುದ್ಧದಲ್ಲಿ ಸ್ವಲ್ಪಕಾಲದಲ್ಲೆ ಮಾನಸವೇಗನನ್ನು ವಸುದೇವನು ಬಂಧಿಸಿದನು. ಮಾನಸವೇಗನ ತಾಯಿ ಪುತ್ರಭಿಕ್ಷೆ ಬೇಡಿದಳು. ವಸುದೇವನು ದಯೆತೋರಿ ಅವನನ್ನು ಸೋಮಶ್ರೀಯ ಬಳಿಗೆ ಕೊಂಡೊಯ್ದು ಬಂಧಮುಕ್ತನಾಗಿ ಮಾಡಿದನು. ಈ ಘಟನೆಯಿಂದ ವಸುದೇವನಿಗೆ ಮಾನಸವೇಗನು ಆಪ್ತಬಂಧುವಾದನು. ಸೋಮಶ್ರೀ ಸಮೇತನಾಗಿ ಅವನನ್ನು ವಿಮಾನದಲ್ಲಿ ಕರೆದೊಯ್ದು ಅಭೀಷ್ಟಸ್ಥಾನವಾದ ಮಹಾಪುರ ನಗರಕ್ಕೆ ತಂದು ಬಿಟ್ಟನು. ಅಲ್ಲಿ ವಸುದೇವನಿಗೆ ಸೋಮಶ್ರೀಯ ಬಂಧುಗಳ ಭೇಟಿಯಾಯಿತು. ಮಾನಸವೇಗನು ವಸುದೇವನಿಗೆ ಆಜ್ಞಾಬದ್ಧನಾಗಿ ಸ್ವಸ್ಥಾನಕ್ಕೆ ಹೋದನು. ಆಮೇಲೆ ಆ ದಂಪತಿಗಳು ಸುಖದಲ್ಲಿರುತ್ತಿದ್ದರು.

ಹೀಗಿರಲು ಒಮ್ಮೆ ಶತ್ರುವಾದ ತ್ರಿಶಿಖರನ ಮಗ ಸೂರ್ಪಕನು ಅಶ್ವರೂಪವನ್ನು ಧರಿಸಿ ಬಂದು ವಸುದೇವನನ್ನು ಅಪಹರಿಸಿ ಕೊಂಡೊಯ್ದನು. ಹಾಗೆ ಒಯ್ದು ಆಕಾಶದಿಂದ ಕೆಳಕ್ಕೆ ಹಾಕಿಬಿಡಲು ವಸುದೇವನು ಗಂಗಾನದಿಯಲ್ಲಿ ಬಿದ್ದನು. ಗಂಗೆಯನ್ನು ದಾಟಿಕೊಂಡು ಹೋಗಿ ಅವನು ಒಂದು ತಾಪಸಾಶ್ರಮವನ್ನು ಸೇರಿದನು. ಅಲ್ಲಿ ನರಾಸ್ಥಿಮಯಶೇಖರಿಯಾದ ಒಬ್ಬ ಉನ್ಮಾದವತಿ ಸ್ತ್ರೀಯನ್ನು ನೋಡಿ, ಯಾವನೋ ಒಬ್ಬ ತಪಸ್ವಿಯನ್ನು "ಈ ಯುವತಿ ಯಾರು ? ಮದೋನ್ಮಾದವಶೆಯಾದ ಹೆಣ್ಣಾನೆಯಂತೆ ಅತ್ತಿತ್ತ ಹುಚ್ಚಳಂತೆ ಸುತ್ತುತ್ತಿದ್ದಾಳೆ" ಎಂದು ಪ್ರಶ್ನಿಸಿದನು. ಆ ತಪಸ್ವಿ "ಇವಳು ಜರಾಸಂಧರಾಜನ ಪುತ್ರಿ ಕೇತುಮತಿ. ಜಿತಶತ್ರುರಾಜನ ಪ್ರಿಯೆ. ಈ ಒಡಪಾಯಿಯನ್ನು ಒಬ್ಬ ಮಂತ್ರವಾದಿ ಪರಿವ್ರಾಜಕನು ತನ್ನ ವಶಪಡಿಸಿಕೊಂಡನು. ಅವನು ತೀರಿ ಹೋಗಲು, ಇತ್ತ ಇವಳು ಅವನ ಅಸ್ಥಿಗಳನ್ನು ಮಾಲೆಯಾಗಿ ಧರಿಸಿ ಲೋಕದಲ್ಲಿ ಅಲೆಯುತ್ತಿದ್ದಾಳೆ"—ಎಂದನು. ವಸುದೇವನಿಗೆ ಕೂಡಲೇ ಕರುಣೆಯುಂಟಾಗಿ ಮಹಾಮಂತ್ರ ಪ್ರಭಾವದಿಂದ ಅವಳಿಗೆ ಹಿಡಿದಿದ್ದ ಗ್ರಹವನ್ನು ತೊಲಗಿಸಿದನು. ಮೊದಲೇ ವಸುದೇವನನ್ನು ಹುಡುಕಲು ನಿಯೋಜಿತರಾಗಿ ಅಲ್ಲಿದ್ದ ಜರಾಸಂಧನ ಜನರು ಅವನನ್ನು ಕೂಡಲೇ ಬಳಸಿ ರಾಜಗೃಹನಗರಕ್ಕೆ ಕರೆದೊಯ್ದರು. ಅವರನ್ನು ಕುರಿತು ವಸುದೇವನು "ಅಯ್ಯಾ, ನಾನು ಅರಸರ ವಿಷಯಕ್ಕೆ ಏನು ತಪ್ಪುಮಾಡಿದೆ ? ಹೇಳಿ, ನನ್ನನ್ನು ಹೀಗೆ ಕೋಪದಿಂದ ಕೊಂಡೊಯ್ಯುತ್ತಿದ್ದೀರಿ" ಎಂದು ಪ್ರಶ್ನಿಸಿದನು. ಅದಕ್ಕೆ ಅವರು "ಅಯ್ಯಾ, ಯಾವಾತನು ರಾಜಪುತ್ರಿಯ ಗ್ರಹವನ್ನು ಬಿಡಿಸುವನೋ ಅವನೇ ತಪ್ಪದೆ ರಾಜವೈರಿಯ ತಂದೆಯಾಗುತ್ತಾನೆ" ಎಂದು ನುಡಿದರು. ಅಲ್ಲದೆ ಆ ನೀಚಜನ ಅವನನ್ನು ವಧಸ್ಥಾನಕ್ಕೆ ಒಯ್ದರು. ಆದರೆ ವಧೆಯಾಗುವ ಮೊದಲೇ ಯಾವನೋ ವಿದ್ಯಾಧರನು ಅವನನ್ನು ಹಾರಿಸಿಕೊಂಡು ಆಕಾಶಕ್ಕೆ ಹೊರಟುಹೋದನು. ಆ ವಿದ್ಯಾಧರನು ವಸುದೇವನನ್ನು

ಕುರಿತು "ಅಯ್ಯಾ, ನಾನು ಪ್ರಭಾವತಿಯ ಪಿತಾಮಹ. ನನ್ನ ಹೆಸರು ಭಗೀರಥ. ನಿನ್ನ ಮನೋರಥವನ್ನು ನೆರವೇರಿಸುತ್ತೇನೆ. ನಾನು ನಿನ್ನನ್ನು ಪ್ರಭಾವತಿಯಲ್ಲಿಗೆ ಕರೆದೊಯ್ಯುತ್ತೇನೆ"—ಎಂದು ನುಡಿದು, ಹಾಗೆಯೇ ವಿಜಯಾರ್ಧಗಿರಿಗೆ ವಸುದೇವನನ್ನು ಕೊಂಡೊಯ್ದನು. ಅಲ್ಲಿ ಪರ್ವತಾಗ್ರದಲ್ಲಿಯ ಗಂಧಸಮೃದ್ಧನಗರವನ್ನು ವೈಭವಯುತವಾಗಿ ಪ್ರವೇಶಮಾಡಿಸಿದನು. ಆಮೇಲೆ ಶುಭದಿನದಲ್ಲಿ ಪ್ರಭಾವತಿಯ ಪಿತೃಬಾಂಧವರು ವಸುದೇವ-ಪ್ರಭಾವತಿಯರ ಮದುವೆ ನಡಸಿದರು. ಮೊದಲೇ ಅವರಿಬ್ಬರೂ ಪರಸ್ಪರವಾಗಿ ಒಲಿದಿದ್ದರು. ಈಗ ವಧೂವರರಾಗಿ ಭೋಗಾನುಭವದಲ್ಲಿ ಮಗ್ನರಾದರು.

೩೧. ರೋಹಿಣೀಸ್ವಯಂವರ ಭ್ರಾತೃಸಮಾಗಮ ವರ್ಣನ

ಒಮ್ಮೆ ವಸುದೇವನು ಪ್ರಭಾವತಿಯೊಂದಿಗೆ ಹರ್ಮ್ಯದಲ್ಲಿ ಮಲಗಿರುವಾಗ ಅವನ ಶತ್ರು ಸೂರ್ಪಕನು ಬಂದು ಅವನನ್ನು ಅಪಹರಿಸಿ ಆಕಾಶಕ್ಕೊಯ್ದನು. ಕೆಲಹೊತ್ತಿನಲ್ಲಿ ವಸುದೇವನಿಗೆ ಎಚ್ಚರವಾದಾಗ ಅವನು ಮುಷ್ಟಿಘಾತದಿಂದ ಶತ್ರುವನ್ನು ಬಡಿಯತೊಡಗಿದನು. ಸೂರ್ಪಕನು ಗಾಬರಿಗೊಂಡು ಅವನನ್ನು ಆಕಾಶದಿಂದ ಕೆಳಕ್ಕೆ ಹಾಕಿದಾಗ ಅವನು ಗೋದಾವರಿಯ ಮಡುವಿನೊಳಗೆ ಬಿದ್ದನು. ಅಲ್ಲಿಂದೆದ್ದು ಕುಂಡಪುರವನ್ನು ತಲುಪಿದನು. ಅಲ್ಲಿಯ ಅರಸು ಪದ್ಮರಥ. ಅವನಿಗೆ ಕಲಾಕುಶಲೆಯಾದ ಒಬ್ಬ ಕನ್ಯೆಯಿದ್ದಳು. ಯಾವಾತನು ತನ್ನನ್ನು ಮಾಲಾಗ್ರಥನ ಕೌಶಲದಲ್ಲಿ ಸೋಲಿಸುವನೋ ಅವನನ್ನೇ ತಾನು ವರಿಸುವುದಾಗಿ ಅವಳ ಪ್ರತಿಜ್ಞೆಯಿತ್ತು. ವಸುದೇವನು ಅವಳಿಗೆ ಆ ಕೌಶಲವನ್ನು ತೋರಿ ಅವಳನ್ನು ವರಿಸಿದನು. ಒಂದು ದಿನ ವಸುದೇವನ ಶತ್ರು ನೀಲಕಂಠನು ಅಲ್ಲಿಂದಲೂ ಅವನನ್ನು ಅಪಹರಿಸಿ ಒಯ್ದು ಆಕಾಶದಿಂದ ಕೆಳಕ್ಕೆ ಹಾಕಿದನು. ಅದೃಷ್ಟವಶಾತ್ ವಸುದೇವನು ಚಂಪಾನಗರದ ಸರಸ್ಸಿನಲ್ಲಿ ಬಿದ್ದನು. ಅಲ್ಲಿಂದೆದ್ದು ಚಂಪಾನಗರವನ್ನು ಹೊಕ್ಕು ಅಲ್ಲಿಯ ಮಂತ್ರಿಯ ಮಗಳನ್ನು ಮದುವೆಯಾದನು. ಒಂದು ದಿನ ವಸುದೇವನು ಚಂಪಾನಗರದಲ್ಲಿ ಜಲಕ್ರೀಡೆಯಲ್ಲಿರುವಾಗ ಮತ್ತೆ ಸೂರ್ಪಕನು ಅವನನ್ನು ಕದ್ದೊಯ್ದನು. ಈ ಬಾರಿ ಅವನಿಂದ ಮುಕ್ತನಾಗಿ ಭಾಗೀರಥೀನದಿಯಲ್ಲಿ ಬಿದ್ದನು. ಅಲ್ಲಿಂದೆದ್ದು ಅಡವಿಯಲ್ಲಿ ಸುತ್ತಾಡತೊಡಗಿದನು. ಅಲ್ಲಿ ಮ್ಲೇಚ್ಛರ ಅರಸು ಅವನನ್ನು ಕಂಡನು. ಇದರ ಫಲವಾಗಿ ಅವನ ಮಗಳು ಜರಾ ಎಂಬವಳನ್ನು ವಸುದೇವನು ವರಿಸಿ ಅಲ್ಲಿಯೇ ಇರತೊಡಗಿದನು ; ಅವಳಲ್ಲಿ ವಸುದೇವನಿಗೆ ಜರತ್ಕುಮಾರನೆಂಬ ಮಗನಾದನು. ಅಲ್ಲಿದ್ದಾಗಲೇ ವಸುದೇವನು ಅವಂತಿಸುಂದರಿ ಮತ್ತು ಶೂರಸೇನೆ ಎಂಬಿಬ್ಬರು ಕನ್ಯೆಯರನ್ನು ಸ್ವೀಕರಿಸಿದನು. ಆಮೇಲೆ ಪುರುಷಾನ್ವೇಷಿಣಿಯಾಗಿದ್ದ ಜೀವದ್ಯಶಾ ಎಂಬವಳನ್ನೂ ಇನ್ನೂ ಅನೇಕ ಕನ್ಯೆಯರನ್ನೂ ವರಿಸಿ ಅರಿಷ್ಟಪುರವೆಂಬ ನಗರಕ್ಕೆ ಬಂದು ಸೇರಿದನು. ಆಗ ಅಲ್ಲಿ ಶೂರನಾದ ರುಧಿರನೆಂಬರಸು ಆಳುತ್ತಿದ್ದನು. ಅವನ ಪತ್ನಿ ಮಿತ್ರಾ. ಇವರಿಗೆ ನಯಜ್ಞನೂ ರಣಶೂರನೂ ಮಹಾಸತ್ತ್ವನೂ ಶಸ್ತ್ರಶಾಸ್ತ್ರಾಭ್ಯಾಸಿಯೂ ಆದ ಹಿರಣ್ಯನಾಭನೆಂಬ ಜ್ಯೇಷ್ಠಪುತ್ರನಿದ್ದನು ; ಕಲಾಪಾರಂಗತೆಯೂ ರೂಪಯೌವನಧಾರಿಣಿಯೂ

ಆದ ರೋಹಿಣಿಯೆಂಬ ಮಗಳಿದ್ದಳು. ಈಕೆ ರೋಹಿಣಿಯಂತೆಯೇ ಯಶಸ್ವಿನಿಯಾಗಿದ್ದಳು.

ಈ ರೋಹಿಣಿಯ ಸ್ವಯಂವರಕ್ಕೆಂದು ಜರಾಸಂಧನನ್ನು ಮುಂದಿಟ್ಟುಕೊಂಡು ಸಮುದ್ರವಿಜಯಾದಿ ಸಮಸ್ತರಾಜರೂ ಬಂದರು. ಸ್ವಯಂವರಮಂಟಪದಲ್ಲಿ ಯಥೋಚಿತ ಆಸನಗಳಲ್ಲಿ ಮಂಡಿಸಿದರು. ವಸುದೇವನು ಅಣ್ಣಂದಿರಿಗೆ ಗುರುತಾಗದಂಥ ವೇಷ ಧರಿಸಿ ತಾನೂ ಅಲ್ಲಿಗೆ ಬಂದನು. ಮದ್ದಳೆಯವನ ಹತ್ತಿರ ಹೋಗಿ ಕುಳಿತನು. ಆಗ ವಸುದೇವನು ತನ್ನ ಕೈಯಲ್ಲಿ ಪಣವವಾದ್ಯವನ್ನು ಹಿಡಿದಿದ್ದು, ಅದನ್ನು ನುಡಿಸುವುದರಲ್ಲಿ ಅಗ್ರಗಣ್ಯನಾಗಿ ತೋರಿ ಬರುತ್ತಿದ್ದನು. ಆಮೇಲೆ ರೋಹಿಣಿ ಸ್ವಯಂವರಮಂಟಪಕ್ಕೆ ಬಂದಳು. ಒಟ್ಟಿಗೆ ಎಲ್ಲ ರಾಜಕುಮಾರರೂ ಕಾತರಗೊಂಡು ಅವಳತ್ತ ಕಣ್ಣುಗಳನ್ನು ಹೊರಳಿಸಿ ನೋಡಿದರು. ಮೊದಲು ಅವಳ ರೂಪಲಾವಣ್ಯವನ್ನು ಕೇಳಿದ್ದು ಅವಳಲ್ಲಿ ಪ್ರೀತಿಗೊಂಡವರಿಗೆ ಈಗ ಅವಳ ರೂಪಲಾವಣ್ಯವನ್ನು ಕಂಡ ಮೇಲೆ ಆ ಪ್ರೀತಿ ಅಧಿಕವಾಯಿತು. ಶಂಖತೂರ್ಯಧ್ವನಿಗಳು ಶಾಂತಗೊಂಡಮೇಲೆ ದಾದಿಯು ಸಾಲಂಕೃತಕನ್ಯೆಯನ್ನು ರಾಜರ ಸಮಕ್ಷಕ್ಕೆ ಕರೆದೊಯ್ದು ಹೇಳತೊಡಗಿದಳು : "ಇಕೋ ಚಂದ್ರಮಂಡಲಸಮ ಧವಲಚ್ಛತ್ರನೂ ತ್ರಿಖಂಡಪತಿಯೂ ಸರ್ವಭೂಚರ ಖೇಚರಾಧಿಪನೂ ಆದ ಜರಾಸಂಧನು ಇಲ್ಲಿ ಕುಳಿತಿದ್ದಾನೆ. ಈತನನ್ನು ಬೇಕಾದರೆ ನೀನು ವರಿಸು"—ಎಂದಳು. ಅವಳಿಗೆ ಆತನು ಇಷ್ಟವಾಗದಿರಲು, ದಾದಿ ಮುಂದುವರಿದು ಜರಾಸಂಧನ ಪುತ್ರರನ್ನು ತೋರಿಸಿ "ಇವರಲ್ಲಿ ಇಷ್ಟವಾದವನನ್ನು ವರಿಸು" ಎಂದಳು. ಅಲ್ಲಿಯೂ ಅವಳಿಗೆ ಮನಸ್ಸಾಗದಿರಲು, "ಮಗೂ, ಇಕೋ ಮುಂದೆ ಮಥುರಾನಾಥನಾದ ಉಗ್ರಸೇನ ನೃಪನಿದ್ದಾನೆ, ನಿನಗೆ ಮೆಚ್ಚಾದರೆ ಅವನತ್ತ ನೋಡು"—ಎಂದಳು. ಇನ್ನೂ ಮುಂದೆ ಹೋಗಿ "ಶೌರ್ಯಪುರಾಧಿಪರನ್ನು (ಸಮುದ್ರವಿಜಯಾದಿಗಳು) ನೋಡು, ಇಷ್ಟವಾದರೆ ಇವರಲ್ಲೊಬ್ಬನಿಗೆ ವರಣಮಾಲೆಯನ್ನು ಹಾಕು"—ಎಂದಳು. ದಾದಿ ಹೀಗೆನ್ನಲು ರೋಹಿಣಿ ಗುರುಗೌರವಭಾವದಿಂದ ಅವರಿಗೆ ಮಣಿದಳು. ದಾದಿ ಮುನ್ನಡೆದು ಪಾಂಡುರಾಜನನ್ನು, ವಿದುರನನ್ನು ತೋರಿಸಿದಳು. ಇವರಲ್ಲಿ ಯಾರೊಬ್ಬರ ಮೇಲೂ ಕನ್ಯೆಗೆ ಮನಸ್ಸಾಗದಿರಲು ದಮಘೋಷ, ದಂತವಕ್ತ್ರ, ಶಲ್ಯ ಮೊದಲಾದವರನ್ನು ತೋರಿಸಿದಳು ; ಅವರವರ ವಂಶಸ್ಥಾನಾದಿಗಳನ್ನು ವಿವರಿಸಿದಳು. ಇನ್ನೂ ಅನೇಕ ರಾಜರನ್ನು ಪರಿಚಯಿಸಿಕೊಟ್ಟು, "ಬಾಲೇ, ಮುಖ್ಯರಾದ ಅರಸರು ಇಷ್ಟೇ. ಸುಮ್ಮನೆ ಏತಕ್ಕೆ ನಿಂತುಬಿಟ್ಟೆ ? ಇವರೆಲ್ಲ ನಿನ್ನ ಸೌಭಾಗ್ಯಗುಣಾಕೃಷ್ಟರಾಗಿ ಇಲ್ಲಿ ನಿನ್ನ ಸಮೀಪದಲ್ಲಿಯೇ ಕುಳಿತಿದ್ದಾರೆ. ನಿನ್ನ ಚೇತೋಹರನಾದ ಒಬ್ಬನನ್ನು ವರಿಸು. ನಿನಗೆ ಯೋಗ್ಯಪತಿಯನ್ನು ಹೊಂದಿಸುವ ಚಿಂತೆಯಲ್ಲಿ ನಿನ್ನ ತಾಯಿತಂದೆ ನಿದ್ರೆಯಿಲ್ಲದೆ ಇದ್ದಾರೆ. ಯೋಗ್ಯವರನನ್ನು ಪರಿಗ್ರಹಿಸಿ ಅವರನ್ನು ಸಂತುಷ್ಟರನ್ನಾಗಿ ಮಾಡು"-ಎಂದಳು. ದಾದಿಯ ಮಾತಿಗೆ ರೋಹಿಣಿ "ಮಾತೆ, ನೀನು ಹೇಳಿದ್ದು ಸರಿಯೆ. ಆದರೂ ನೀನು ತೋರಿಸಿದ ಈ ರಾಜರಲ್ಲಿ ನನಗೆ ಯಾರ ಮೇಲೂ ಆಸಕ್ತಿ ಹುಟ್ಟಲಿಲ್ಲ. ನೋಡಿದ

ಕೂಡಲೇ ಯಾರ ಮೇಲೆ ಪ್ರೀತಿ ಹುಟ್ಟುವುದೋ ಆತನನ್ನು ವರಿಸುವೆನೆಂಬ ಮಾತು ಪುನರುಕ್ತಿ ಅಷ್ಟೆ. ಆಂತರಿಕಸ್ನೇಹ ಪ್ರಕಟವಾದ ಮೇಲೆಯೇ ಸ್ತ್ರೀಪುರುಷರಿಬ್ಬರಲ್ಲಿಯೂ ಸಂತೋಷದ ಅನುಭವವಾಗುವುದು. ಈ ರಾಜರ ಮೇಲೆ ನನಗೆ ರಾಗವಿಲ್ಲ, ದ್ವೇಷವಿಲ್ಲ, ಮೋಹವಿಲ್ಲ, ಶೂನ್ಯಭಾವವಿಲ್ಲ. ಮುನಿಗೆ ಹೇಗೋ ಹಾಗೆ ಇವರ ಮೇಲೆ ಏಕೋ ಏನೋ ನನಗೆ ಉದಾಸೀನ ಉಂಟಾಗಿದೆ. ಒಂದು ವೇಳೆ ವಿಧಿ ಸರ್ವಾಧಿಕನಾದ ಬೇರೊಬ್ಬ ವರನನ್ನು ನನಗಾಗಿ ಮಾಡಲು ಇಚ್ಛಿಸಿದ್ದರೆ ಆ ಜಗದ್ಗುರುವೇ ಇಂದು ನನಗೆ ಅವನನ್ನು ತೋರಿಸಲಿ"-ಎಂದಳು.

ಇಷ್ಟು ಹೇಳಿ ಮುಗಿಸುತ್ತಲೇ ಕಿವಿಯನ್ನು ಹೊಕ್ಕು ಮನಸೆಳೆಯುವಂಥ ಮಧುರವಾದ ಪಣವಧ್ವನಿ ಅವಳಿಗೆ ಕೇಳಿಸಿತು. ಆ ಧ್ವನಿ "ಎಲೇ ಸುಂದರಿ, ನಿನ್ನ ಚಿತ್ತಾಕರ್ಷಕನಾದ ರಾಜಹಂಸ ಇಲ್ಲಿ ಕುಳಿತಿದ್ದಾನೆ, ಆದ್ದರಿಂದ ಇತ್ತ ನೋಡು" ಎಂದು ಸ್ಪಷ್ಟವಾಗಿ ನುಡಿಯುವಂತಿತ್ತು. ರೋಹಿಣಿ ಅತ್ತ ಕಡೆಗೆ ಹೊರಳಿ ನೋಡುತ್ತಲೂ, ರಾಜಲಕ್ಷಣಯುಕ್ತನಾದ ವಸುದೇವನನ್ನು ಕಂಡಳು. ಪರಸ್ಪರರ ದೃಷ್ಟಿಗಳು ಬೆರೆತು ಮನಸ್ಸು ಚಲಿಸಿತು. ರೋಹಿಣಿ ಅವನ ಬಳಿಗೆ ನಡೆದು ಅವನ ಕೊರಳಲ್ಲಿ ಮಾಲೆಯನ್ನು ಹಾಕಿದಳು. ಅವನೊಡನೆ ಆಸನಾಸೀನನಾದಳು. ಆಗ ಅವಳು ಚಂದ್ರನ ಬಳಿಯಲ್ಲಿ ಶೋಭಿಸುವ ರೋಹಿಣಿಯಂತೆ ಕಂಡಳು. ತನ್ನ ನವವಧೂಸ್ಪರ್ಶದಿಂದ ಅವನನ್ನು ಹರ್ಷಗೊಳಿಸಿದಳು. ಆ ಸ್ವಯಂವರವನ್ನು ನೋಡಿ ಹಲವು ಅರಸರು, "ಆಹ, ರನ್ನಚಿನ್ನಗಳ ಸಂಯೋಗದಂತೆ ಈಯಿಬ್ಬರು ಯೋಗ್ಯವಧೂವರರ ಸಂಯೋಗವು ಘಟಿಸಿದೆ" ಎಂದು ಮೆಚ್ಚಿ ನುಡಿದರು. ಮಾತ್ಸರ್ಯಪೀಡಿತರಾದವರು "ನೋಡಿ, ಒಬ್ಬ ಮದ್ದಳೆಗನನ್ನು ವರಿಸಿ ಈ ಕನ್ಯೆ ತುಂಬಾ ಅನ್ಯಾಯಮಾಡಿದಳು. ಅರಸರಿಗಾದ ಈ ಅಪಮಾನವನ್ನು ಉದಾಸೀನಮಾಡಲಾಗದು. ಏಕೆಂದರೆ ಹೀಗಾಗುತ್ತಿದ್ದರೆ ಲೋಕದಲ್ಲಿ ಮುಂದೆಂದೂ ಇಂತಹ ಅತಿಪ್ರಸಂಗವು ನಡೆಯುತ್ತ ಹೋದೀತು, ಕುಲಮರ್ಯಾದೆಯ ವ್ಯವಸ್ಥೆಯೇ ಕೆಟ್ಟುಹೋದೀತು. ಕುಲೀನರ ಈ ಸಮೂಹದಲ್ಲಿ ಈ ಅಕುಲೀನನಿಗೆ ಕೆಲಸವಾದರೂ ಏನು ? ಅಥವಾ ಈತನು ಕುಲೀನನಾಗಿದ್ದರೆ, ತನ್ನ ಕುಲವನ್ನು ಹೇಳುವ ಇಷ್ಟವಿದ್ದರೆ ಹೇಳಲಿ. ಒಂದು ಪಕ್ಷ ಇವನು ತನ್ನ ಕುಲ ಇಂಥದೆಂದು ಹೇಳಲಿಲ್ಲವೋ, ಇವನು ಯಾವುದೋ ಕೀಳುಕುಲದಲ್ಲಿ ಹುಟ್ಟಿದವನಿರುತ್ತಾನೆ. ಆಗ ಇವನನ್ನು ಇಲ್ಲಿಂದ ತೊಲಗಿಸಬೇಕು. ಈ ಕನ್ಯೆಯನ್ನು ಮತ್ತೆ ಯಾವನಾದರೂ ರಾಜಪುತ್ರನಿಗೆ ಕೊಡುವುದಾಗಬೇಕು" ಎಂದರು. ಆಗ ವಸುದೇವನು ವಿಕ್ಷುಬ್ಧರಾದ ಆ ರಾಜಪುತ್ರರನ್ನು ಕುರಿತು, "ಎಲೇ ದರ್ಪಿಷ್ಠರಾದ ಕ್ಷತ್ರಿಯರೇ, ಸಜ್ಜನರೇ, ನನ್ನ ಮಾತು ಕೇಳಿ. ಸ್ವಯಂವರಕ್ಕೆ ಬಂದ ಹೆಣ್ಣು ತನ್ನಿಚ್ಛೆಗೆ ಒಪ್ಪಿದಂತೆ ಕುಲೀನನನ್ನೋ ಅಕುಲೀನನನ್ನೋ ವರಿಸುತ್ತಾಳೆ. ಸ್ವಯಂವರದಲ್ಲಿ ಅದಕ್ಕೆ ಕ್ರಮವೇನಿಲ್ಲ. ಆದ್ದರಿಂದ ಕನ್ಯಾಪಿತ, ಸೋದರರು ಅಥವಾ ಸ್ವಯಂವರ ಗತಿಜ್ಞರು—ಈ ಯಾರನ್ನೇ ಆಗಲಿ ಈ ವಿಷಯದಲ್ಲಿ ಅಶಾಂತಿಗೊಳಿಸುವುದು ತರವಲ್ಲ. ಮಹಾಕುಲಜನಾಗಿಯೂ ಒಬ್ಬನು ಸ್ತ್ರೀಗೆ ಅಪ್ರಿಯನಾಗಬಹುದು ; ನೀಚಕುಲಜ

ನಾಗಿಯೂ ಪ್ರಿಯನಾಗಬಹುದು. ಆದ್ದರಿಂದ ಈ ವಿಷಯದಲ್ಲಿ ಕುಲಸೌಭಾಗ್ಯಗಳ ಯಾವ ಅಡ್ಡಿಯೂ ಇರುವುದಿಲ್ಲ. ಈ ಕನ್ಯೆ ಅಪರಿಚಿತನಾದ ನನ್ನ ಸೌಭಾಗ್ಯವನ್ನು ಪ್ರಕಟಿಸಿದ್ದಾಳೆ. ಇದರಲ್ಲಿ ನೀವೇನೂ ಅಡ್ಡಮಾತು ಹೇಳುವ ಹಾಗಿಲ್ಲ. ಇಷ್ಟರಮೇಲೆ ಯಾರಾದರೂ ಬಲಗರ್ವದಿಂದ ದುಡುಕಿದರೆ ಅವರನ್ನು ನನ್ನ ಬಾಣಗಳಿಂದ ಹದಕ್ಕೆ ತರುತ್ತೇನೆ''—ಎಂದನು. ಇದನ್ನು ಕೇಳುತ್ತಲೂ ಜರಾಸಂಧನಿಗೆ ಕೋಪ ಬಂತು. ಅವನು ಅಲ್ಲಿಯ ಅರಸರಿಗೆ "ಈ ಉದ್ಧಟನನ್ನೂ ಪುತ್ರಸಹಿತನಾಗಿ ಆ ರುಧಿರನನ್ನೂ ಹಿಡಿದುಕೊಳ್ಳಿ'' ಎಂದನು. ಮೊದಲೇ ಕ್ರುದ್ಧರಾಗಿದ್ದ ಆ ದುಷ್ಟರಾಜರು ಚಕ್ರವರ್ತಿ ಆದೇಶವೀಯುತ್ತಲೂ ಇಮ್ಮಡಿ ಕೆರಳಿದರು. ಯುದ್ಧಕ್ಕೆ ಕೂಡಲೇ ಸಿದ್ಧರಾದರು. ಸಾತ್ವಿಕರಾದ ಅರಸರು ಪಾಪಶಂಕೆಗೆ ಗುರಿಯಾಗದೆ, ತಂತಮ್ಮ ಸೇನೆಯೊಂದಿಗೆ ಬೇರೆಯಾಗಿ ನಿಂತರು.

ರುಧಿರನ ಪಕ್ಷದ ಕ್ಷತ್ರಿಯರು ಕೋಪಾರಕ್ತ ನೇತ್ರರಾಗಿ ಶತ್ರುವಿನೆದುರು ನಿಂತರು. ರುಧಿರನ ಮಗ ಹಿರಣ್ಯನಾಭ ರೋಹಿಣಿಯನ್ನು ತನ್ನ ರಥವೇರಿಸಿಕೊಂಡು ನಿಂತನು. ರುಧಿರನು ವಸುದೇವನನ್ನು ತನ್ನ ರಥವೇರಿಸಿಕೊಂಡು ಸಸೈನ್ಯನಾಗಿ ಪ್ರತಿಭಟಿಸಿ ನಿಂತನು. ತನ್ನ ಯೋಧರನ್ನು ಹುರಿದುಂಬಿಸಿದನು. ವಸುದೇವನು ಮಾವನನ್ನು ಕುರಿತು ''ಪೂಜ್ಯ, ಶಸ್ತ್ರಾಸ್ತ್ರಭರಿತವಾದೊಂದು ರಥವನ್ನು ಕೂಡಲೇ ನನಗೆ ಕೊಡಿ. ಈ ಕ್ಷತ್ರಿಯರನ್ನು ಶೀಘ್ರವೇ ಇಲ್ಲಿಂದ ಹೊಡೆದೋಡಿಸುತ್ತೇನೆ. ಈ ಜನ ಈ ಯುದ್ಧದಲ್ಲಿ ಅಪರಿಚಿತ ಕುಲನಾದ ನನ್ನ ಬಾಣಗಳನ್ನು ಸಹಿಸಿಕೊಳ್ಳಲಿ" ಎಂದನು. ಇದನ್ನು ಕೇಳಿ ರುಧಿರನಿಗೆ ಸಂತಸವಾಯಿತು. ಶಸ್ತ್ರಾಸ್ತ್ರಭರಿತವಾದೊಂದು ರಥವನ್ನು ತರಿಸಿಕೊಟ್ಟನು. ಆ ವೇಳೆಗೆ ದಿವ್ಯಾಸ್ತ್ರಧರನೂ ಶೂರನೂ ಆದ ದಧಿಮುಖನೆಂಬ ಖೇಚರನು ರಥಾರೂಢನಾಗಿ ವಸುದೇವನಲ್ಲಿಗೆ ಬಂದನು. ಕೂಡಲೇ ತನ್ನ ರಥವೇರಿಕೊಳ್ಳುವಂತೆ ವಿನಯದಿಂದ ಕೇಳಿಕೊಂಡನು. "ನಾನು ನಿಮ್ಮ ಸಾರಥಿಯಾಗುತ್ತೇನೆ; ನೀವು ಇಚ್ಛಾನುಸಾರವಾಗಿ ಶತ್ರು ಸಮೂಹವನ್ನು ನಾಶಮಾಡಿ'' ಎಂದನು. ವಸುದೇವನಿಗೆ ಸಂತಸವಾಯಿತು. ವಸುದೇವನು ಕವಚಧರನೂ ಧನುರ್ಧರನೂ ಆಗಿ ವಿವಿಧಾಸ್ತ್ರಭರಿತವಾದ ಆ ರಥವೇರಿದನು. ರುಧಿರನ ಮಹಾಸೇನೆ ವಸುದೇವನಿಗೆ ನೆರವಾಯಿತು. ಅದರೊಂದಿಗೆ ಕೂಡಿ ವಸುದೇವನು ಸಾಗರೋಪಮವಾದ ಶತ್ರುಸೇನೆಯನ್ನಿದಿರಿಸಿದನು. ರಣವಾದ್ಯಗಳು ಮೊಳಗಿ ಚತುರಂಗವು ಚತುರಂಗದೊಡನೆ ಸೆಣಸಿತು. ಗಗನವು ಅಸ್ತ್ರಾಚ್ಛಾದಿತವಾಯಿತು. ರಣಗತ್ತಲೆ ಕವಿಯಿತು. ಯೋಧರ ಕಾಲ್ನಡೆ ಸಾಧ್ಯವಿಲ್ಲದಂತೆ ಹೆಣಗಳ ಬಣಬೆ ಒಟ್ಟಿತು. ಉಗ್ರವಾಗಿ ಕಾದಾಡಿ ಬಳಲಿದ ಮುಂಚೂಣಿಗೆ ನೆರವಾಗಲು ವಸುದೇವ ಹಿರಣ್ಯನಾಭರು ಉದ್ಯತರಾದರು. ಇಡೀ ಶತ್ರುಸೈನ್ಯವನ್ನು ಬಾಣಗಳಿಂದ ಕವಿದರು. ಅವರ ಬಾಣಗಳು ನೆಡದ ಹಸ್ತ್ಯಶ್ವಾದಿಗಳೇ ಇಲ್ಲ. ಶತ್ರುಗಳ ಅಸ್ತ್ರವನ್ನು ವಸುದೇವನು ವಾಯುವ್ಯದಿಂದ ಖಂಡಿಸಿ ತನ್ನ ಮಾಹೇಂದ್ರದಿಂದ ಅವರ ಬಿಲ್ಲನ್ನು ತುಂಡರಿಸಿದನು. ಅತ್ತ ಹಿರಣ್ಯನಾಭನು ಪೌಂಡ್ರನನ್ನು ಎದುರಿಸಿದನು. ಸಿಂಹದ ಮರಿಗಳಂತೆ ಅವರು ಉಗ್ರವಾಗಿ ಅಸ್ತ್ರ

ಗಳ ಕಾಳಗ ನಡಸಿದರು. ಹಿರಣ್ಯನಾಭನು ಶತ್ರುವಿನ ಛತ್ರಪತಾಕಾದಿಗಳನ್ನು ಕತ್ತರಿಸಲು, ಕೆರಳಿದ ಪೌಂಡ್ರನು ತಾನೂ ಹಾಗೆಯೇ ಮಾಡಿದನು. ಹಿರಣ್ಯನಾಭ ಆಮೇಲೆ ಶತ್ರುವಿನ ಕವಚ ರಥಾಶ್ವಾದಿಗಳನ್ನು ಕೆಡವಿದನು. ಪ್ರತಿಯಾಗಿ ಪೌಂಡ್ರನು ಶತ್ರುವನ್ನು ವಿರಥನಾಗಿ ಮಾಡಿ, ಆಗಲೇ ಅವನು ಪ್ರಾಣಸಂಹಾರಕವಾದ ಅಸ್ತ್ರವನ್ನು ಶತ್ರುವಿನ ಮೇಲೆ ಬಿಡಲೆಂದು ಬಿಲ್ಲಿಗೆ ತೊಡುತ್ತಲೂ ವಸುದೇವನು ಅರ್ಧಚಂದ್ರಾಕೃತಿಯ ಬಾಣದಿಂದ ಅವನ ಆ ಬಿಲ್ಲನ್ನು ಖಂಡಿಸಿ ಹಾಕಿದನು; ಹಿರಣ್ಯನಾಭನನ್ನು ತನ್ನ ರಥಕ್ಕೇರಿಸಿಕೊಂಡನು. ವಸುದೇವನು ಪೌಂಡ್ರನ ಮೇಲೆ ಸತತವಾಗಿ ಬಾಣವರ್ಷ ಮಾಡಿದಾಗ, ಶತ್ರುಪಕ್ಷದ ಅನೇಕರು ಒಟ್ಟಾಗಿ ಸೇರಿ ವಸುದೇವನ ಮೇಲೆ ಬಾಣಪ್ರಯೋಗ ಮಾಡಿದರು. ಆದರೆ ಇವನು ಅವನ್ನೆಲ್ಲ ಖಂಡಿಸಿ ಹಾಕಿ ತಾನು ಬಾಣಗಳನ್ನು ಬಿಡುತ್ತಲೇ ಇದ್ದನು. ಅವನ ಯುದ್ಧಕೌಶಲ ಶತ್ರುಗಳನ್ನೂ ಮೆಚ್ಚಿಸಿತು.

ಆಗ ಕೆಲವು ನ್ಯಾಯಜ್ಞರೂ ಸಜ್ಜನರೂ ಆದ ರಾಜರು ''ಇಂಥ ಯುದ್ಧವನ್ನು ನೋಡಲು ನಾವು ಒಪ್ಪುವುದಿಲ್ಲ; ಏಕೆಂದರೆ ಇಲ್ಲಿ ಒಬ್ಬನು ಹಲವರನ್ನು ಇದಿರಿಸಿ ಕಾದಾಡಬೇಕಾಗಿದೆ"—ಎಂದರು. ಆಗ ಧರ್ಮಯುದ್ಧವನ್ನು ನೋಡಬಯಸಿದ ಜರಾಸಂಧನು 'ಒಳ್ಳೆಯದು. ಕನ್ಯೆಗಾಗಿ ಇವನೊಂದಿಗೆ ಒಬ್ಬೊಬ್ಬ ಅರಸನೇ ಯುದ್ಧಮಾಡಲಿ' ಎಂದನು. ಅವನ ಆದೇಶದಂತೆ ಶತ್ರುಂಜಯ ಕುಮಾರನು ವಸುದೇವನೊಂದಿಗೆ ಹೋರಲು ಮೇಲೆದ್ದನು. ಉಳಿದವರು ಮಾತ್ಸರ್ಯವಿರಹಿತರಾಗಿ ನೋಡುತ್ತ ನಿಂತರು. ವಸುದೇವನು ಶತ್ರುಂಜಯನ ಅಸ್ತ್ರಗಳನ್ನು ನಿವಾರಿಸಿ ಅವನ ರಥಕವಚಗಳನ್ನು ಮುರಿದು ಅವನನ್ನು ಮೂರ್ಛಿತನಾಗಿ ಮಾಡಿ ಅಲ್ಲಿಗೆ ಬಿಟ್ಟನು. ಆಮೇಲೆ ಮದೋದ್ಧತನಾದ ದಂತವಕ್ತ್ರನು ಎದುರಾದನು. ಅವನ ರಥವನ್ನೂ ಮುರಿದಿಕ್ಕಿ ಅವನನ್ನು ನಿಃಸತ್ತ್ವಗೊಳಿಸಿ ಅಲ್ಲಿಂದ ಓಡಿಸಿಬಿಟ್ಟನು. ಆಮೇಲೆ ಯಮೋಪಮನಾದ ಕಾಲಮುಖನು ಎದುರಾಗಲು ಅವನನ್ನು ಸಜೀವವಾಗಿ ಮಾತ್ರ ಉಳಿಸಿ ಹೊರಡಿಸಿಬಿಟ್ಟನು. ರಥಾರೂಢನಾಗಿ ತೀಕ್ಷ್ಣಾಸ್ತ್ರಗಳನ್ನು ಬಿಡುತ್ತ ಶಲ್ಯನು ಎದುರಾಗಲು ವಸುದೇವನು ಜೃಂಭಣಾಸ್ತ್ರದಿಂದ ಅವನನ್ನು ಬಂಧಿಸಿದನು. ಈಗ ಜರಾಸಂಧನು, ಸಮುದ್ರವಿಜಯನನ್ನು ಕುರಿತು "ಅಯ್ಯಾ ರಾಜಾ. ನೀನು ಅಸ್ತ್ರವಿಶಾರದ. ಆದ್ದರಿಂದ ಕೂಡಲೇ ಯುದ್ಧದಲ್ಲಿ ಈತನ ದರ್ಪವನ್ನಡಗಿಸು' ಎಂದನು. ಸಮುದ್ರವಿಜಯನು ನ್ಯಾಯವಿದನು (ಅವನಿಗೆ ಯುದ್ಧ ಇಷ್ಟವಿರಲಿಲ್ಲ); ಆದರೆ ರಾಜಶಾಸನದಿಂದಾಗಿ ಮೇಲೆದ್ದನು. ನ್ಯಾಯವಿದರಾದವರೂ ಯುದ್ಧವಿಷಯದಲ್ಲಿ ತಮ್ಮ ಪ್ರಭುವನ್ನೇ ಅನುಸರಿಸಬೇಕಷ್ಟೆ ?

ಸಮುದ್ರವಿಜಯನ ಅಪ್ಪಣೆಯಂತೆ ಸಾರಥಿ ರಥವನ್ನು ಚೋದಿಸಲು ಆ ಅತ್ಯುಚ್ಚ ಧ್ವಜಚ್ಛತ್ರಯುತವಾದ ರಥವು ವಸುದೇವನ ರಥದತ್ತ ಓಡಿತು. ವಸುದೇವನು ದೂರದಿಂದಲೇ ಹಿರಿಯಣ್ಣನ ಆ ರಥವನ್ನು ನೋಡಿ, ತನ್ನ ಸಾರಥಿಗೆ ''ಈತನು ನಮ್ಮ ದೊಡ್ಡಣ್ಣ ಸಮುದ್ರವಿಜಯನೆಂದು ತಿಳಿ'' ಎಂದು ನುಡಿದು, ''ಎಲೆ ದಧಿಮುಖ, ಈತನು ನನಗೆ ಪಿತೃಸಮಾನನು; ಆದ್ದರಿಂದ ಈತನೆದುರಿಗೆ ರಥವನ್ನು ಮೆಲ್ಲಗೆ ಕೊಂಡೊಯ್ಯು

ಬೇಕು; ನನಗೆ ರಣಭೂಮಿಯಲ್ಲಿ ಈತನ ರಕ್ಷಣೆಯತ್ತ ದೃಷ್ಟಿಯಿಟ್ಟೇ ಈತನೊಂದಿಗೆ ಹೋರಾಡಬೇಕಾಗುತ್ತದೆ" ಎಂದನು. ಹಾಗೆಯೇ ಸಾರಥಿ ಸಮುದ್ರವಿಜಯನ ರಥದ ಕಡೆಗೆ ಮಂದಗತಿಯಲ್ಲಿ ವಸುದೇವನ ರಥವನ್ನು ಒಯ್ದನು. ಯುದ್ಧಭೂಮಿಗೆ ಬರುತ್ತಲೂ ಸಮುದ್ರವಿಜಯನು ತನ್ನ ಸಾರಥಿಗೆ "ಭದ್ರ, ಈ ಯೋಧನನ್ನು ಕಾಣುತ್ತಲೇ ನನ್ನ ಮನಸ್ಸು ಸ್ನೇಹಾರ್ದ್ರವಾಯಿತು. ಬಲಗಣ್ಣು, ಬಲದೋಳು ಮಿಡಿಯುತ್ತಿವೆ. ಇವು ಬಂಧುಸಂಬಂಧವಾದ ಸೂಚನೆ. ಆದರೆ ಎದುರಿಗೆ ಶತ್ರು ನಿಂತಿರುವಾಗ ಈ ಸಂಬಂಧ ಸೂಚನೆಯ ಅರ್ಥವೇನು, ನೀನೇ ಹೇಳು. ಆದರೆ ಒಳ್ಳೆಯ ನಿಮಿತ್ತಗಳ ವಿಚಾರಗಳಲ್ಲಿ ವಿಸಂವಾದವೆಂಬುದು ಎಂದೂ ಅನುಭವಕ್ಕೆ ಬಂದಿಲ್ಲ"—ಎಂದನು. ಆ ಸಾರಥಿ "ಇದೀಗ ನೀವು ಶತ್ರುಸಮ್ಮುಖದಲ್ಲಿ ನಿಂತಿದ್ದೀರಿ. ಈತನನ್ನು ಗೆದ್ದಾದ ಕೂಡಲೇ ನಿಮಗೆ ತಪ್ಪದೆ ಬಂಧುಸಮಾಗಮವಾಗುವುದು. ಈ ಶತ್ರು ಅನ್ಯರಿಂದ ಅಜೇಯನು. ಇವನನ್ನು ಗೆದ್ದ ಮೇಲೆ ನೀವು ಈ ರಾಜಸಮಕ್ಷದಲ್ಲಿ ರಾಜಾಧಿರಾಜ ಜರಾಸಂಧನಿಂದ ವಿಶೇಷಸನ್ಮಾನವನ್ನು ತಪ್ಪದೆ ಪಡೆಯುತ್ತೀರಿ" ಎಂದನು. ಸಮುದ್ರವಿಜಯನು ಆ ಸಾರಥಿಯ ಮಾತಿಗೆ ಪ್ರಶಂಸಿಸಿ, ಬಿಲ್ಲೆತ್ತಿ ದೋಣೆಯಿಂದ ಬಾಣ ತೆಗೆದನು. ಎದುರಿಗೆ ಬಿಲ್ಲುಹಿಡಿದು ಬಾಣಸೆಳೆದು ಸಿದ್ಧನಾಗಿ ನಿಂತಿದ್ದ ವಸುದೇವನನ್ನು ಕುರಿತು, "ಯುದ್ಧದಲ್ಲಿ ನೀನು ತೋರಿದ ಧನುರ್ವಿದ್ಯೆಯ ಕೌಶಲವನ್ನು ಈಗ ನನ್ನ ಮುಂದೆ ಹಾಗೆಯೇ ತೋರಿ, ಸಮಾರೋಪಮಾಡು. ಎಲೈ ಶೌರ್ಯಶೈಲನೇ, ನಿನ್ನ ಅನಾವೃತ ಉತ್ತುಂಗಮಾನಶೃಂಗವನ್ನು ಈ ನನ್ನ ಶರಮೇಘದಿಂದ ಆವರಿಸುತ್ತೇನೆ. ನಾನು ಸಮುದ್ರವಿಜಯ"—ಎಂದನು. ಆಗ ವಸುದೇವನು ಸ್ವರಭೇದವನ್ನು ಮಾಡಿಕೊಂಡು ಅವನೊಂದಿಗೆ "ರಾಜೇಂದ್ರ, ನಮ್ಮಲ್ಲಿ ಹೆಚ್ಚು ಮಾತೇಕೆ? ಯುದ್ಧದಲ್ಲಿ ನಮ್ಮ ನಮ್ಮಳವು ಪ್ರಕಟವಾಗುತ್ತದೆ. ಯಾವುದು ಏನಾಗಬೇಕೋ ಅದು ಎದುರಿನಲ್ಲಾಗುತ್ತದೆ. ನೀನು ಸಮುದ್ರವಿಜಯನಾದರೆ ನಾನು ಸಂಗ್ರಾಮವಿಜಯ. ಇದಿನ್ನೂ ನಿನಗೆ ನಂಬುಗೆಯಾಗದಿದ್ದರೆ ಈಗಲೇ ಬಿಲ್ಲಿಗೆ ಬಾಣಹೂಡಿ ಬಿಡು"—ಎಂದನು. ವಸುದೇವನು ಇಂತೆನ್ನಲು ಸಮುದ್ರವಿಜಯನು ತಾಟಸ್ಥ್ಯವನ್ನು ಬಿಟ್ಟು ಕ್ರುದ್ಧನಾಗಿ ವೈಶಾಖಾಸನದಲ್ಲಿ ನಿಂತು ತಿರುವಿಗೆ ಬಾಣ ಹೂಡಿ ಸೆಳೆದುಬಿಟ್ಟನು. ಆದರೆ ಅದೇ ವೈಶಾಖಾಸನದಲ್ಲಿದ್ದು, ಬಿಟ್ಟಂಥ ವಸುದೇವನ ಪ್ರತ್ಯಸ್ತ್ರವು ದೂರದಲ್ಲಿಯೇ ಸಮುದ್ರವಿಜಯನ ಬಾಣವನ್ನು ಕತ್ತರಿಸಿ ಹಾಕಿತು. ಹೀಗೆ ಅಣ್ಣನು ಬಿಟ್ಟ ಎಲ್ಲಾ ಅಸ್ತ್ರಗಳನ್ನೂ ವಸುದೇವನು ಪ್ರತ್ಯಸ್ತ್ರಗಳ ಪ್ರಯೋಗದಿಂದ ದೂರದಲ್ಲಿಯೇ ಕತ್ತರಿಸಿಹಾಕುತ್ತಿದ್ದನು. ಆ ಅಸ್ತ್ರಕೋವಿದರಿಬ್ಬರೂ ವಾಯವ್ಯ ವಾರುಣಾದಿ ಅಸ್ತ್ರಗಳಿಂದ ದೀರ್ಘಕಾಲ ಯುದ್ಧಮಾಡಿದರು. ಪ್ರೇಕ್ಷಕರಾದ ರಾಜರು ಪ್ರಶಂಸಿಸಿದರು. ಯೋಧ ಸಾರಥಿ ಕುದುರೆಗಳು ಇವನ್ನು ಲಕ್ಷ್ಯವಾಗಿಟ್ಟು ಅಣ್ಣನು ಬಿಡುವ ಬಾಣಗಳನ್ನೆಲ್ಲ ತಮ್ಮನು ತನ್ನ ಬಾಣಗಳಿಂದ, ಗರುಡನು ಸರ್ಪಗಳನ್ನು ಭಿನ್ನಭಿನ್ನ ಮಾಡುವಂತೆ, ಕಡಿಖಂಡ ಮಾಡುತ್ತಿದ್ದನು. ಆಮೇಲೆ ವಸುದೇವನು ಅಣ್ಣನ ಬಾಣಗಳು ಒಂದೊಂದನ್ನೂ ಮುಕ್ಕಡಿಗಳಾಗಿ ಮಾಡಿ ತನ್ನ ಬಾಣಗಳಿಂದ ಅವನ ರಥ ಸಾರಥಿ

ಅಶ್ವಗಳನ್ನು ನಾಶಮಾಡಿದನು. ಅರಸರು ವಸುದೇವನ ಅಸ್ತ್ರಕೌಶಲವನ್ನು ಮೆಚ್ಚಿ ಹೊಗಳಿದರು, ತಲೆದೂಗಿದರು. ಅಣ್ಣನಿಗೆ ಈತನು ತನ್ನ ಬಂಧುವೆಂಬುದೇನೂ ತಿಳಿದಿರಲಿಲ್ಲ. ಇದರಿಂದ ಕೆರಳಿ ಸಮುದ್ರವಿಜಯನು ಸಹಸ್ರಾರು ಅಸ್ತ್ರಗಳಿಂದ ಕೂಡಿದ ದಿವ್ಯಾಸ್ತ್ರವಾದ ರೌದ್ರಾಸ್ತ್ರವನ್ನು ಬಿಟ್ಟನು. ಆದರೆ ಕೂಡಲೇ ವಸುದೇವನು ಅದನ್ನು ನಡುವೆಯೇ ಬ್ರಹ್ಮಶಿರೋಸ್ತ್ರವನ್ನು ಬಿಟ್ಟು ಕತ್ತರಿಸಿಬಿಟ್ಟನು. ವಸುದೇವನ ಅಸ್ತ್ರಪ್ರಯೋಗಕೌಶಲ ಅತ್ಯಂತ ಪ್ರಶಂಸನೀಯವಾಗಿತ್ತು. ಇಷ್ಟೆಲ್ಲ ನಾನಾಸ್ತ್ರಗಳನ್ನು ಖಂಡಿಸಿ ಹಾಕಿದರೂ, ಅಣ್ಣನನ್ನು ಸುರಕ್ಷಿತವಾಗಿರುವಂತೆ ನೋಡಿಕೊಂಡಿದ್ದನು.

ಹೀಗೆ ರಣಕ್ರೀಡೆಯಾಡುತ್ತ ಆ ಭ್ರಾತೃಪ್ರೇಮಿ ವಸುದೇವನು ಸ್ವನಾಮಾಂಕಿತವಾದ ಒಂದು ಅಸ್ತ್ರವನ್ನು ಅಣ್ಣನಲ್ಲಿಗೆ ಕಳುಹಿದನು. ಅದು ಮಂದಗತಿಯಲ್ಲಿ ಸಾಗಿ ಅಣ್ಣನನ್ನು ತಲುಪಿತು. ಅವನು ಆ ಅನುಕೂಲಾಸ್ತ್ರವನ್ನು ಎತ್ತಿಕೊಂಡು ಅದರಲ್ಲಿ ಲಿಖಿತವಾಗಿದ್ದ "ಮಹಾರಾಜಾ, ಅಜ್ಞಾತರೂಪದಲ್ಲಿ ಹೊರಟುಹೋಗಿದ್ದ ಆ ನಿಮ್ಮ ತಮ್ಮ ವಸುದೇವ ನಾನು. ನೂರು ವರ್ಷ ಕಳೆದ ಮೇಲೀಗ ಅವನು ಇಂದು ಆತ್ಮೀಯಜನರ ಬಳಿಗೆ ಬಂದಿದ್ದಾನೆ. ಆರ್ಯ, ಅವನು ನಿಮ್ಮ ಪಾದಗಳಿಗೆ ವಂದಿಸುತ್ತಾನೆ" ಎಂದಿದ್ದುದನ್ನು ಓದಿಕೊಂಡನು. ಭ್ರಾತೃಸ್ನೇಹವು ಉಕ್ಕಿಬಂದು ಸಮುದ್ರವಿಜಯನು ತನ್ನ ಕೈಯ ಬಿಲ್ಲನ್ನೆಸೆದು ಕೂಡಲೇ ರಥವಿಳಿದು ತಮ್ಮನಲ್ಲಿಗೆ ಬಂದನು. ವಸುದೇವನೂ ಕೂಡಲೇ ರಥವಿಳಿದು ದೂರದಲ್ಲೇ ಅಣ್ಣನ ಪಾದಗಳಲ್ಲಿ ಬಿದ್ದನು. ಅಣ್ಣನು ಎರಡೂ ತೋಳಲ್ಲಿ ಅವನನ್ನು ಎತ್ತಿ ಅಪ್ಪಿಕೊಂಡನು. ಇಬ್ಬರೂ ಅಪ್ಪಿಕೊಂಡು ಅಳತೊಡಗಿದರು. ಕಂಬನಿಗಳು ಧಾರೆಯಾಗಿ ಸುರಿದುವು. ಅಷ್ಟರಲ್ಲಿ ಅಕ್ಷುಭ್ಯ ಮೊದಲಾದ ಅನ್ಯ ಸೋದರರೂ ಅಲ್ಲಿಗೆ ಬಂದರು. ಎಲ್ಲರೂ ಅಪ್ಪಿಕೊಂಡು ಅಳತೊಡಗಿದರು. ಆಗ ಯುದ್ಧಭೂಮಿಯಲ್ಲಿ ಇದ್ದಂಥ ವಸುದೇವನ ಮಾವಂದಿರೆಲ್ಲ, ಮೈದಂದಿರೆಲ್ಲ, ಇತರ ಬಂಧುಜನರೆಲ್ಲ ಅವನೊಂದಿಗೆ ಸೇರಿ ರೋದಿಸತೊಡಗಿದರು. ಜರಾಸಂಧಾದಿ ರಾಜರು ಈ ಭ್ರಾತೃಸಮಾಗಮವನ್ನು ಕಂಡು ಹರ್ಷಿಸಿದರು. ರೋಹಿಣಿಯ ಸೋದರನೂ ತಂದೆಯೂ ಬಂಧುಗಳೂ ಅವನನ್ನು ತುಂಬ ಹೊಗಳಿದರು.

ಅನಂತರ ಎಲ್ಲ ರಾಜರೂ ತಂತಮ್ಮ ಶಿಬಿರಗಳಿಗೆ ಹೋದರು. ವಸುದೇವನ ವೃತ್ತಾಂತದಲ್ಲಿಯೇ ಆಸಕ್ತರಾದ ಅವರಿಗೆ ಹಗಲಿರುಳು ಹಾಗೆಯೇ ಕಳೆದುವು. ಶುಭದಿನದಲ್ಲಿ ವಸುದೇವ ರೋಹಿಣಿಯರ ವಿವಾಹವಾಯಿತು. ಜರಾಸಂಧ ಸಮುದ್ರವಿಜಯಾದಿ ಅರಸರಿಗೆ ಆ ವಿವಾಹೋತ್ಸವವನ್ನು ನೋಡಿ ತುಂಬ ಸಂತಸವಾಯಿತು. ಒಂದು ವರ್ಷಕಾಲ ಅವರೆಲ್ಲ ರುಧಿರ ರಾಜನ ಮನೆಯಲ್ಲೇ ಇದ್ದುಕೊಂಡು ಮರಳಿದರು. ಯುದ್ಧದಲ್ಲಿ ವಸುದೇವನಿಗೆ ನೆರವಾಗಿದ್ದ ದಧಿಮುಖನು ವಸುದೇವನಿಂದ ಸನ್ಮಾನಿತನಾಗಿ ಯಥಾಸ್ಥಾನಕ್ಕೆ ತೆರಳಿದನು. ರೋಹಿಣಿಯೊಂದಿಗೆ ವಸುದೇವನು ಸುಖದಲ್ಲಿರುತ್ತಿದ್ದನು.

ವಸುದೇವನು ಏಕಾಂಗಿಯಾಗಿದ್ದೂ, ಸಮಸ್ತ ಲೋಕಾಧೀಶ್ವರರೂ ಅವನನ್ನು

ಎದುರಿಸಲಾರದೆ ಹೋದರು. ಇದು ಜಿನಕಥಿತ ತಪಃಪ್ರಭಾವದ ಫಲವೆಂಬುದನ್ನು ತಿಳಿಯಬೇಕು, ಎಂದು ಗೌತಮಸ್ವಾಮಿ ಹೇಳಿದನು.

೩೨. ಸಕಲಬಂಧು ವಧೂಸಮಾಗಮ ವರ್ಣನ

ಒಮ್ಮೆ ರೋಹಿಣಿ ವಸುದೇವನೊಂದಿಗೆ ವಿಚಿತ್ರಶಯ್ಯೆಯ ಮೇಲೆ ಮಲಗಿರಲು ನಾಲ್ಕು ಶುಭಸ್ವಪ್ನಗಳನ್ನು ಕಂಡಳು. ಚಂದ್ರಸಮಚ್ಛಾಯೆಯ ಮಂದ್ರಗರ್ಜನೆಯ ಒಂದು ಮಹಾಗಜ, ಪರ್ವತೋಪಮವಾದ ಅಲೆಗಳ ಸಾಂದ್ರನಿರ್ಘೋಷದ ಸಮುದ್ರ, ಚಂದ್ರ, ಮೊಗಂಬುಗುವ ಕುಂದಶುಭ್ರವಾದ ಮೃಗೇಂದ್ರ—ಇವೇ ಆ ಸ್ವಪ್ನಗಳು. ಬೆಳಗಾಗುವಾಗ ಎಚ್ಚತ್ತು ಆ ಸ್ವಪ್ನಗಳನ್ನು ಪತಿಗೆ ಹೇಳಿದಳು. ಅವನು "ನಿನಗೆ ಶೀಘ್ರದಲ್ಲಿಯೇ ಧೀರನೂ ಅಲಂಘ್ಯನೂ ಶಶಿಪ್ರಭನೂ ಅದ್ವಿತೀಯವೀರನೂ ಭುವನಸ್ವಾಮಿಯೂ ಜನಪ್ರಿಯನೂ ಆದ ಪುತ್ರನಾಗುತ್ತಾನೆ" ಎಂದು ಆ ಸ್ವಪ್ನಫಲವನ್ನು ಅವಳಿಗೆ ಹೇಳಿದನು. ರೋಹಿಣಿಗೆ ತುಂಬ ಸಂತಸವಾಯಿತು. ಮಹಾಸಾಮಾನಿಕದೇವನು ಮಹಾಶುಕ್ರಕಲ್ಪದಿಂದ ಚ್ಯುತನಾಗಿ ಬಂದು ರೋಹಿಣಿಯ ಗರ್ಭದಲ್ಲಿ ನೆಲಸಿದನು ; ಪೃಥಿವಿಯ ಗರ್ಭದಲ್ಲಿ ಉತ್ತಮರತ್ನ ನೆಲಸುವಂತೆ ನೆಲಸಿದನು. ಸಂಪೂರ್ಣದೋಹಳೆಯಾದ ರೋಹಿಣಿ ನವಮಾಸ ನೆರೆದು ಶಶಿಸನ್ನಿಭನಾದ ಪುತ್ರನನ್ನು ಹಡೆದಳು. ರುಧಿರರಾಜನ ಮನೆಯಲ್ಲಿಯೇ ಒಂದು ವರ್ಷಕಾಲದಿಂದ ಇರುತ್ತಿದ್ದ ಜರಾಸಂಧಾದಿಯಾದ ರಾಜರು ಆ ಮಗುವಿನ ಜನ್ಮೋತ್ಸವವನ್ನು ನೋಡಿಕೊಂಡು ನಿಜನಿವಾಸಗಳಿಗೆ ಹೋದರು. ರುಧಿರನು ಅವರನ್ನು ಸತ್ಕರಿಸಿ ಬೀಳ್ಕೊಂಡನು. ಅಭಿರಾಮನಾದ್ದರಿಂದ ಆ ಮಗು ರಾಮನೆಂಬ ಹೆಸರು ಪಡೆದು ತಾಯಿತಂದೆಗಳ, ಬಂಧುಗಳ ಪ್ರೀತಿಯನ್ನು ಹೆಚ್ಚಿಸುತ್ತ ದಿನೇದಿನೇ ಬೆಳೆಯತೊಡಗಿತು. ಒಮ್ಮೆ ವಸುದೇವನ ಹಿತೋದ್ಯತರಾದ ಸಮುದ್ರವಿಜಯಾದಿಗಳು ರುಧಿರನ ಶ್ರೀಮಂಡಪದಲ್ಲಿ ಕುಳಿತಿರುವಾಗ ಒಬ್ಬ ದಿವ್ಯ ವಿದ್ಯಾಧರಿ ಗಗನದಿಂದಿಳಿದು ಅಲ್ಲಿಗೆ ಬಂದಳು. ಎಲ್ಲರನ್ನೂ ವಂದಿಸಿ ಕುಳಿತು, ಕೆಲಸಮಯದ ಮೇಲೆ ವಸುದೇವನನ್ನು ಕುರಿತು "ದೇವಾ, ನಿಮ್ಮ ಪತ್ನಿ ವೇಗವತಿ ಮತ್ತು ನನ್ನ ಮಗಳು ಬಾಲಚಂದ್ರೆ ನಿಮ್ಮ ಪಾದಗಳಲ್ಲಿ ಬಿದ್ದು ನಿಮ್ಮ ಪ್ರಿಯದರ್ಶನವನ್ನು ಬಯಸುತ್ತಾರೆ ; ಕುಮಾರಿ ಬಾಲಚಂದ್ರೆಯು ನಿಮ್ಮಲ್ಲೇ ಪ್ರಾಣವಿಟ್ಟುಕೊಂಡಿದ್ದಾಳೆ. ಕೂಡಲೇ ನೀವು ಬಂದು ಅವಳನ್ನು ವರಿಸಿ ಅವಳನ್ನು ಸಂತಸಗೊಳಿಸಿ"—ಎಂದಳು. ವಸುದೇವನು ಆ ಮಾತು ಕೇಳಿ ಅಣ್ಣನ ಕಡೆಗೆ ನೋಡಿದನು. ಅದರ ಅಭಿಪ್ರಾಯವರಿತ ಆತನು "ಕೂಡಲೇ ಹೊರಡು" ಎಂದು ನುಡಿದು ಅವನನ್ನು ಬಿಟ್ಟುಕೊಟ್ಟನು.

ಕೂಡಲೇ ವಿದ್ಯಾಧರಿ ವಸುದೇವನನ್ನು ಕರೆದೊಯ್ದು ಗಗನವಲ್ಲಭನಗರವನ್ನು ಸೇರಿದಳು. ಇತ್ತ ಸಮುದ್ರವಿಜಯಾದಿಗಳು ಶೌರ್ಯಪುರಕ್ಕೆ ಹೋದರು. ವಸುದೇವನು ಗಗನವಲ್ಲಭ ನಗರದಲ್ಲಿ ವೇಗವತಿಯನ್ನು ಕೂಡಿದನು ; ಬಾಲಚಂದ್ರೆಯನ್ನು ವರಿಸಿದನು. ವಿವಾಹಾನಂತರ ನವವಧು ಬಾಲಚಂದ್ರೆಯೊಂದಿಗೆ, ಪ್ರಿಯೆ ವೇಗವತಿಯೊಂದಿಗೆ ಸುಖಾನುಭವ ಮಾಡುತ್ತ ಕೆಲದಿನಗಳವರೆಗೆ ಅಲ್ಲಿಯೇ ಇರತೊಡಗಿದನು. ಆಮೇಲೆ ವಸುದೇವನು ಆಯಿಬ್ಬರು ಸ್ತ್ರೀಯರೊಂದಿಗೆ ಶೀಘ್ರವಾಗಿ ಶೌರ್ಯಪುರಕ್ಕೆ ಮರಳುವ ತನ್ನಿಚ್ಛೆಯನ್ನು ಪ್ರಕಟಿಸಿದನು. ಏಣೀಪುತ್ರನ ಪೂರ್ವಭವದ ತಾಯಿ ವನವತೀದೇವಿ ದೇದೀಪ್ಯಮಾನವಾದ ಒಂದು ರತ್ನವಿಮಾನವನ್ನು ರಚಿಸಿ ಆತನಿಗೆ ಕೊಟ್ಟಳು. ಇದನ್ನು ನೋಡಿ ಬಾಲಚಂದ್ರೆಯ ತಂದೆ ಕಾಂಚನದಂಷ್ಟ್ರ, ವೇಗವತಿಯ ಅಣ್ಣ ಮಾನಸವೇಗ ಇವರು ಸಪರಿವಾರವಾಗಿ ಬಾಲಚಂದ್ರೆ ವೇಗವತಿಯರನ್ನು ವಸುದೇವನಿಗೆ ಒಪ್ಪಿಸಿದರು. ವಸುದೇವನು ಅವರನ್ನು ಒಡಗೊಂಡು ಇಚ್ಛಾಗಾಮಿಯಾದ ಆ ವಿಮಾನದಲ್ಲಿ ಹೊರಟು ಅರಿಂಜಯಪುರವನ್ನು ತಲುಪಿದನು. ಅಲ್ಲಿ ವಿದ್ಯುದ್ವೇಗನನ್ನು ಕಂಡು ಪ್ರಿಯೆ ಮದನವೇಗೆ ಮತ್ತು ಪುತ್ರ ಅನಾವೃಷ್ಟಿ ಇವರನ್ನು ಕರೆದುಕೊಂಡು ಅದೇ ವಿಮಾನದಲ್ಲಿ ಏರಿ ಗಗನಚಾರಿಯಾದನು. ಅಲ್ಲಿಂದ ಗಂಧಸಮೃದ್ಧನಗರಕ್ಕೆ ಹೋಗಿ ಗಾಂಧಾರ ರಾಜಪುತ್ರಿ ಪ್ರಭಾವತಿಯನ್ನು ಕಂಡು ಸಪರಿವಾರವಾಗಿ ಅವಳನ್ನು ವಿಮಾನವೇರಿಸಿಕೊಂಡು ಅಸಿತಪರ್ವತ ನಗರಕ್ಕೆ ಹೋದನು. ಅಲ್ಲಿ ಸಿಂಹದಂಷ್ಟ್ರನ ಪುತ್ರಿ ನೀಲಯಶೆಯನ್ನು ಕಂಡು ವಿರಹಾನಂತರ ಸೇರಿದ ಆಕೆಯೊಂದಿಗೆ ಕ್ರೀಡಾನಿರತನಾದನು. ಆಮೇಲೆ ಅವಳನ್ನು ಜತೆಗೊಂಡು ಕಿನ್ನರೋದ್ಗೀತನಗರವನ್ನು ಸೇರಿ ಶ್ಯಾಮೆಯನ್ನು ಕರೆದುಕೊಂಡು ಶ್ರಾವಸ್ತಿಗೆ ಹೋದನು. ಅಲ್ಲಿ ಪ್ರಿಯಂಗುಸುಂದರಿ ಬಂಧುಮತಿಯರನ್ನು ಒಡಗೊಂಡು ಮುಂದೆ ಮಹಾಪುರಕ್ಕೆ ಸೇರಿದನು. ಮಹಾಪುರದಲ್ಲಿ ಸೋಮಶ್ರೀಯನ್ನು ಕರೆದುಕೊಂಡು ಇಲಾವರ್ಧನಪುರ ಸೇರಿದನು. ಅಲ್ಲಿ ರತ್ನಾವತಿಯನ್ನು ಕರೆದುಕೊಂಡು ಭದ್ರಿಲಪುರಕ್ಕೆ ಹೋದನು. ಅಲ್ಲಿ ಚಾರುಹಾಸಿನಿಯನ್ನು ಸೇರಿಸಿಕೊಂಡು, ಪುತ್ರನಾದ ಪೌಂಡ್ರನನ್ನು ಅಲ್ಲಿಯೇ ನೆಲೆಗೊಳಿಸಿ, ಜಯಪುರಕ್ಕೆ ಹೋದನು. ಅಲ್ಲಿ ಅಶ್ವಸೇನೆಯನ್ನು ಜತೆಗೊಂಡು ಶಾಲಗುಹ ನಗರಕ್ಕೆ ಹೋದನು. ಅಲ್ಲಿ ಪದ್ಮಾವತಿಯನ್ನು ಕರೆದುಕೊಂಡು ವೇದಸಾಮಪುರವನ್ನು ಸೇರಿದನು. ಅಲ್ಲಿ ತನ್ನ ಮಗ ಕಪಿಲನಿಗೆ ರಾಜ್ಯಾಭಿಷೇಕ ಮಾಡಿ ಕಪಿಲೆಯನ್ನೊಡಗೊಂಡು ಅಚಲಗ್ರಾಮಕ್ಕೆ ಹೋದನು. ಅಲ್ಲಿ ಮಿತ್ರಶ್ರೀಯನ್ನು ಕರೆದುಕೊಂಡು ತಿಲವಸ್ತು ನಗರಕ್ಕೆ ಹೋದನು. ಅಲ್ಲಿ ೫೦೦ ಮಂದಿ ಕನ್ಯೆಯರನ್ನು ಗ್ರಹಿಸಿ ಗಿರಿತಟನಗರವನ್ನು ತಲುಪಿದನು. ಅಲ್ಲಿ ಸೋಮಶ್ರೀಯೊಡಗೂಡಿ ಚಂಪಾಪುರಿಗೆ ಹೋದನು. ಅಲ್ಲಿ ಮಂತ್ರಿಪುತ್ರಿ ಮತ್ತು ಗಾಂಧರ್ವಸೇನೆ ಇವರನ್ನೊಡಗೊಂಡು ವಿಜಯಖೇಟ ನಗರಕ್ಕೆ ಹೋದನು. ಅಲ್ಲಿ ಅಕ್ರೂರದೃಷ್ಟಿಯೆಂಬ ತನ್ನ ಮಗನನ್ನು ಕಂಡು, ವಿಜಯಸೇನೆಯೊಂದಿಗೆ ತೆರಳಿ ಕುಲಪುರವನ್ನು ತಲಪಿದನು. ಅಲ್ಲಿ ಪದ್ಮಶ್ರೀ, ಅವಂತಿಸುಂದರಿ, ಪುತ್ರಸಮೇತಳಾದ ಸೂರಸೇನೆ, ಜರೆ, ಜೀವದ್ಯಶೆ ಮತ್ತು ತನ್ನ ಅನ್ಯಪತ್ನಿಯರು—ಈಯೆಲ್ಲರನ್ನೂ ಜತೆಗೆ ಕರೆದುಕೊಂಡು ಸಂತೋಷದಿಂದ ಶೀಘ್ರಗಾಮಿ ವಿಮಾನದಲ್ಲಿ ಶೌರ್ಯಪುರಕ್ಕೆ ಹಿಂದಿರುಗಿದನು.

ವನವತೀದೇವಿ ತಾನೇ ಮೊದಲಾಗಿ ಬಂದು ವಸುದೇವನ ಆಗಮನವಿಚಾರವನ್ನು ಸಮುದ್ರವಿಜಯನಿಗೆ ತಿಳಿಸಿ ಅವನನ್ನು ಸಂತೋಷಪಡಿಸಿದಳು. ಅವನು ಪ್ರಜೆಗಳಿಂದ

ನಗರಶೋಭೆ ಮಾಡಿಸಿ ತಮ್ಮನನ್ನು ಇದಿರುಗೊಂಡು ಕರೆತರಲು ಬಂಧುಜನ ಸಮೇತನಾಗಿ ಹೊರಟನು. ವಸುದೇವನು ತನ್ನ ಸಮಸ್ತ ಪತ್ನಿಯರೊಂದಿಗೆ ವಿಮಾನದಿಂದ ಕೆಳಗಿಳಿದು ಅಣ್ಣಂದಿರಿಗೆಲ್ಲ, ಗುರುಹಿರಿಯರಿಗೆಲ್ಲ ಮಣಿದನು. ಉಳಿದವರು ವಸುದೇವನಿಗೆ ಮಣಿದರು. ಆನಂದಾಶ್ರುಭರಿತರಾದ ಶಿವಾದೇವಿ ಮುಂತಾದ ರಾಣಿಯರು ಪತ್ನಿಸಮೇತನಾಗಿ ವಂದಿಸಿದ ವಸುದೇವನನ್ನಪ್ಪಿ ಮತ್ತೆ ವಿಯೋಗವಾಗದಿರಲಿ ಎಂದೇ ಸಾರಿಸಾರಿ ಹರಸಿದರು. ವಸುದೇವನು ಪ್ರಜೆಗಳನ್ನು ತಕ್ಕಂತೆ ಮನ್ನಿಸಿ, ಪ್ರಜೆಗಳು ವಸುದೇವನನ್ನು ಆದರಿಸಿದರು. ಅವನು ಶೌರ್ಯಪುರದಲ್ಲಿ ಬಂಧುಜನರನ್ನು ಸಂತಸಪಡಿಸಿ ಸುಖದಲ್ಲಿರುತ್ತಿದ್ದನು. ಸದಾ ಹಿತೋದ್ಯತೆಯಾದ ವನಪತಿ ಸಮುದ್ರವಿಜಯ ವಸುದೇವರನ್ನು ನೋಡಿ ಸಂತುಷ್ಟಳಾಗಿ ಅವರಿಂದ ಬೀಳ್ಕೊಂಡು ತನ್ನೆಡೆಗೆ ಹೋದಳು.

ಶೂರನೂ ನಿರ್ಜಿತರಾಜಸಮೂಹನೂ ಉದಾರ ಚಾರುಚರಿತನೂ ವಿದ್ಯಾಧರೀವಲ್ಲಭನೂ ದೇವಸನ್ನಿಭನೂ ಆಪ್ತವಿಭವನೂ ಆದ ವಸುದೇವನನ್ನು ಕಂಡು ಶೌರ್ಯಪುರದ ಜನರು ಅತ್ಯಂತ ಸಂತುಷ್ಟರಾಗಿ ಇದು ಪೂರ್ವಾರ್ಜಿತವಾದ ಜಿನಧರ್ಮದ ಮಹಿಮೆಯ ಫಲವೆನ್ನುತ್ತಿದ್ದರು.

[ವಿದ್ಯಾಧರಕಾಂಡ ಮುಗಿಯಿತು.]

೩೩. ಕಂಸೋಪಾಖ್ಯಾನ ಬಲದೇವವಾಸುದೇವ ದೇವಕೀತನಯಾಗಾರಚರಿತ ವರ್ಣನ

ಅನಂತರ ವಸುದೇವನು ಉತ್ತಮರಾದ ರಾಜಪುತ್ರರ ಕೋರಿಕೆಯ ಮೇರೆಗೆ ಅವರಿಗೆ ಶಸ್ತ್ರವಿದ್ಯೋಪದೇಶವನ್ನು ಮಾಡಿಸುತ್ತ ಸೂರ್ಯಪುರದಲ್ಲಿ (ಶೌರ್ಯಪುರದಲ್ಲಿ) ಇರುತ್ತಿದ್ದನು. ಒಮ್ಮೆ ಆತನು ಧನುರ್ವಿದ್ಯಾಪ್ರವೀಣರಾದ ಕಂಸ ಮೊದಲಾದ ತನ್ನ ಶಿಷ್ಯರನ್ನೊಡಗೊಂಡು ಜರಾಸಂಧನನ್ನು ನೋಡಲೆಂದು ರಾಜಗೃಹಕ್ಕೆ ಹೊರಟನು. ಆಗ ಆ ನಗರವು ಹೊರಗಿಂದ ಬಂದ ರಾಜರ ಸಂದಣಿಯಿಂದ ತುಂಬಿತ್ತು. ಜರಾಸಂಧನು ಹೊರಡಿಸಿದ ಒಂದು ಘೋಷಣೆಯನ್ನು ಅಲ್ಲಿ ಸಾರುತ್ತಿದ್ದು, ಅದನ್ನಾಲಿಸುವರ ಪೈಕಿ ವಸುದೇವನೂ ಒಬ್ಬನಾದನು. ಆ ಘೋಷಣೆಯಿದು : ''ಸಿಂಹಪುರವಾಸಿ ಸಿಂಹರಥರಾಜನು ಉದ್ಧತನು; ಅವನು ದಿಟವಾದ ಸಿಂಹರಥವನ್ನು ಏರುವವನು; ಪರಾಕ್ರಮಿ. ಯಾವಾತನು ಅವನನ್ನು ಜೀವಂತವಾಗಿ ಹಿಡಿದು ತಂದು ನಮ್ಮೆದುರು ತೋರಿಸುತ್ತಾನೋ ಆತನೇ ಶೂರನು, ಶೂರತರನು ಎಂದು ಗಣಿಸಲ್ಪಡುತ್ತಾನೆ, ಸನ್ಮಾನಿಸಲ್ಪಡುತ್ತಾನೆ, ಅನ್ಯಜನದುರ್ಲಭವಾದ ಆನುಷಂಗಿಕಫಲವನ್ನು ಪಡೆಯುತ್ತಾನೆ. ಅಂಥವನಿಗೆ ತಾನು ಬಯಸಿದ ದೇಶದೊಡನೆ ನನ್ನ ಮಗಳು ಜೀವದ್ಯಶೆಯನ್ನೂ ಕೊಡುತ್ತೇನೆ.''

ಈ ಆಕರ್ಷಕವಾದ ಘೋಷಣೆಯನ್ನು ಕೇಳಿ, ವೀರೈಕರಸಭಾವಿತನಾದ ವಸುದೇವನು ಕಂಸನಿಂದ ಪತಾಕಾಗ್ರಹಣ ಮಾಡಿಸಿದನು. ಆಮೇಲೆ ಅವನನ್ನೊಡಗೊಂಡು

ವಿದ್ಯಾನಿರ್ಮಿತವಾದ ಸಿಂಹರಥವನ್ನೇರಿ, ಸಿಂಹಪುರಕ್ಕೆ ಹೊರಟನು. ಸಿಂಹರಥನು ಸಿಂಹರಥಾರೂಢನಾಗಿ ವಸುದೇವನನ್ನೆದುರಿಸಿ ಯುದ್ಧಕ್ಕೆ ಬಂದಾಗ, ವಸುದೇವನು ಬಾಣಪ್ರಯೋಗದಿಂದ ಆ ನಿಜಸಿಂಹದ ಶೃಂಖಲವನ್ನು ಕತ್ತರಿಸಿದನು. ಆ ಸಿಂಹ ಓಡಿಹೋಯಿತು. ಆಗಲೇ ಕಂಸನು ಗುರ್ವಾಜ್ಞೆಯಂತೆ ನೆಗೆದು ಹೋಗಿ ಶತ್ರುವನ್ನು ಬಂಧಿಸಿದನು. ಕಂಸನ ಕೌಶಲವನ್ನು ಕಂಡು ವಸುದೇವನು ವರವನ್ನು ಬೇಡುವಂತೆ ಅವನಿಗೆ ಹೇಳಿದಾಗ, ಕಂಸನು ''ಆಚಾರ್ಯ, ಸದ್ಯಕ್ಕೆ ವರವು ನಿಮ್ಮಲ್ಲೇ ಇರಲಿ" ಎಂದನು.

ವಸುದೇವನು ಶತ್ರುವನ್ನೊಯ್ದು ಜರಾಸಂಧನಿಗೆ ತೋರಿಸಿದನು. ಶತ್ರುವನ್ನು ಎದುರಿನಲ್ಲಿ ಕಂಡು ಜರಾಸಂಧನು ಸಂತುಷ್ಟನಾದನು. ವಸುದೇವನಿಗೆ ''ನನ್ನ ಮಗಳು ಜೀವದ್ಯಶೆಯನ್ನು ವರಿಸು'' ಎಂದನು. ವಸುದೇವನು ''ಶತ್ರುವನ್ನು ಹಿಡಿದವನು ಕಂಸನು, ನಾನಲ್ಲ'' ಎಂದನು. ಆಗ ಜರಾಸಂಧನು ಕಂಸನನ್ನು ಸ್ವಜಾತಿಯೇನೆಂದು ಕೇಳಿದನು. ಕಂಸನು ''ರಾಜಾ, ನನ್ನ ತಾಯಿ ಮಂಜೋದರಿ ; ಕೌಶಾಂಬಿಯಲ್ಲಿರುತ್ತಾಳೆ ; ಆಕೆ ಸೀಧುಕಾರಿಣಿ (ಮದ್ಯ ತೆಗೆಯುವವಳು)'' ಎಂದನು. ಆ ಮಾತು ಕೇಳಿ ಜರಾಸಂಧನು ತನ್ನಲ್ಲಿಯೇ ''ಇವನ ಆಕೃತಿಯನ್ನು ನೋಡಿದರೆ ಇವನು ಮದ್ಯತೆಗೆಯುವವಳ ಮಗನಲ್ಲವೆಂದು ಕಾಣುತ್ತದೆ'' ಎಂದು ಆಲೋಚಿಸಿದನು. ಕೂಡಲೇ ತನ್ನ ಕಡೆಯ ಒಬ್ಬ ಮನುಷ್ಯನನ್ನು ಕಳಿಸಿ ಕೌಶಾಂಬಿಯಿಂದ ಮಂಜೋದರಿಯನ್ನು ಕರಸಿದನು. ಅವಳು ಮಂಜೂಷೆಯನ್ನೂ ನಾಮಮುದ್ರಿಕೆಯನ್ನೂ ತೆಗೆದುಕೊಂಡು ಅಲ್ಲಿಗೆ ಬಂದಳು. ದೊರೆ ಅವಳ ಪೂರ್ವಾಪರ ವಿಚಾರವನ್ನು ಪ್ರಶ್ನಿಸಿದನು.

ಅವಳು ''ಪ್ರಭು, ಯಮುನೆಯ ಪ್ರವಾಹದಲ್ಲಿ ಇವನು ಈ ಮಂಜೂಷೆಯ ಸಮೇತ ನನಗೆ ದೊರೆತನು. ಈ ಮಗುವನ್ನು ನೋಡಿ ನನಗೆ ಕರುಣೆಯುಂಟಾಗಿ, ಮುಂದೆ ನಾನು ಉಪಾಲಂಭಸಹಸ್ರವನ್ನು ಇವನ ದೆಸೆಯಿಂದ ಅನುಭವಿಸಬೇಕಾಗಿಬಂದರೂ, ಇವನನ್ನು ಬೆಳಸಿದೆ. ಈ ಹುಡುಗ ಸ್ವಭಾವತಃ ಉಗ್ರಮೂರ್ತಿ. ಪುಣ್ಯವಂತನಾದರೂ ದುರದೃಷ್ಟಶಾಲಿಯೆಂದು ತೋರುತ್ತದೆ. ಹುಡುಗರೊಂದಿಗೆ ಆಡುವಾಗ ಅವರ ತಲೆಗೆ ತಾಟಿಸದ ಹೊರತು ಆಡುವ ಹಾಗಿಲ್ಲ. ಮದ್ಯವನ್ನು ಕೊಳ್ಳಲೆಂದು ಮನೆಗೆ ಬರುತ್ತಿದ್ದ ವೇಶ್ಯೆಯರ ಬಾಲಿಕೆಯರ ಜಡೆಯೆಳೆದು ಎಳೆದು ಅವರನ್ನು ಗೋಳಿಡಿಸದೆ ಬಿಡುವ ಹಾಗಿಲ್ಲ. ಈತನ ಈ ದುಷ್ಪ್ರವೃತ್ತಿಯಿಂದ ಜನರು ನನ್ನಲ್ಲಿಗೆ ದೂರು ತರುತ್ತಿದ್ದರು. ಅದರಿಂದ ನಾನು ಹೆದರಿ ಇವನನ್ನು ಮನೆಯಿಂದ ಹೊರಡಿಸಿಬಿಟ್ಟೆ. ಇವನು ಶಸ್ತ್ರಶಿಕ್ಷೆಯನ್ನು ಕಲಿಯಲು ಬಯಸಿ ಯಾರಲ್ಲಿಯೋ ಶಿಷ್ಯನಾದನು. ಈ ಕಂಚಿನ ಪೆಟ್ಟಿಗೆಯೇ ಇವನ ತಾಯಿ ; ನಾನಲ್ಲ. ಇವನ ಗುಣದೋಷಗಳಿಗೂ ನನಗೂ ಏನೂ ಸಂಬಂಧವಿಲ್ಲ. ಈ ಪೆಟ್ಟಿಗೆಯನ್ನು ತೆಗೆದುಕೊಳ್ಳಿ''—ಎಂದು ನುಡಿದಳು. ಜತೆಗೆ ತಂದಿದ್ದ ಆ ಪೆಟ್ಟಿಗೆಯನ್ನು ದೊರೆಗೆ ತೋರಿಸಿದಳು.

ಅದನ್ನು ತೆರೆಯುತ್ತಲೂ, ಅದರಲ್ಲಿ ಅವನ ನಾಮಮುದ್ರಿಕೆ ಕಂಡಿತು. ಅದನ್ನು ತೆಗೆದುಕೊಂಡು ದೊರೆ ಓದಿದನು : ''ಈತನು ಉಗ್ರಸೇನ ಪದ್ಮಾವತಿಯರ ಮಗ.

ಇವನು ಗರ್ಭಸ್ಥನಿರುವಾಗಲೇ ಅತ್ಯುಗ್ರನಾಗಿದ್ದನು (ಆದ್ದರಿಂದ ಹೆದರಿ ಇವನನ್ನು ತ್ಯಜಿಸಲಾಗಿದೆ). ಇವನು ಬದುಕಿರಲಿ ; ಇವನ ಕರ್ಮವೇ ಇವನನ್ನು ರಕ್ಷಿಸಲಿ.'' ಹೀಗೆ ಓದಿ ನೋಡಿ, ಜರಾಸಂಧನು ಅವನು ತನ್ನ ಸೋದರಳಿಯನೆಂದರಿತು ಹರ್ಷಿಸಿ ಅವನಿಗೆ ಮಗಳಾದ ಜೀವದ್ಯಶೆಯನ್ನಿತ್ತನು. ತಾನು ಹುಟ್ಟುತ್ತಲೇ ತಂದೆ ತನ್ನನ್ನು ನದಿಯಲ್ಲಿ ತ್ಯಜಿಸಿದನು ಎಂಬುದನ್ನರಿತ ಕಂಸನು ಕ್ರುದ್ಧನಾಗಿ, ಜರಾಸಂಧನಿಂದ ಮಥುರೆಯ ರಾಜ್ಯ ಬೇಡಿ, ಅವನಿಂದ ಪಡೆದನು. ಸರ್ವಸೈನ್ಯಸಮೇತನಾಗಿ ಜೀವದ್ಯಶೆಯೊಂದಿಗೆ ಮಥುರೆಗೆ ಹೊರಟನು. ನಿರ್ದಯಿಯಾದ ಆತನು ಅಲ್ಲಿಗೆ ಸೇರುತ್ತಲೂ ತಂದೆ ಉಗ್ರಸೇನನೊಂದಿಗೆ ಯುದ್ಧ ಹೂಡಿದನು. ಅವನನ್ನು ಯುದ್ಧದಲ್ಲಿ ಗೆದ್ದು ಆಗಲೇ ಬಂಧಿಸಿಬಿಟ್ಟನು. ಉಗ್ರಸೇನನ ಓಡಾಟವನ್ನು ಪ್ರತಿಬಂಧಿಸಿ, ಅವನನ್ನು ಪುರದ್ವಾರ ಗೋಪುರದಲ್ಲಿ ಸೆರೆಯಿಟ್ಟನು.

ವಸುದೇವನಿಂದ ಉಪಕೃತನಾದ ಕಂಸನು ಅವನಿಗೆ ಪ್ರತ್ಯುಪಕಾರಮಾಡಲು ಬಯಸುತ್ತಿದ್ದನಾದರೂ ಯಾವರೀತಿ ಎಂಬುದನ್ನು ನಿರ್ಣಯಿಸಿರಲಿಲ್ಲ. ವಸುದೇವನ ಬಗ್ಗೆ ಅವನಿಗೆ ಸ್ವಾಮಿ ಭೃತ್ಯಭಾವವಿತ್ತು. ಒಂದುದಿನ ಅವನು ಗುರು ವಸುದೇವನನ್ನು ಭಕ್ತಿಯಿಂದ ಪ್ರಾರ್ಥಿಸಿಕೊಂಡು ಮಥುರೆಗೆ ಕರೆತಂದನು. ಗುರುದಕ್ಷಿಣಾರೂಪವಾಗಿ ತನ್ನ ತಂಗಿ ದೇವಕಿಯನ್ನು ಅವನಿಗಿತ್ತನು. ಕಂಸನ ಒತ್ತಾಯದಿಂದ ವಸುದೇವನು ದೇವಕಿಯೊಂದಿಗೆ ಸುಖದಲ್ಲಿರುತ್ತ ಮಥುರೆಯಲ್ಲಿರತೊಡಗಿದನು. ಜರಾಸಂಧನಿಗೆ ತುಂಬ ಪ್ರಿಯನಾದ ಕಂಸನು ಶೂರಸೇನದೇಶದ ರಾಜಧಾನಿ ಮಥುರೆಯಲ್ಲಿ ರಾಜ್ಯವಾಳತೊಡಗಿದನು.

ಒಂದು ದಿನ ಕಂಸಜ್ಯೇಷ್ಠನಾದ ಅತಿಮುಕ್ತಕ ಮುನಿ ಚರಿಗೆಗಾಗಿ ರಾಜಮಂದಿರಕ್ಕೆ ಬರಲು, ಜೀವದ್ಯಶೆ ಅವನನ್ನು ವಂದಿಸಿ ಅವನ ಮುಂದೆ ಬೆಡಗಿನಿಂದ ನಿಂತು ನರ್ಮಭಾವದಿಂದ “ಇದು ನಿಮ್ಮ ತಂಗಿ ದೇವಕಿಯ ಆನಂದವಸ್ತ್ರ. ಇದೋ ನೋಡಿ'' ಎಂದಳು. ನಿರ್ಬಂಧಚಿತ್ತೆಯೂ ಪ್ರಮತ್ತೆಯೂ ಆದ ಆ ಜೀವದ್ಯಶೆಗೆ ಮುನಿ ತಮ್ಮ ವಚೋಗುಪ್ತಿಯನ್ನು ಬಿಟ್ಟು ``ಎಲ್ಲೈ, ನೀನು ನಗುತ್ತ ಹೇಳುತ್ತಿರುವೆ, ಆದರೆ ದುಃಖಪ್ರದವಾದ ಶೋಕವಿಷಯದಲ್ಲೂ ಹೀಗೆ ನೀನು ಆನಂದಿಸುತ್ತಿರುವುದು ನಿನ್ನ ಅತಿಮೌಢ್ಯವನ್ನು ತೋರಿಸುತ್ತದೆ. ಈ ದೇವಕಿಯ ಗರ್ಭದಲ್ಲಿ ಹುಟ್ಟುವಂಥ ಮಗನು ಮುಂದೆ ನಿನ್ನ ಪತಿಯನ್ನೂ ಪಿತನನ್ನೂ ಕೊಲ್ಲುವಂಥವನಾಗುತ್ತಾನೆ. ಇದು ಚೆನ್ನಾಗಿ ತಿಳಿದಿರಲಿ. ಇದು ಹೀಗೆಯೇ ಆಗತಕ್ಕದ್ದು. ಇದನ್ನು ತಪ್ಪಿಸುವುದು ಯಾರಿಗೂ ಸಾಧ್ಯವಿಲ್ಲ''—ಎಂದನು. ಇದನ್ನು ಕೇಳುತ್ತಲೇ ಜೀವದ್ಯಶೆ ಹೆದರಿದಳು. ಕಣ್ಣೀರು ಹರಿದುವು. ಆಗಲೇ ಅವಳು ಮುನಿಯನ್ನತ್ತ ಬಿಟ್ಟು ಪತಿಯಲ್ಲಿಗೆ ಹೋದಳು. ``ಮುನಿವಾಕ್ಯವು ಸತ್ಯವೇ ಆಗುತ್ತದೆ'' ಎನ್ನುವ ನಂಬುಗೆಯಿಂದ ಅವನಿಗೆ ಎಲ್ಲ ಸಂಗತಿಯನ್ನೂ ಹೇಳಿದಳು. ಹೆಂಡತಿಯ ಆ ಮಾತು ಕೇಳಿ ಕಂಸನೂ ಶಂಕಾಗ್ರಸ್ತನಾದನು.

ತೀಕ್ಷ್ಣಬುದ್ಧಿಯ ಕಂಸನು ಕೂಡಲೇ ಉಪಾಯವನ್ನಾಲೋಚಿಸಿ ಸತ್ಯವಾದಿ ವಸುದೇವನಲ್ಲಿಗೆ ಹೋದನು. ಅವನ ಪಾದಗಳಿಗೆ ಮಣಿದು ವರ ಬೇಡಿದನು. ``ಸ್ವಾಮಿ, ನಾನು ತಮ್ಮಲ್ಲಿ ನ್ಯಾಸವಾಗಿರಿಸಿದ ವರವನ್ನು ಈಗ ಕೊಡಿ. ನಾನು ಬೇಡುವ ವರ ಎಂದರೆ, ಪ್ರಸವಸಮಯದಲ್ಲಿ ದೇವಕಿ ನನ್ನ ಮನೆಯಲ್ಲಿರುವುದಾಗಲಿ ಎಂಬುದೇ.''—ಎಂದನು. ವಸುದೇವನಿಗೆ ಈ ಸಂಗತಿಯೇನೂ ಅರಿವಿಲ್ಲದ್ದರಿಂದ ನಿಶ್ಚಿಂತೆಯಿಂದ ಕಂಸನಿಗೆ ಬೇಡಿದ್ದನ್ನು ಸಲಿಸಿದನು. ಸೋದರನ ಮನೆಯಲ್ಲಿ ಸೋದರಿಗೆ ವಿಪತ್ತಿಯಾಗಬಹುದೆಂಬ ಶಂಕೆ ಹುಟ್ಟಲಾರದಷ್ಟೆ ? ಆಮೇಲೆ ವೃತ್ತಾಂತವು ತಿಳಿಯುತ್ತಲೂ ಅವನ ಹೃದಯ ಪಶ್ಚಾತ್ತಾಪದಿಂದ ನೊಂದಿತು.

ಆಗಲೇ ವಸುದೇವನು ಮಾವಿನ ತೋಪಿನಲ್ಲಿರುತ್ತಿದ್ದ ಅತಿಮುಕ್ತಕರಲ್ಲಿಗೆ ಹೋಗಿ ದೇವಕಿಯೊಂದಿಗೆ ಆತನಿಗೆ ಮಣಿದು ಕುಳಿತನು. ಮುನಿ ಅವರನ್ನು ಹರಸಿದನು. ಆಮೇಲೆ ವಸುದೇವ ತನ್ನ ಮನಸ್ಸಿನಲ್ಲಿದ್ದ ಈ ಪ್ರಶ್ನೆ ಕೇಳಿದನು : ``ಭಗವನ್, ಈ ಕಂಸನು ದುರ್ಬುದ್ಧಿಯಿಂದ ತನ್ನ ತಂದೆಗೂ ಶತ್ರುವಾಗಬೇಕಾದರೆ ಇವನು ಅನ್ಯಜನ್ಮಗಳಲ್ಲಿ ಅಂಥ ಯಾವ ಕರ್ಮ ಮಾಡಿದ್ದಾನೆ ? ಹಾಗೆಯೇ ನನ್ನ ಪುತ್ರ, ಈ ಪಾಪಿಯ ಸಂಹಾರಕನಾಗುವುದು ಹೇಗೆ ? ಇದನ್ನು ತಿಳಿಯಲಪೇಕ್ಷಿಸುತ್ತೇನೆ, ಹೇಳಿ.''

ಅವಧಿಜ್ಞಾನಿಯಾದ ಮುನಿ ಹೀಗೆ ನಿರೂಪಿಸಿದನು : ``ರಾಜಾ, ನಿನ್ನ ಪ್ರಶ್ನೆ ಸರ್ವಜನಪ್ರಿಯವಾದ್ದು ; ಹೇಳುತ್ತೇನೆ ಕೇಳು. ಈ ಮಥುರೆಯಲ್ಲಿ ಉಗ್ರಸೇನ ರಾಜ ಆಳುತ್ತಿದ್ದಾಗ ಪಂಚಾಗ್ನಿತಪ ಮಾಡುತ್ತಿದ್ದ ವಶಿಷ್ಠನೆಂಬ ತಪಸ್ವಿಯಿದ್ದನು. ಆ ಅಜ್ಞಾನಿ ಯಮುನೆಯ ದಂಡೆಯಲ್ಲಿ ತಪಸ್ಸು ಮಾಡುತ್ತಿದ್ದ. ಒಂಟಿಗಾಲಲ್ಲಿ ನಿಲ್ಲುತ್ತಿದ್ದ; ಊರ್ಧ್ವಬಾಹುವಾಗಿರುತ್ತಿದ್ದ. ಅಲ್ಲಿಗೆ ಜನರ ಘಟದಾಸಿಯರು ನೀರಿಗಾಗಿ ಬರುತ್ತಿದ್ದರು ಒಂದು ದಿನ ಜಿನದಾಸ ಶ್ರೇಷ್ಠಿಯ ಪ್ರಿಯಂಗುಲತಿಕೆ ಎಂಬ ಘಟದಾಸಿ ಅಲ್ಲಿಗೆ ಬಂದಳು. ಹಿತೈಷಿಗಳಾದ ಇತರ ಚೇಟಿಕೆಯರು ಆಕೆಗೆ ``ಎಲೇ, ನೀನು ಕೂಡಲೇ ಈ ಸಾಧುವಿಗೆ ನಮಸ್ಕರಿಸು'' ಎಂದರು. ಆದರೆ ಅವಳು ``ಈತನ ಮೇಲೆ ನನಗೆ ಖಂಡಿತವಾಗಿ ಭಕ್ತಿ ಹುಟ್ಟದು, ನಾನೇನು ಮಾಡಲಿ'' ಎಂದಳು. ಆದರೆ ಅವರೆಲ್ಲ ಸೇರಿ ಒತ್ತಾಯದಿಂದ ಅವಳನ್ನು ಕರೆದೊಯ್ದು ಸಾಧುವಿಗೆ ನಮಸ್ಕಾರ ಮಾಡಿಸಿದರು. ಪ್ರಿಯಂಗುಲತಿಕೆಗೆ ರೇಗಿ “ನೀವೆಲ್ಲ ಸೇರಿ ನನ್ನನ್ನು ಬೆಸ್ತನ (ಧೀವರನ) ಕಾಲುಗಳಿಗೆ ಬೀಳಿಸಿದಿರಿ'' ಎಂದಳು. ಈ ಮಾತು ಕೇಳಿ ಆ ಸಾಧುವಿಗೆ ಕೋಪ ಬಂತು. ಅವನು ನೇರವಾಗಿ ಉಗ್ರಸೇನರಾಜನಲ್ಲಿಗೆ ಹೋಗಿ ``ಪ್ರಭು, ಜಿನದತ್ತಸೆಟ್ಟಿ ನನ್ನನ್ನು ನಿಷ್ಕಾರಣವಾಗಿ ನಿಂದಿಸಿದ್ದಾನೆ'' ಎಂದನು. ರಾಜನು ಜಿನದತ್ತನನ್ನು ಕರೆಸಿ ಕೇಳಲು, ಅವನು ``ಸ್ವಾಮಿ, ನಾನು ಈತನನ್ನು ನೋಡಿಯೇ ಇಲ್ಲ ; ನಿಂದಿಸುವ ಮಾತು ಹಾಗಿರಲಿ'' ಎಂದನು. ಆಗ ಸಾಧು ``ಈತನ ದಾಸಿ ನಿಂದಿಸಿದಳು'' ಎಂದನು. ದೊರೆ ಅವಳನ್ನು ಕರೆಸಿ ಕೋಪವನ್ನು ತೋರಿಸುತ್ತ, “ಎಲೇ ಪಾಪಿ, ನೀನು ಈ ಮುನಿಗೆ ಏಕೆ ನಮಸ್ಕರಿಸಲಿಲ್ಲ ; ಪ್ರತಿಯಾಗಿ ನಿಂದಿಸುತ್ತೀಯೇನು ?'' ಎಂದನು. ದಾಸಿ ``ಪ್ರಭು, ಇವನು ಮುನಿಯಲ್ಲ. ಕುಬುದ್ಧಿಯ ಧೀವರನು. ಈತನ ಜಟಾಭಾರದಲ್ಲಿ ಎಲ್ಲಿಯೂ ಶುದ್ಧಿಯೆಂಬುದೇ ಕಾಣದು''—ಎಂದಳು.

ಮುನಿಯ ಜಟೆಗಳು ಶೋಧಿಸಲ್ಪಡಲು ಅನೇಕ ಸಣ್ಣಸಣ್ಣ ಮೀನುಗಳು ಅಲ್ಲಿಂದ ಹೊರಬಿದ್ದವು. ಇದರಿಂದ ಮುನಿ ಲಜ್ಜಿತನಾದನು. "ಇವನು ಅಸತ್ಯವಾದಿ" ಎಂದು ಜನ ಹಾಸ್ಯಮಾಡಿದರು. ರಾಜನು ಹೀಗೆ ಪರೀಕ್ಷಿಸಲು ಆ ತಪಸ್ವಿ ಕ್ರುದ್ಧನಾಗಿ ಮಥುರೆಯನ್ನು ಬಿಟ್ಟು ಹೊರಟು ಹೋದನು. ವಾರಣಾಸಿಗೆ ಹೋಗಲು ನಿಶ್ಚಯಿಸಿ, ಅಲ್ಲಿಗೆ ಹೋಗಿ ಸೇರುತ್ತಲೂ ಊರ ಹೊರಗೆ ಗಂಗೆಯ ತಟದಲ್ಲಿ ತಪಸ್ಸಿನಲ್ಲಿದ್ದನು. ಒಂದು ದಿನ ೫೦೦ ಶಿಷ್ಯರೊಂದಿಗೆ ವೀರಭದ್ರಮುನಿ ಅಲ್ಲಿಗೆ ಬಂದನು. ಆ ಮುನಿಸಂಘದಲ್ಲಿ ನವದೀಕ್ಷಿತನೊಬ್ಬನು ವಶಿಷ್ಠನ ತಪಸ್ಸು ನೋಡಿ "ಆಹಾ ! ಈತನು ಉಗ್ರತಪಸ್ವಿ ವಶಿಷ್ಠ" ಎಂದು ಆತನನ್ನು ಪ್ರಶಂಸಿಸಿದನು. ಆಗ ಆಚಾರ್ಯನು ಅವನನ್ನು ತಡೆದು "ಈ ಅಜ್ಞಾನಿಯ ತಪ ಎಂಥದು !" ಎಂದನು. ಕೂಡಲೇ ವಶಿಷ್ಠನು "ನಾನು ಹೇಗೆ ಅಜ್ಞಾನಿ ?" ಎಂದನು. ಅದಕ್ಕೆ ಗುರು "ನೀನು ಷಡ್ಜೀವನಿಕಾಯಗಳಿಗೆ ಪೀಡೆ ಮಾಡುವುದರಿಂದ ಅಜ್ಞಾನಿ ; ಪಂಚಾಗ್ನಿತಪದಲ್ಲಿ ಅಗ್ನಿಸಂಸರ್ಗ ತಪ್ಪದೆ ಆಗುತ್ತದೆ ; ಈ ಅಗ್ನಿಯ ಮೂಲಕ ಪಂಚೇಂದ್ರಿಯಾದಿ ಜೀವಗಳು ತಪ್ಪದೆ ಸುಡುತ್ತವೆ. ಸ್ಥಾವರ ಮತ್ತು ತ್ರಸ ಜೀವಿಗಳ ವಿಘಾತವಾಗುವಾಗ ಪ್ರಾಣಸಂಯಮ ಹೇಗೆ ಸಾಧ್ಯ? ಜೈನಮಾರ್ಗವೇ ಸನ್ಮಾರ್ಗ. ಅದರಲ್ಲಿಯೇ ಸಂಯಮ ತಪ ದರ್ಶನಾದಿಗಳು, ಉಂಟಾಗುತ್ತವೆ. ಎಲೇ ತಪಸ್ವಿ, ನಿಮ್ಮ ತಂದೆ ಸತ್ತು ಹಾವಾಗಿರುವುದೂ. ಈ ಜ್ವಾಲೆಗಳಲ್ಲಿ ಧೂಮಪಂಕ್ತಿ ಕವಿದ ಈ ಇದೇ ಸೌದೆಯಲ್ಲಿ ಸೇರಿ ಸುಡುತ್ತಿರುವುದೂ ನಿನಗೆ ಗೊತ್ತೇನು ?" ಎಂದನು. ಕೂಡಲೇ ವಶಿಷ್ಠನು ಕೊಡಲಿಯಿಂದ ಆ ಕಟ್ಟಿಗೆಯನ್ನು ಸೀಳಿ ನೋಡಲು ಅದರೊಳಗೆ ಹಾವು ಸುಡುತ್ತ ಒದ್ದಾಡುವುದು ಕಂಡಿತು. ಆಮೇಲೆ ಆಚಾರ್ಯನು ಮತ್ತೆ "ನಿಮ್ಮ ತಂದೆಯ ಹೆಸರು ಬ್ರಹ್ಮ. ಅವನೂ ನಿನ್ನ ಹಾಗೆಯೇ ತಪಸ್ವಿಧರ್ಮ ನಡಸುತ್ತಿದ್ದ. ಅದರಿಂದಾಗಿಯೇ ಅವನಿಗೆ ಈ ಕುತ್ಸಿತಗತಿ."—ಎಂದು ತಿಳಿಸಿದನು. ಆಚಾರ್ಯನಿಂದ ಈಯೆಲ್ಲ ತಿಳಿದು ವಶಿಷ್ಠನು ತಾನು ಅಜ್ಞಾನಿಯೆಂದೂ ಜೈನಧರ್ಮವು ಸಮ್ಯಗ್ಜ್ಞಾನದಿಂದ ಪರಿಪೂರ್ಣವಾದುದೆಂದೂ ಅರಿತನು. ಅದೇ ವೀರಭದ್ರಮುನಿಯಲ್ಲಿ ಜೈನದೀಕ್ಷೆಗೊಂಡನು.

ವಶಿಷ್ಠನೊಂದಿಗೆ ಹಲವರು ತಪಸ್ಯೆಯಲ್ಲಿದ್ದರಾದರೂ, ಲಾಭಾಂತರಾಯ ಕರ್ಮದ ಉದಯದಿಂದ ಅವರಲ್ಲೆಲ್ಲ ವಶಿಷ್ಠನೊಬ್ಬನಿಗೇ ಸರಿಯಾಗಿ ಭಿಕ್ಷಾಲಾಭವಾಗುತ್ತಿರಲಿಲ್ಲ. ಆಮೇಲೆ ವೀರಭದ್ರಮುನಿ ಸೇವಾನಿಮಿತ್ತವಾಗಿ, ಆಗಮಾಭ್ಯಾಸಕ್ಕಾಗಿ ಆತನನ್ನು ಶಿವಗುಪ್ತಯತಿಗೆ ಒಪ್ಪಿಸಿದನು. ಆರುತಿಂಗಳ ಕಾಲ ತಪಸ್ಸು ಮಾಡಿದಮೇಲೆ ವಶಿಷ್ಠಮುನಿಯನ್ನು ಶಿವಗುಪ್ತಯತಿ ವೀರದತ್ತಮುನಿಗೆ ಒಪ್ಪಿಸಿದನು. ಈತನು ಆರು ತಿಂಗಳ ಕಾಲ ತನ್ನಲ್ಲಿರಿಸಿಕೊಂಡು ವಶಿಷ್ಠನನ್ನು ಸುಮತಿಯೆಂಬ ಮುನಿಗೆ ಒಪ್ಪಿಸಿದನು. ಆತನು ಕೂಡ ಆರುತಿಂಗಳ ಕಾಲ ನೋಡಿಕೊಂಡನು. ಹೀಗೆ ಅನೇಕ ಗುರುಗಳ ಬಳಿಯಲ್ಲಿ ಇರುತ್ತಿದ್ದುದರಿಂದ ವಶಿಷ್ಠನು ಮುನಿಧರ್ಮವಿಧಿಯನ್ನು ಚೆನ್ನಾಗಿ ಅರಿತನು ; ಪರೀಷಹಗಳ ಸಹನೆ ಚೆನ್ನಾಗಿ ಅಭ್ಯಾಸವಾಯಿತು. ಇಂಥ ವಶಿಷ್ಠಮುನಿ ಭೂಮಿಯಲ್ಲಿ ಏಕವಿಹಾರಿಯಾಗಿ ಹೊರಟನು.

ಮಹಾತಪಸ್ವಿ ವಶಿಷ್ಠಮುನಿ ವಿಹಾರಿಸುತ್ತ ಒಮ್ಮೆ ಆಕಸ್ಮಿಕವಾಗಿ ಮಥುರೆಗೆ ಬಂದನು. ರಾಜರೂ ಪ್ರಜೆಗಳೂ ವಂದಿಸಿದರು. ಒಮ್ಮೆ ಆತನು ಪರ್ವತಾಗ್ರದಲ್ಲಿ ಆತಾಪನ ಯೋಗದಲ್ಲಿರಲು ಆತನ ತಪಸ್ಸಿಗೆ ವಶೀಭೂತರಾದ ಸಪ್ತದೇವತಾಸ್ತ್ರೀಯರು ಬಂದು "ನಾವು ನಿಮಗಾಗಿ ಏನು ಕೆಲಸ ಮಾಡೋಣ" ಎಂದು ಕೇಳಿದರು. ಆತನು ಅವರಿಗೆ "ನನ್ನದೇನೂ ಕೆಲಸವಿಲ್ಲ" ಎಂದು ಹೇಳಿ ಅವರನ್ನು ಮರಳಿಸಿದನು. ಆ ವನದೇವತೆಯರು ಹೊರಟುಹೋದರು. ಆಹಾರೇಚ್ಛೆಯಿಲ್ಲದ ವಶಿಷ್ಠಮುನಿ ಒಂದು ತಿಂಗಳ ಉಪವಾಸ ನಿಯಮವಾಚರಿಸಿ ತಪಸ್ಸಿನಲ್ಲಿದ್ದನು. ಪ್ರಜೆಗಳೆಲ್ಲ ಆತನ ಪಾರಣೆಯ ದಿವಸಗಳಲ್ಲಿ ಆತನಿಗೆ ಆಹಾರದಾನಮಾಡಲು ಬಯಸುತ್ತಿದ್ದರು. ಆದರೆ ಉಗ್ರಸೇನನು ಒಂದು ದಿನ ಪೌರರಿಗೆ ಮಾಸೋಪವಾಸಿ ಮುನಿಗೆ ತಾನೇ ಆಹಾರದಾನ ನೀಡುವುದಾಗಿ ತಿಳಿಸಿ, ಮಥುರೆಯ ಎಲ್ಲ ದಾತೃಗಳಿಗೂ ಅವರು ಆಹಾರ ನೀಡದಂತೆ ವಿಧಿಸಿದನು. ಮುನಿಯು ಒಂದೊಂದು ತಿಂಗಳ ಮೇಲೂ ಮೂರು ಬಾರಿ ಪಾರಣೆಗೆಂದು ಊರೊಳಗೆ ಬಂದನಾದರೂ ಆ ಮೂರು ಬಾರಿಯೂ ಅರಸನು ಪ್ರಮಾದವಶನಾಗಿ ಆಹಾರನೀಡುವುದನ್ನು ಮರೆತುಹೋದನು. ಮೊದಲ ಪಾರಣೆಯಂದು ಜರಾಸಂಧನ ದೂತನು ಬಂದುದರಿಂದಲೂ, ಎರಡನೆಯ ಬಾರಿ ಬೆಂಕಿ ಬಿದ್ದು ಹಗರಣವಾದುದರಿಂದಲೂ. ಮೂರನೆಯ ಬಾರಿ ಆನೆಯ ದೆಸೆಯಿಂದ ಕೋಲಾಹಲವಾದುದರಿಂದಲೂ, ಮುನಿಗೆ ಆಹಾರದಾನ ಮಾಡುವುದು ಮರೆಯಿತು. ಮುನಿ ಆಹಾರಕ್ಕಾಗಿ ಮಥುರೆಯನ್ನೆಲ್ಲ ಸುತ್ತಿದನಾದರೂ ಎಲ್ಲಿಯೂ ಅಲಾಭವೇ ಆಯಿತು. ಕೊನೆಗೆ ಶ್ರಮಪೀಡಿತನಾಗಿ ನಗರದ್ವಾರದಲ್ಲಿ ವಿಶ್ರಮಿಸತೊಡಗಿದನು. ಅವನನ್ನು ನೋಡಿ ಯಾವನೋ ಒಬ್ಬ ಪೌರ "ಇದೇನು ಈ ದೊರೆ ಮಾಡಿದ್ದು ಎಂಥ ಪಾಡಾಯಿತು. ಈ ಮುನಿಗೆ ತಾನೂ ಆಹಾರದಾನಮಾಡನು; ಇನ್ನೊಬ್ಬರೂ ಮಾಡದ ಹಾಗೆ ತಡೆಹಾಕಿದನು" ಎಂದನು. ಇದು ಕೇಳಿ ಮುನಿಗೆ ಕೋಪ ಬಂತು. ಅವನು ಆಗಲೇ ಆ ಮೊದಲು ಬಂದಿದ್ದ ದೇವಿಯರನ್ನು ಸ್ಮರಿಸಿದನು. ಸ್ಮರಿಸುತ್ತಲೇ ಅವರು ಬಂದರು. ಅವರನ್ನು ನೋಡಿ ಮುನಿ "ನೀವು ಅನ್ಯಜನ್ಮದಲ್ಲಿ ನನ್ನ ಕೆಲಸ ಮಾಡುವುದಾಗಲಿ" ಎಂದನು. ಮುನಿಯ ಆಜ್ಞೆಗೊಪ್ಪಿ ಅವರು ಹೋದರು. ಮುನಿ ವನದ ಕಡೆಗೆ ಹೋದನು. ಉಗ್ರಸೇನನನ್ನು ಅಪಮಾನಿಸಲು "ನಾನು ಈ ಉಗ್ರಸೇನನ ಮಗನಾಗಿ ಹುಟ್ಟಿ ಇವನ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆ" ಎಂಬ ಉಗ್ರನಿದಾನವನ್ನು ಸಂಕಲ್ಪಿಸಿದನು. ತತ್ಪರಿಣಾಮವಾಗಿ ಮುನಿಪದದಿಂದ ಭ್ರಷ್ಟನಾಗಿ ಮಿಥ್ಯಾತ್ವಕ್ಕೆ ಸಂದು, ಆಗಲೇ ಸತ್ತು, ಉಗ್ರಸೇನನ ಪತ್ನಿ ಪದ್ಮಾವತಿಯ ಗರ್ಭದಲ್ಲಿ ನೆಲಸಿದನು.

ಕಂಸನ ಜೀವ ಪದ್ಮಾವತಿಯ ಗರ್ಭದಲ್ಲಿದ್ದಾಗ ಆಕೆಯ ಶರೀರ ಇದ್ದಕ್ಕಿದ್ದಂತೆ ದುರ್ಬಲವಾಯಿತು. ಒಂದು ದಿನ ಅರಸನು ಏಕಾಂತದಲ್ಲಿ ಅವಳನ್ನು "ಕಾಂತೇ, ನಿನ್ನ ಬಯಕೆಯೇನು ? ಯಾತಕ್ಕಾಗಿ ಹೀಗೆ ಒಣಗಿ ಕಡ್ಡಿಯಾಗುತ್ತಿರುವೆ?" ಎಂದನು. ಪದ್ಮಾವತಿ "ನಾಥ, ಗರ್ಭದೋಷದಿಂದ ನನಗೆ ಉಂಟಾಗಿರುವ ಬಯಕೆಯನ್ನು ಹೇಳುವುದಕ್ಕೆ

ಯೋಗ್ಯವಲ್ಲ, ಆಲೋಚಿಸುವುದಕ್ಕೆ ತರವಲ್ಲ'' ಎಂದಳು. ಅರಸನು ''ನಿನ್ನ ಬಯಕೆಯನ್ನು ಹೇಳಿಯೇ ತೀರಬೇಕು"ಎಂದು ಹಟ ಹಿಡಿಯುತ್ತಲೂ, ಆಕೆ ದುಃಖಿಗದ್ಗದಸ್ವರದಲ್ಲಿ ''ನಾಥ, ನಿಮ್ಮ ಹೊಟ್ಟೆಯನ್ನು ಸೀಳಿ ನಿಮ್ಮ ನೆತ್ತರನ್ನು ಕುಡಿಯಬೇಕೆಂಬುದೇ ಆ ನನ್ನ ಬಯಕೆ" ಎಂದಳು. ಮಂತ್ರಿಗಳ ಉಪಾಯದಿಂದ ಅವಳ ಬಯಕೆ ನೆರವೇರಿಸಲ್ಪಟ್ಟಿತು. ಒಂಬತ್ತು ತಿಂಗಳ ಮೇಲೆ ಪದ್ಮಾವತಿ ಭ್ರುಕುಟೀಕುಟಿಲಾನನನಾದ ಒಬ್ಬ ಮಗನನ್ನು ಹಡೆದಳು. ಬಾಲಕನು ಗರ್ಭಕಾಲದಿಂದಲೇ ರೌದ್ರನಾಗಿದ್ದುದರಿಂದ, ರಾಣಿ ಭಯಪಟ್ಟು ಅವನನ್ನು ಕಂಚಿನ ಪೆಟ್ಟಿಗೆಯಲ್ಲಿರಿಸಿ ರಹಸ್ಯವಾಗಿ ಯಮುನಾಪ್ರವಾಹದಲ್ಲಿ ಬಿಟ್ಟುಬಿಟ್ಟಳು. ಅದು ತೇಲಿಕೊಂಡು ಹೋಗಿ ಕೌಶಾಂಬಿಯನ್ನು ಸೇರಿತು. ಅಲ್ಲಿ ಒಬ್ಬ ಸೀಧುಕಾರಿಣಿಗೆ ಅದು ದೊರೆತು, ಅವಳು ಮಗುವಿಗೆ ಕಂಸನೆಂದು ಹೆಸರಿಟ್ಟು ಬೆಳೆಸಿದಳು. ಅಯ್ಯಾ ರಾಜಾ, ಮುಂದಿನ ವೃತ್ತಾಂತ ನಿನಗೆ ವೇದ್ಯವೇ ಆಗಿದೆ. ನಿದಾನದೋಷದಿಂದಾಗಿ ದೂಷ್ಯನಾಗಿ ಇವನು ತಂದೆಯನ್ನು ನಿಗ್ರಹಿಸಿದನು. ಮುಂದೆ ನಿನ್ನ ಮಗ ಇವನನ್ನು ಕೊಲ್ಲುತ್ತಾನೆ ; ಉಗ್ರಸೇನನನ್ನು ಬಂಧನದಿಂದ ಬಿಡಿಸುತ್ತಾನೆ. ರಾಜಾ, ಕಂಸನು ತನ್ನ ತಂದೆಯನ್ನು ಬಂಧನದಲ್ಲಿ ಏಕೆ ಹಾಕಿದನು—ಎಂಬುವರ ಕಾರಣವನ್ನು ಹೇಳುವಾಗ ಕಂಸನ ವೃತ್ತಾಂತವನ್ನು ತಿಳಿಸಿ ಆಯಿತು. ಈಗ ನಿನ್ನ ಪುತ್ರರ ವೃತ್ತಾಂತವನ್ನು ತಿಳಿಸುತ್ತೇನೆ, ಕೇಳು.

ದೇವಕಿಯ ಏಳನೆಯ ಮಗ ಶಂಖ ಚಕ್ರ ಗದಾ ಖಡ್ಗಗಳನ್ನು ಧರಿಸುವವನೂ ಕಂಸಾದಿ ಶತ್ರುಗಳನ್ನು ಸಂಹರಿಸುವವನೂ ಸಮಸ್ತ ಪೃಥ್ವಿಯನ್ನು ಪಾಲಿಸುವವನೂ ಆಗುತ್ತಾನೆ. ಇನ್ನುಳಿದ ಆರು ಮಂದಿ ಪುತ್ರರೂ ಚರಮಶರೀರಿಗಳು.ಅವರಿಗೆ ಅಪಮೃತ್ಯು ಶಕ್ಯವಿಲ್ಲ. ಆದ್ದರಿಂದ ನೀನು ಚಿಂತಾಪೀಡಿತನಾಗಬೇಕಿಲ್ಲ. ನಾನು ರಾಮಭದ್ರ (ಬಲದೇವ) ಸಮೇತರಾದ ಆಯೆಲ್ಲರ ಈ ಜನ್ಮವೃತ್ತಾಂತವನ್ನೂ ನಿನಗೆ ಹೇಳುತ್ತೇನೆ. ನಿನ್ನ ಪತ್ನಿಯೊಂದಿಗೆ ಕೇಳು.

ಸೂರಸೇನರಾಜನು ಮಧುರೆಯಾಳುತ್ತಿದ್ದಾಗ ಅಲ್ಲಿ ದ್ವಾದಶಕೋಟೀಶ್ವರನಾದ ಭಾನುವೆಂಬ ವೈಶ್ಯನಿದ್ದನು. ಅವನ ಪತ್ನಿ ಯಮುನೆ. ಇವರಿಗೆ ಸುಭಾನು, ಭಾನುಕೀರ್ತಿ, ಭಾನುಷೇಣ, ಶೂರ, ಸೂರದೇವ, ಶೂರದತ್ತ, ಶೂರಸೇನ ಎಂಬ ಏಳು ಮಂದಿ ಮಕ್ಕಳಾದರು. ಇವರು ಮನೋಹರಾಕಾರರೂ ಅನ್ಯೋನ್ಯಾನುವರ್ತಿಗಳು. ಇವರಿಗೆ ಕ್ರಮವಾಗಿ ಕಾಲಿಂದಿ, ತಿಲಕಾ, ಕಾಂತಾ, ಶ್ರೀಕಾಂತಾ, ಸುಂದರಿ, ದ್ಯುತಿ, ಚಂದ್ರಕಾಂತಾ—ಎಂಬವರು ಪತ್ನಿಯರು. ಒಮ್ಮೆ ಭಾನುಶ್ರೇಷ್ಠಿ ಅಭಯನಂದಿ ಗುರುವಿನ ಬಳಿಯಲ್ಲಿ ದೀಕ್ಷೆಗೊಂಡನು ; ಅವನ ಪತ್ನಿ ಜಿನದತ್ತಾರ್ಯಿಕೆಯರಲ್ಲಿ ದೀಕ್ಷೆಗೊಂಡಳು. ಏಳು ಮಂದಿ ಸೋದರರೂ ದ್ಯೂತ ಹಾಗೂ ವೇಶ್ಯಾವ್ಯಸನದಲ್ಲಿ ತೊಡಗಿ ತಂದೆಯ ಆಸ್ತಿಯನ್ನೆಲ್ಲ ಕಳೆದರು. ಅವರಲ್ಲಿ ಮತ್ತೇನೂ ಉಳಿಯದೇ ಹೋದಾಗ ಅವರೆಲ್ಲ ಉಜ್ಜಯಿನಿ ನಗರಕ್ಕೆ ಕಳ್ಳತನ ಮಾಡಲು ಹೋದರು. ಆ ನಗರದ ಹೊರಗೆ ಮಹಾಕಾಲವೆಂಬ ವನ. ಅಲ್ಲಿ ಸಂತತಿರಕ್ಷೆಗಾಗಿ ಕಿರಿಯ ತಮ್ಮನನ್ನು ಇರಿಸಿ, ಉಳಿದ ಆರು

ಮಂದಿಯೂ ರಾತ್ರಿಯವೇಳೆ ನಗರವನ್ನು ಹೊಕ್ಕರು. ಆಗ ಉಜ್ಜಯಿನಿಯ ಅರಸು ವೃಷಭಧ್ವಜ. ಅವನ ಪತ್ನಿ ಕಮಲೆ. ಅರಸನಿಗೆ ದೃಢಮುಷ್ಟಿಯೆಂಬ ಒಬ್ಬ ಸಮರ್ಥ ಯೋಧನಿದ್ದನು. ಅವನ ಪತ್ನಿ ವಪ್ರಶ್ರೀ. ಇವರ ಮಗ ವಜ್ರಮುಷ್ಟಿ. ಇವನು ಯುವಕನಾಗುತ್ತಲೂ ಕಾಮಪೀಡಿತನಾಗಿರಲು, ತಂದೆ ಇವನಿಗೆ ವಿಮಲಚಂದ್ರರಾಜನಿಗೆ ರಾಣಿ ವಿಮಲೆಯೆಂಬವಳಲ್ಲಿ ಆದ ಮಂಗಿಯೆಂಬ ಮಗಳನ್ನು ತಂದು ಮದುವೆಮಾಡಿದನು. ಮಂಗಿ ವಜ್ರಮುಷ್ಟಿಗೆ ತುಂಬ ಪ್ರಿಯಳಾಗಿದ್ದಳು. ವೀಣೆಯ ಹಾಗೆ ಯಾವಾಗಲೂ ಅವನಿಗೆ ಅಂಟಿಕೊಂಡೇ ಇರುತ್ತಿದ್ದಳು. ಅತ್ತೆಯ ಸೇವೆ ಶುಶ್ರೂಷೆಗಳಿಗೆ ಲಕ್ಷ್ಯಕೊಡುತ್ತಿರಲಿಲ್ಲ. ಇದರಿಂದ ಅವಳ ಅತ್ತೆಗೆ ಒಳಗೊಳಗೇ ಮಂಗಿಯ ಮೇಲೆ ದ್ವೇಷವಿದ್ದು, ಅವಳನ್ನು ಕೊಲ್ಲುವ ಉಪಾಯಕ್ಕಾಗಿ ಸದಾ ಚಿಂತಿಸುತ್ತಿದ್ದಳು. ಅವಳು ಇದೇ ಯೋಚನೆಯಲ್ಲಿರುವಾಗ, ಒಮ್ಮೆ ವಸಂತೋತ್ಸವದ ಸಮಯ ಪ್ರಾಪ್ತವಾಗಿ ಅವಳ ಮಗ ವಜ್ರಮುಷ್ಟಿ ಪ್ರಮದವನಕ್ಕೆ ಕ್ರೀಡಾನಿಮಿತ್ತವಾಗಿ ರಾಜನೊಂದಿಗೆ ಮೊದಲೇ ಹೊರಟುಹೋದನು. ಮಂಗಿಯನ್ನು ಕಂಡು ''ನೀನು ಕೂಡ ಕೂಡಲೇ ಹಿಂದೆಯೇ ಬಂದುಬಿಡು" ಎಂದು ಹೇಳಿ ಹೋದನು. ಆದರೆ ಅತ್ತೆ ಮಂಗಿಯನ್ನು ವಸಂತೋತ್ಸವಕ್ಕೆ ಹೋಗಲು ಬಿಡಲಿಲ್ಲ. ಅವಳು ದುರ್ಬುದ್ಧಿಯಿಂದ ಒಂದು ಘಟದಲ್ಲಿ ವಿಷಸರ್ಪವನ್ನು ಮೊದಲೇ ತರಿಸಿಟ್ಟಿದ್ದಳು. ಈಗ ಸಮಯ ದೊರೆತದ್ದು ಕಂಡು ಮಂಗಿಯನ್ನು ಕರೆದು ''ನೀನು ವಸಂತೋತ್ಸವಕ್ಕೆ ಹೋಗಲು ಸಾಧ್ಯವಿಲ್ಲವಲ್ಲ ಎಂದು ಖಿನ್ನಳಾಗಬೇಡ. ನಾನು ನಿನಗಾಗಿ ಮೊದಲೇ ಒಳ್ಳೆಯ ಹಾರವನ್ನು ಮಾಡಿಸಿದ್ದೇನೆ. ಆ ಘಟದಲ್ಲಿರುವ ಅದನ್ನು ತೆಗೆದು ಹಾಕಿಕೋ '' ಎಂದಳು. ಮುಗ್ಧಮನಸ್ಸಿನ ಮಂಗಿ ಮಾಲೆಯ ಆಸೆಯಿಂದ ಅದನ್ನು ಕೊಳ್ಳಲು ಘಟದೊಳಗೆ ಕೈಯಿಡುತ್ತಲೂ ವಿಷಸರ್ಪ ಅವಳನ್ನು ಕಚ್ಚಿತು. ವಿಷವೇಗದಿಂದ ಮೂರ್ಛೆಹೋದಳು. ಅತ್ತೆ ತನ್ನ ಭೃತ್ಯರ ಮೂಲಕವಾಗಿ ಮಂಗಿಯ ದೇಹವನ್ನು ಮಹಾಕಾಲ ಶ್ಮಶಾನದಲ್ಲಿ ಹಾಕಿಸಿದಳು. ವಜ್ರಮುಷ್ಟಿ ರಾತ್ರಿ ಮನೆಗೆ ಬಂದಾಗ ಅವನಿಗೆ ಸುದ್ದಿ ತಿಳಿಯಿತು. ಪ್ರಿಯೆಯನ್ನು ಹುಡುಕಲೆಂದು ಹೋಗಿ ಆ ಶ್ಮಶಾನವನ್ನು ಹೊಕ್ಕನು. ಅವನ ಕೈಯ ಹೊಳಪಿನ ಕತ್ತಿಯ ನೆರವಿಂದ ನಿಃಶಂಕನಾಗಿ ಮುಂದುವರಿದನು. ಮುನ್ನಡೆಯುತ್ತ ಇರುಳು ಆ ಶ್ಮಶಾನದಲ್ಲಿ ಪ್ರತಿಮಾಯೋಗದಲ್ಲಿದ್ದ ವರಧರ್ಮ ಮುನಿಯನ್ನು ನೋಡಿದನು. ಅವನನ್ನು ಬಲಗೊಂಡು ವಂದಿಸಿ "ನನಗೆ ಮಂಗಿ ದೊರೆಯುವುದು ಸಾಧ್ಯವಿದ್ದರೆ ನಿಮ್ಮ ಪಾದಗಳನ್ನು ಸಹಸ್ರಕಮಲಗಳಿಂದ ಪೂಜಿಸುತ್ತೇನೆ'' ಎಂದನು. ಹಾಗೆಂದು ಆರಿಕೆ ಮಾಡಿ ಹೆಜ್ಜೆ ಹಾಕುತ್ತಿದ್ದ ಹಾಗೆಯೇ, ಅವನಿಗೆ ಮಂಗಿ ಗೋಚರಿಸಿದಳು. ಮುನಿಯಲ್ಲಿಗೆ ಅವಳನ್ನೊಯ್ದು ತಂದನು. ಅವರ ಚರಣಸ್ಪರ್ಶದಿಂದ ಅವಳು ವಿಷರಹಿತೆಯಾದಳು. ಆಮೇಲೆ ಆತನು ''ನಾನು ಬರುವವರೆಗೆ ನೀನು ಮುನಿಗಳ ಚರಣಪ್ರಾಂತದಲ್ಲೆ ಕುಳಿತಿರಬೇಕು'' ಎಂದು ಅವಳಿಗೆ ಹೇಳಿ, ಕಮಲಗಳನ್ನು ತರಲೆಂದು ತಾನು ಸುದರ್ಶನ ಸರಸ್ಸಿಗೆ ಹೋದನು.

ಹತ್ತಿರದಲ್ಲಿಯೇ ಬಯ್ತಿಟ್ಟುಕೊಂಡಿದ್ದ ಶೂರಸೇನನು ಮಂಗಿಯ ಮೇಲೆ ವಜ್ರ

ಮುಷ್ಟಿಗಿದ್ದ ಪರಮಪ್ರೀತಿಯನ್ನು ನೋಡಿದ್ದನಾದ್ದರಿಂದ ಅವಳ ಮನಸ್ಸನ್ನು ಪರೀಕ್ಷಿಸಲೆಳಸಿ ತಾನು ಅವಳೆದುರು ಕಾಣಿಸಿಕೊಂಡನು. ಆವನು ರೂಪವಂತ. ಸ್ವಾಭಿಪ್ರಾಯವನ್ನು ತೋರಗೊಡದೆ ಅವಳೊಂದಿಗೆ ಸಲ್ಲಾಪಮಾಡುತ್ತ ಸಲಹೆ ಕೊಡತೊಡಗಿದನು. ಮಂಗಿ ಅವನನ್ನು ನೋಡುತ್ತಲೇ ಕಾಮವಿಹ್ವಲೆಯಾದಳು. ಅವಳು ಶೂರಸೇನನ ಬಳಿಗೆ ಬಂದು "ದೇವ, ತಾವು ಕೃಪೆಮಾಡಿ ನನ್ನನ್ನು ಸ್ವೀಕರಿಸಿ" ಎಂದಳು. ಶೂರಸೇನನು "ಎಲ್ಲಿಯವರೆಗೆ ನಿನ್ನ ಪತಿ ಜೀವಿತನಿರುತ್ತಾನೋ ಅಲ್ಲಿಯವರೆಗೆ ನಾನು ಹೇಗೆ ತಾನೆ ನಿನ್ನನ್ನು ಸ್ವೀಕರಿಸಲಾದೀತು? ಹೇ ಪ್ರಿಯೆ, ನಾನು ಆ ಸಮರ್ಥಸುಭಟನ ಬಗ್ಗೆ ಹೆದರುತ್ತೇನೆ" ಎಂದನು. ಅವನ ಮೇಲೆ ಅನುರಕ್ತೆಯಾದ ಮಂಗಿ "ಹೇ ನಾಥ, ಇದರ ಭಯ ನಿನಗೆ ಬೇಡ, ನಾನು ಅವನನ್ನು ಕತ್ತಿಯಿಂದ ಈಗಲೇ ಕತ್ತರಿಸಿ ಹಾಕುತ್ತೇನೆ"—ಎಂದಳು. "ಹಾಗಾದರೆ ನನ್ನ ಒಪ್ಪಿಗೆಯುಂಟು" ಎಂದು ಶೂರಸೇನನು ಹೇಳಿ ಅವಳ ಈ ಕೆಲಸವನ್ನು ನೋಡೋಣವೆಂದು ಅಲ್ಲಿಯೇ ಒಂದೆಡೆ ಬಚ್ಚಿಟ್ಟುಕೊಂಡನು. ಕೆಲ ಸಮಯದ ಮೇಲೆ ವಜ್ರಮುಷ್ಟಿ ಬಂದು ಮುನಿಯ ಪಾದಪೂಜೆ ಮಾಡಿದನು. ಪೂಜಾನಂತರ ಅವನು ಮುನಿಗೆ ಮಣಿದು ನಮಸ್ಕರಿಸುತ್ತಿದ್ದ ಹಾಗೆಯೇ ಮಂಗಿಯು ಅವನ ತಲೆಯ ಮೇಲೆ ಕತ್ತಿಯಿಂದ ಹೊಡೆಯಲುದ್ಯುಕ್ತಳಾದಳು. ಆದರೆ ಶೂರಸೇನನು ಸರ್ರನೆ ಬಂದು ಆ ಕತ್ತಿಯನ್ನು ಸೆಳೆದುಕೊಂಡನು. ಶೂರಸೇನನಿಗೆ ಈ ಘಟನೆಯನ್ನು ಕಂಡು ಸಂಸಾರನಿರ್ವೇಗವುಂಟಾಯಿತು. ಅವನು ತನ್ನನ್ನು ಯಾರು, ಎತ್ತ ಎಂದು ಹೇಳದೆ ಅಲ್ಲಿಂದ ಹೊರಟುಹೋದನು. ಮಂಗಿಗೆ ಅವನ ಆ ಹಿಡಿತದಿಂದ ಅನುಮಾನವುಂಟಾಗಿ, ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಮರುಳಾಟವನ್ನು ನಟಿಸಿ ನೆಲದ ಮೇಲೆ ಬಿದ್ದಳು. ವಜ್ರಮುಷ್ಟಿಗೆ ಮಂಗಿಯ ಈ ದುಷ್ಕಾರ್ಯದ ಸುಳಿವು ಹತ್ತಲಿಲ್ಲ. ಅವನು ಅವಳನ್ನು "ಪ್ರಿಯೆ, ಯಾರಾದರೂ ನಿನ್ನನ್ನು ಅಂಜಿಸಿದರೆ, ಹೇಗೆ ? ಇಲ್ಲಿ ಭಯಕ್ಕೆ ಕಾರಣವೇ ಇಲ್ಲ" ಎಂದು ನುಡಿದು, ಭಯಗ್ರಸ್ತಳಾದ ಆಕೆಯನ್ನೆಬ್ಬಿಸಿಕೊಂಡು, ಮುನಿಗೆ ವಂದಿಸಿ, ಅವಳೊಂದಿಗೆ ಮನೆಗೆ ಹೋದನು.

ಇತ್ತ ಕಳ್ಳತನಕ್ಕೆ ಹೋಗಿದ್ದ ಶೂರಸೇನನ ಸೋದರರು ಕಳ್ಳತನ ಮಾಡಿ ತಂದಿದ್ದ ಧನದಲ್ಲಿ ತಂತಮ್ಮ ಪಾಲನ್ನು ಸಮವಾಗಿ ಕೊಂಡು, ತನ್ನ ಪಾಲನ್ನು ಕೊಳ್ಳುವಂತೆ ಶೂರಸೇನನಿಗೆ ಹೇಳಿದರು. ಶೂರಸೇನನು ಆ ಪಾಲನ್ನು ಕೊಳ್ಳಲು ಇಷ್ಟಪಡಲಿಲ್ಲ. ಅಲ್ಲದೆ "ಜನರು ಹೆಣ್ಣಿಗಾಗಿ ಹಲವು ಅನರ್ಥಗಳನ್ನು ಮಾಡುತ್ತಾರೆ; ಆ ಹೆಣ್ಣು ಎಂದರೆ ವಜ್ರಮುಷ್ಟಿಯ ಹೆಂಡತಿಯಂಥವಳು" ಎಂದನು. ಆ ವೃತ್ತಾಂತವನ್ನು ಕೇಳಿದ ಆರು ಮಂದಿ ಕಿರಿಯ ತಮ್ಮಂದಿರೂ ವಿರಕ್ತರಾಗಿ ಆಗಲೇ ವರಧರ್ಮಮುನಿಗಳ ಬಳಿ ದೀಕ್ಷೆಗೊಂಡರು. ಹಿರಿಯಣ್ಣನು ಆ ಧನವನ್ನು ತನ್ನ ಮತ್ತು ಸೋದರರ ಪತ್ನಿಯರಲ್ಲಿಗೆ ತೆಗೆದುಕೊಂಡು ಹೋದನು. ಆ ಏಳು ಮಂದಿಯೂ ಈ ವೃತ್ತಾಂತವನ್ನು ಕೇಳಿದ ಮೇಲೆ ತಾವೂ ವೈರಾಗ್ಯಗೊಂಡು ದೀಕ್ಷೆ ವಹಿಸಿದರು. ಕೊನೆಗೆ ಹಿರಿಯಣ್ಣ ಸುಭಾನುವಿನ ಬುದ್ಧಿಯೂ ಸನ್ಮಾರ್ಗಕ್ಕೆ ತಿರುಗಿ ಅವನೂ ವರಧರ್ಮರಲ್ಲಿ ದೀಕ್ಷೆಗೊಂಡನು.

ಎಂದೋ ಒಮ್ಮೆ ಈ ಏಳು ಮಂದಿ ಮುನಿಗಳೂ ತಮ್ಮ ಗುರುವೊಂದಿಗೆ ವಿಹಾರಿ

ಸುತ್ತ ಉಜ್ಜಯಿನಿಗೆ ಬಂದರು. ಅವರನ್ನು ಸಂದರ್ಶಿಸಿ ವಜ್ರಮುಷ್ಟಿ ಅವರು ದೀಕ್ಷೆಗೊಂಡ ಕಾರಣವನ್ನು ಪ್ರಶ್ನಿಸಿದನು. ಅವರು ವಜ್ರಮುಷ್ಟಿ ಮಂಗಿಯರ ವೃತ್ತಾಂತ ತಿಳಿಸಿದರು. ಅದನ್ನು ಕೇಳಿ ಅವನು ತುಂಬ ನೊಂದು ಆಗಲೇ ದೀಕ್ಷೆಗೊಂಡನು. ಅದೇ ಕಾಲದಲ್ಲಿ ಜಿನದತ್ತಾರ್ಯಿಕೆಯೊಂದಿಗೆ ವಿಹಾರಿಸುತ್ತ ಬಂದ ಪೂರ್ವೋಕ್ತರಾದ ಏಳು ಮಂದಿ ಆರ್ಯಿಕೆಯರೂ ಉಜ್ಜಯಿನಿಗೆ ಬಂದರು. ಮಂಗಿಯು ಅವರ ದೀಕ್ಷಾಕಾರಣವನ್ನು ಕೇಳಿದಳು. ಅವರು ನಿರೂಪಿಸಿದ ವೃತ್ತಾಂತ ಕೇಳಿ ಅವಳಿಗೆ ತನ್ನ ಹಿಂದಿನ ಸಂಗತಿ ನೆನಪಾಗಿ ಅವಳೂ ದೃಢವ್ರತಗಳನ್ನು ಧರಿಸಿ ದೀಕ್ಷೆಗೊಂಡಳು.

ಆಮೇಲೆ ಉಗ್ರತಪವಾಚರಿಸಿದ ಆ ಏಳು ಜನ ಮುನಿಗಳೂ ಆಯುರಂತದಲ್ಲಿ ಸಮಾಧಿಮರಣದಿಂದ ತೀರಿಕೊಂಡು ಸೌಧರ್ಮಕಲ್ಪದಲ್ಲಿ ಒಂದು ಸಾಗರ ಆಯುಃಪ್ರಮಾಣದ ತ್ರಾಯಸ್ತ್ರಿಂಶತ್ ದೇವರಾದರು.

ಧಾತುಕೀಖಂಡದ ಪೂರ್ವದ ಭರತ ಕ್ಷೇತ್ರದಲ್ಲಿಯ ವಿಜಯಾರ್ಧದ ದಕ್ಷಿಣಶ್ರೇಣಿಯಲ್ಲಿ ನಿತ್ಯಾಲೋಕವೆಂಬುದು ನಗರ. ಅದನ್ನು ಹಿಂದೊಮ್ಮೆ ಚಿತ್ರಚೂಲನೆಂಬರಸು ಆಳುತ್ತಿದ್ದನು; ಪತ್ನಿ ಮನೋಹರಿ. ಇವರಿಗೆ ಹಿರಿಯಣ್ಣ ಸುಭಾನುವಿನ ಜೀವನೇ ಚಿತ್ರಾಂಗದನಾಗಿ ಜನಿಸಿದನು. ಉಳಿದ ಆರು ಮಂದಿ ತಮ್ಮಂದಿರ ಜೀವಗಳೂ ಅದೇ ದಂಪತಿಗಳಿಗೆ ಕ್ರಮವಾಗಿ ಗರುಡಕಾಂತ, ಸೇನಕಾಂತ, ಗರುಡಧ್ವಜ, ಗರುಡವಾಹನ, ಮಣಿಚೂಲ, ಹಿಮಚೂಲ ಎಂಬ ಅವಳಿ ಮಕ್ಕಳಾಗಿ ಹುಟ್ಟಿದರು. ಇವರು ವ್ಯೋಮಚರರು. ಸುಂದರರೂ, ವಿದ್ಯಾಸಕ್ತರೂ, ಮನುಷ್ಯಸಮೂಹದಲ್ಲಿ ಚೂಡಾಮಣಿಪ್ರಾಯರೂ ಆಗಿದ್ದರು. ಅದೇ ಸಮಯದಲ್ಲಿ ಮೇಘಪುರದಲ್ಲಿ ಧನಂಜಯನೆಂಬರಸು ಆಳುತ್ತಿದ್ದನು. ಅವನ ಪತ್ನಿ ಸರ್ವಶ್ರೀ. ಇವರಿಗೆ ಧನಶ್ರೀ ಮಗಳು. ಒಮ್ಮೆ ಇವಳ ಸ್ವಯಂವರವೇರ್ಪಟ್ಟಿತು. ವಿದ್ಯಾಧರರಾಜಪುತ್ರರು ಸೇರಿದರು. ಆದರೆ ಕನ್ಯೆಯು ತನ್ನ ತಂದೆಗೆ ಸೋದರಳಿಯನಾದ ಹರಿವಾಹನನನ್ನು ವರಿಸಿದಳು. ಆಗ ರಾಜಪುತ್ರರು "ಇವಳನ್ನು ತಮ್ಮ ಸಂಬಂಧಿಗೇ ಕೊಟ್ಟು ಮದುವೆ ಮಾಡುವುದಾಗಿದ್ದರೆ ಈ ಸ್ವಯಂವರದ ವ್ಯಾಜದಿಂದ ನಮ್ಮನ್ನೆಲ್ಲ ಕರೆಸಿದ್ದಾದರೂ ಏಕೆ ?" ಎಂದು ಹೇಳುತ್ತ ಕನ್ಯಾಪಿತೃವಿನ ಮೇಲೆ ಕ್ರುದ್ಧರಾದರು. ಆಮೇಲೆ ಆ ಕನ್ಯೆಯ ಆಸೆಯಿಂದ ಪರಸ್ಪರರಲ್ಲೇ ಕಾದಾಡಿ ಕೊಲ್ಲತೊಡಗಿದರು. ಚಿತ್ರಚೂಲನ ಪುತ್ರರೂ ಸ್ವಯಂವರಕ್ಕೆ ಹೋಗಿದ್ದರು. ಅಲ್ಲಿ ನಡೆಯುತ್ತಿದ್ದ ನಿಂದ್ಯವಾದ ಕ್ಷತ್ರವಧೆಯನ್ನು ನೋಡಿ ತಮ್ಮಲ್ಲಿಯೇ "ಈ ವಿಷಮವಾದ ಇಂದ್ರಿಯಕಾಂಕ್ಷೆಯೆಂಬುದೇ ಪಾಪಹೇತು" ಎಂದು ಚಿಂತಿಸಿ ಜುಗುಪ್ಸೆಗೊಂಡು ಭೂತಾನಂದ ಜಿನರ ಬಳಿಯಲ್ಲಿ ದೀಕ್ಷೆಗೊಂಡರು. ಏಳುಮಂದಿ ಮುನಿಗಳೂ ಸಮಾಧಿಮರಣದಿಂದ ತೀರಿಕೊಂಡ ಮೇಲೆ ಮಾಹೇಂದ್ರಕಲ್ಪದಲ್ಲಿ ಸಪ್ತಸಾಗರೋಪಮ ಆಯುರೊಡೆಯರಾಗಿ ಸಾಮಾನಿಕ ದೇವರಾದರು. ಆಮೇಲೆ ಅಲ್ಲಿಂದ ಚ್ಯುತರಾಗಿ ಬಂದು ಹಿರಿಯಣ್ಣನ ಜೀವನು ಇದೇ ಭರತಕ್ಷೇತ್ರದ ಹಸ್ತಿನಾಪುರದಲ್ಲಿ ಶ್ರೇಷ್ಠಿಯೊಬ್ಬನ ಪತ್ನಿ ಬಂಧುಮತಿಗೆ ಶಂಖನೆಂಬ ಮಗನಾಗಿ ಹುಟ್ಟಿದನು. ಉಳಿದ ಆರು ಮಂದಿಯೂ ಅದೇ ನಗರದಲ್ಲಿ ಗಂಗದೇವನೆಂಬರಸ

ನಿಗೆ ಅವನ ನಂದಯಶೆಯೆಂಬ ರಾಣಿಯಲ್ಲಿ ಗಂಗ ಗಂಗದತ್ತ, ಗಂಗರಕ್ಷಿತ, ನಂದ, ಸುನಂದ, ನಂದಿಷೇಣ ಎಂಬ ಹೆಸರಿನಲ್ಲಿ ಅವಳಿಮಕ್ಕಳಾಗಿ ಹುಟ್ಟಿದರು. ರಾಣಿ ನಂದಯಶೆಯ ಗರ್ಭದಲ್ಲಿ ಏಳನೆಯ ಮಗನೊಬ್ಬ ನೆಲಸುತ್ತಲೂ ಅವಳಿಗೆ ಅತ್ಯಂತ ದೌರ್ಭಾಗ್ಯವುಂಟಾಯಿತು. ಆದರಿಂದ ನೊಂದು ಅವಳು ಆ ಮಗು ಹುಟ್ಟುತ್ತಲೂ ಅದನ್ನು ತ್ಯಜಿಸಿದಳು. ಆದರೆ ರೇವತಿಯೆಂಬ ದಾದಿ ಅದನ್ನು ಸಾಕಿ ಸಲಹಿ ಬೆಳಸಿದಳು. ನಂದಯಶೆಯ ಆ ಪರಿತ್ಯಕ್ತ ಪುತ್ರನ ಹೆಸರು ನಿರ್ನಾಮಕ. ಈ ನಿರ್ನಾಮಕನು ಶ್ರೇಷ್ಠಿಪುತ್ರನಾದ ಶಂಖನಿಗೆ ತುಂಬ ಮೆಚ್ಚಾಗಿದ್ದನು. ಒಂದು ದಿನ ಶಂಖನು ನಿರ್ನಾಮಕನನ್ನೊಡಗೊಂಡು ನಾಗರಿಕರಿಂದ ತುಂಬಿದ್ದ ಮನೋಹರೋದ್ಯಾನಕ್ಕೆ ಹೋದನು. ಅಲ್ಲಿ ಅರಸಾದ ಗಂಗದೇವನ ಆರು ಮಂದಿ ಪುತ್ರರೂ ಒಂದು ಕಡೆ ಸೇರಿ ಭೋಜನ ಮಾಡುತ್ತಿದ್ದರು. ಆಗ ಅವರನ್ನು ನೋಡಿ ಶಂಖನು "ಈ ನಿರ್ನಾಮಕನೂ ನಿಮ್ಮ ತಮ್ಮನೇ; ಇವನನ್ನು ನೀವು ಊಟಕ್ಕೇಕೆ ಸೇರಿಸಿಕೊಳ್ಳುವುದಿಲ್ಲ?' ಎಂದನು. ಆ ಮಾತು ಕೇಳಿ ಆ ರಾಜಪುತ್ರರು ನಿರ್ನಾಮಕನನ್ನು ತಮ್ಮೊಟ್ಟಿಗೆ ಕರೆದರು; ಅವನು ಸೋದರರೊಂದಿಗೆ ಉಣ್ಣಲು ತಾನೂ ಕುಳಿತನು. ಆದರೆ ಆ ಹೊತ್ತಿಗೆ ಎಲ್ಲಿಂದಲೋ ನಂದಯಶೆ ಬಂದು ಕೋಪದಿಂದ ಕೆರಳಿ ಆ ನಿರ್ನಾಮಕನನ್ನು ಕಾಲಿಂದ ಒದ್ದಳು. ಈ ಘಟನೆಯಿಂದ ಶಂಖನು ತುಂಬ ನೊಂದುಕೊಂಡನು. ತನ್ನ ದೆಸೆಯಿಂದಲೇ ಅವನಿಗೆ ಆ ಪಾಡಾಯಿತೆಂದು ಮರುಗಿ ತನ್ನನ್ನೇ ಧಿಕ್ಕರಿಸಿಕೊಂಡನು.

ಕೊನೆಗೆ ದುಃಖಿತನಾದ ನಿರ್ನಾಮಕನನ್ನು ಜತೆಗೆ ಕರೆದುಕೊಂಡು ರಾಜಾದಿಗಳೊಂದಿಗೆ ವನಕ್ಕೆ ಹೋದನು. ಅಲ್ಲಿ ಏಕಾಂತದಲ್ಲಿ ದ್ರುಮಷೇಣರೆಂಬ ಮುನಿಗಳನ್ನು ಕಂಡು, ಶಂಖನು ಅವರಲ್ಲಿ ನಿರ್ನಾಮಕನ ಪೂರ್ವಭವವನ್ನು ಪ್ರಶ್ನಿಸಿದನು. ಆ ಅವಧಿಜ್ಞಾನಿಗಳಾದ ಮುನಿಗಳು ಆತನ ಭವಾಂತರಗಳನ್ನು ನಿರೂಪಿಸತೊಡಗಿದರು :

"ಗಿರಿನಗರದಲ್ಲಿ ಚಿತ್ರರಥನೆಂಬರಸು ಇದ್ದನು. ಇವನ ಪತ್ನಿ ಕನಕಮಾಲಿನಿ. ಚಿತ್ರರಥನು ಮಾಂಸಪ್ರಿಯ. ಅವನಿಗೆ ಅಮೃತರಸಾಯನನೆಂಬ ಅಡಿಗೆಯವನಿದ್ದನು. ಇವನು ಮಾಂಸಪಾಕಜ್ಞ. ಇವನ ಮೇಲೆ ದೊರೆಗೆ ಇಷ್ಟವಾಗಿ ಇವನನ್ನು ದಶಗ್ರಾಮಗಳಿಗೆ ಒಡೆಯನಾಗಿ ಮಾಡಿದ್ದನು. ಒಂದು ದಿನ ಅರಸನು ಸುಧರ್ಮರೆಂಬ ಆಚಾರ್ಯರಲ್ಲಿ ಮಾಂಸ ಭೋಜನದ ದೋಷವನ್ನು ಕೇಳಿ ಜುಗುಪ್ಸೆಹುಟ್ಟಿ ತನ್ನ ಮಗ ಮೇಘರಥನಿಗೆ ರಾಜ್ಯವೊಪ್ಪಿಸಿ ಮೋಕ್ಷಕಾಂಕ್ಷಿಯಾಗಿ ೩೦೦ ಮಂದಿ ಅರಸರ ಸಂಗಡ ದೀಕ್ಷೆಗೊಂಡನು. ಹೊಸ ರಾಜ ಮೇಘರಥ ಶ್ರಾವಕನಾದನು. ಆದರಿಂದ ಮಾಂಸಪಾಕಜ್ಞನಾದ ಅಡಿಗೆಯವನನ್ನು ಅಪಮಾನಿಸಿ ಕೇವಲ ಒಂದು ಗ್ರಾಮಕ್ಕೆ ಒಡೆಯನಾಗಿ ಮಾಡಿದನು. ಇದರಿಂದ ಅಡಿಗೆಯವನಿಗೆ ಕೋಪಬಂತು. "ನನ್ನ ಈ ಅಪಮಾನಕ್ಕೆ ಕಾರಣ ಎಂದರೆ ಮಾಂಸನಿಷೇಧವನ್ನು ಹೇಳುವ ಈ ಮುನಿ" ಎಂದುಕೊಂಡು ಆ ಮುನಿಗೆ ಕಹಿಸೋರೆಯ ವಿಷಾಹಾರವನ್ನು ಕೊಟ್ಟು ಕೊಂದುಹಾಕಿದನು. ಮುನಿ ಊರ್ಜಯಂತ ಗಿರಿಯ ಮೇಲೆ ಸಮಾಧಿಮರಣವನ್ನು ಪಡೆದನು. ಅವನು ಸತ್ತು ಅಪರಾಜಿತನೆಂಬ ಅನುತ್ತರ ವಿಮಾನದಲ್ಲಿ

೩೨ ಸಾಗರ ಆಯುವಿನ ಅಹಮಿಂದ್ರನಾದನು. ಅಡಿಗೆಯವನು ಸತ್ತು ೩ನೆಯ ವಾಲುಕಾಪ್ರಭೆಯೆಂಬ ನರಕದಲ್ಲಿ ಹುಟ್ಟಿದನು. ಅಲ್ಲಿ ೩ ಸಾಗರ ಕಾಲ ನರಕವಾಸ ಅನುಭವಿಸಿದನು. ಅಲ್ಲಿಂದ ಬಂದ ಮೇಲೆ ತಿರ್ಯಗ್ಗತಿಯಲ್ಲಿ ತೊಳಲಾಡುತ್ತಿದ್ದನು.

ಒಮ್ಮೆ ಆತನು ಮಲಯ ದೇಶದಲ್ಲಿಯ ಪಲಾಶಗ್ರಾಮದಲ್ಲಿ ವಾಸಿಸುವ ಯಕ್ಷದತ್ತ ಮತ್ತು ಯಕ್ಷಿಲೆಯರಿಗೆ ಯಕ್ಷಲಿಕನೆಂಬ ಮಗನಾಗಿ ಹುಟ್ಟಿದನು. ಇವನು ಸ್ವಭಾವತಃ ಮೂರ್ಖ. ಇವನ ಅಣ್ಣ ಯಕ್ಷಸ್ವ. ಒಂದು ಬಾರಿ ಈ ದುಷ್ಟಯಕ್ಷಲಿಕನು ಗಾಡಿಯಲ್ಲಿ ಕುಳಿತು ಎಲ್ಲಿಗೋ ಹೋಗುತ್ತಿದ್ದಾಗ ಮಾರ್ಗದ ಎದುರಿನಲ್ಲಿ ಒಂದು ಕುರುಡು ಹೆಣ್ಣುಹಾವು ಬಿದ್ದಿತ್ತು. ಅಣ್ಣನು ತಡೆದರೂ ಯಕ್ಷಲಿಕನು ಕೇಳದೆ ಅದರ ಮೇಲೆ ಗಾಡಿ ನಡಸಿದನು. ಆ ಹಾವಿನ ಹೆಡೆ ಕತ್ತರಿಸಿಹೋಗಿ ತೀವ್ರ ದುಃಖದಿಂದ ಅದು ಮರಣೋನ್ಮುಖವಾಯಿತು. ಅಕಾಮನಿರ್ಜರೆಯ ದೆಸೆಯಿಂದ ಮನುಷ್ಯಗತಿ ಪಡೆಯಲು ನಿದಾನಿಸಿತು. ಆ ಹಾವು ಸತ್ತು ಶ್ವೇತಾಂಬಿಕಾಪುರಿಯಲ್ಲಿ ವಾಸವನೆಂಬ ಅರಸನಿಗೆ ವಸುಂಧರೆಯೆಂಬ ಪತ್ನಿಯಲ್ಲಿ ನಂದಯಶೆಯೆಂಬ ಹೆಸರಿನ ಮಗಳಾಯಿತು. ಯಕ್ಷಲಿಕನು ನಿರ್ನಾಮಕನಾದನು. ಈ ಯಕ್ಷಲಿಕನು ಅಡಿಗೆಯವನ ಜನ್ಮದಲ್ಲಿ ಮುನಿಯನ್ನು ಕೊಂದಿದ್ದ; ಅಲ್ಲದೆ ಸರ್ಪಿಣಿಯ ವಿಚಾರದಲ್ಲಿ ಅತಿನಿರ್ದಯತೆಯಿಂದ ವರ್ತಿಸಿದ್ದ. ಇದರಿಂದಾಗಿ ತಾಯಿ ನಂದಯಶೆಯ ದ್ವೇಷಕ್ಕೆ ಪಕ್ಕಾಗಿದ್ದಾನೆ."

ಇದನ್ನು ಕೇಳಿ ಸಂಸಾರಕ್ಲೇಶಗಳಿಗೆ ಹೆದರಿ ಗಂಗದೇವನು ಮಗನಾದ ದೇವನಂದನಿಗೆ ರಾಜ್ಯವೊಪ್ಪಿಸಿ, ತಾನು ೨೦೦ ಅರಸರೊಂದಿಗೆ ಅದೇ ಮುನಿಗಳಲ್ಲಿ ದೀಕ್ಷೆಗೊಂಡನು. ಸಮಸ್ತ ರಾಜಪುತ್ರರೂ(ಗಂಗದೇವನ ಪುತ್ರರು) ಶ್ರೇಷ್ಠಿಪುತ್ರ ಶಂಖನೂ ದೀಕ್ಷೆಗೊಂಡು ತಪೋದ್ಯುಕ್ತರಾದರು. ನಂದೆಯಶೆಯೂ ದಾದಿ ರೇವತಿಯೊಂದಿಗೆ, ಶ್ರೇಷ್ಠಿಪತ್ನಿ ಬಂಧುಮತಿಯೊಂದಿಗೆ ಕೂಡಿ ಸುವ್ರತಾರ್ಯಿಕೆಯ ಬಳಿಯಲ್ಲಿ ದೀಕ್ಷೆಗೊಂಡಳು. ನಿರ್ನಾಮಕನು ಮುನಿಯಾಗಿ ಸಿಂಹನಿಷ್ಕ್ರೀಡಿತವೆಂಬ ಕಠಿನ ತಪಸ್ಸು ಮಾಡಿ ಜನ್ಮಾಂತರದಲ್ಲಿ ತಾನು ನಾರಾಯಣನಾಗಬೇಕೆಂದು ನಿದಾನವನ್ನು ಮಾಡಿದನು. ದಾದಿ ರೇವತಿ ಮತ್ತೆ ಮನುಷ್ಯಜನ್ಮ ಪಡೆದು ಭದ್ರಿಲಸಾ ನಗರದಲ್ಲಿ ಸುದೃಷ್ಟಿಯೆಂಬ ಶ್ರೇಷ್ಠಿಗೆ ಅಲಕೆ ಎಂಬ ಪತ್ನಿಯಾದಳು. ಗಂಗಾದಿಯಾದ ಆರು ಮಂದಿ ಪುತ್ರರ ಜೀವವು ಅವಳಿಮಕ್ಕಳಾಗಿ ದೇವಕಿಯ ಗರ್ಭದಲ್ಲಿ ಕ್ರಮಕ್ರಮವಾಗಿ ಹುಟ್ಟುತ್ತಾರೆ; ಮಹಾಪರಾಕ್ರಮಿಗಳಾಗುತ್ತಾರೆ. ಇಂದ್ರನ ಆಜ್ಞಾಕಾರಿಯಾದ ಹಾರಿಯೆಂಬ ದೇವನು ಆ ಪುತ್ರರನ್ನು ಹುಟ್ಟುತ್ತಲೇ ರೇವತೀಚರ ಅಲಕೆಯಲ್ಲಿಗೆ ಕೊಂಡೊಯ್ದು ತಲಪಿಸುತ್ತಾನೆ. ಅಲ್ಲಿಯೇ ಅವರು ಯೌವನ ಪ್ರಾಪ್ತರಾಗುತ್ತಾರೆ. ಆ ಪುತ್ರರು ನೃಪದತ್ತ, ದೇವಪಾಲ, ಅನೀಕದತ್ತ, ಅನೀಕಪಾಲಕ, ಶತ್ರುಘ್ನ, ಜಿತಶತ್ರು—ಎಂಬ ಹೆಸರಿಂದ ಪ್ರಸಿದ್ಧರಾಗುತ್ತಾರೆ. ಈ ನಿನ್ನ ಮಕ್ಕಳು ಸದೃಶರೂಪರಾಗಿರುತ್ತಾರೆ. ಇವರೆಲ್ಲ ಹರಿವಂಶಚಂದ್ರನಾದ ನೇಮಿನಾಥನಲ್ಲಿ ಶಿಷ್ಯತ್ವ ಪಡೆದು ಮೋಕ್ಷಕ್ಕೆ ಹೋಗುತ್ತಾರೆ. ನಿರ್ನಾಮಕನ ಜೀವ ದೇವಕಿಯ ಗರ್ಭದಲ್ಲಿ ನೆಲೆಸಿ ಏಳನೆಯ ಮಗನಾಗುತ್ತಾನೆ. ಅವನು ಮಹಾಪರಾಕ್ರಮಿಯೂ ೯ ನೆಯ ನಾರಾಯಣನೂ ಆಗುತ್ತಾನೆ."

ಹೀಗೆ ವಸುದೇವನು ಕಂಸನ ಭವಾಂತರವನ್ನೂ ತನ್ನ ಪುಣ್ಯೋದಯದಿಂದ ಮುಂದೆ ಪ್ರಾಪ್ತವಾಗುವ ಅಭ್ಯುದಯಗಳನ್ನೂ ಎಂಟು ಮಂದಿ ಮಕ್ಕಳ ಹಾಗೂ ದೇವಕಿಯ ಪೂರ್ವಭವ ವರ್ತಮಾನಭವಗಳನ್ನೂ ಕೇಳಿ ಸಂತೋಷಿಸಿದನು.

೩೪. ಮಹೋಪವಾಸವಿಧಿ ವರ್ಣನ

ಗೌತಮಸ್ವಾಮಿ ಶ್ರೇಣಿಕನಿಗೆ ಹೇಳುತ್ತಾನೆ: "ಜಿನೇಂದ್ರನು ತನ್ನ ವಂಶದಲ್ಲಿ ಹುಟ್ಟಲಿದ್ದಾನೆ" ಎಂಬುದನ್ನು ಕೇಳಿ ವಸುದೇವನು ಸಂತೋಷಿಸಿದನು. ಆಗಲೇ ಅತಿ ಮುಕ್ತಕ ಮುನಿಗೆ ವಂದಿಸಿ "ಸ್ವಾಮಿ, ಹರಿವಂಶ ವಿಶೇಷಕನಾದ ಆ ಜಿನೇಂದ್ರನು ಹೇಗೆ ಹುಟ್ಟುತ್ತಾನೆ? ನಾನು ಆತನ ಚರಿತ್ರೆಯನ್ನು ಕೇಳಬಯಸುತ್ತೇನೆ" ಎಂದನು. ಮುನಿ ಅದನ್ನು ಹೇಳಲುಪಕ್ರಮಿಸಿದನು:

"ಇದೇ ಜಂಬೂದ್ವೀಪದ ವಿದೇಹಕ್ಷೇತ್ರದಲ್ಲಿ ಸೀತೋದಾನದಿಯ ದಕ್ಷಿಣತಟದಲ್ಲಿ ಸುಪದ್ಮೆ ಎಂಬುದೊಂದು ದೇಶ. ಅದರಲ್ಲಿ ಸಿಂಹಪುರವೆಂಬುದು ನಗರ. ಅಲ್ಲಿ ಅರ್ಹದ್ದಾಸನೆಂಬರಸು ಹಿಂದೊಮ್ಮೆ ಆಳುತ್ತಿದ್ದನು. ಜಿನಪೂಜಾಸಕ್ತೆಯಾದ ಜಿನದತ್ತೆಯೆಂಬಾಕೆ ಆತನ ಪತ್ನಿ. ಒಮ್ಮೆ ಇವಳಿಗೆ ಲಕ್ಷ್ಮಿ, ಗಜ, ಸಿಂಹ, ಸೂರ್ಯ, ಚಂದ್ರ—ಈ ಐದು ಶುಭ ಸ್ವಪ್ನಗಳು ಕಾಣಿಸಿ, ಉತ್ತಮನಾದ ಪುತ್ರನೊಬ್ಬನು ಜನಿಸಿದನು. ಆ ಪುತ್ರನಿಗೆ ಅಪರಾಜಿತನೆಂದು ಹೆಸರಿಟ್ಟರು. ಈತನು ಭೂಮ್ಯಾಕಾಶಗಳೆರಡರಲ್ಲೂ ಖ್ಯಾತನು. ಈತನು ಯೌವನಸ್ಥನಾಗುತ್ತಲೂ ಕುಲೀನೆಯೂ ಗುಣವತಿಯೂ ಆದ ಪ್ರೀತಿಮತಿಯೆಂಬವಳನ್ನು ಮದುವೆಯಾದನು. ಅಲ್ಲದೆ ಇನ್ನೂ ಸಹಸ್ರಮಂದಿ ಸೌಭಾಗ್ಯಶಾಲಿನಿಯರೊಂದಿಗೆ ಸುಖವಾಗಿದ್ದನು. ಹೀಗಿರಲು ಎಂದೋ ಒಮ್ಮೆ ಅರ್ಹದ್ದಾಸರಾಜನು ಮನೋಹರೋದ್ಯಾನದಲ್ಲಿದ್ದ ವಿಮಲವಾಹನ ಜಿನನನ್ನು ವಂದಿಸಲೆಂದು ಪುತ್ರಸಮೇತನಾಗಿ ಹೋದನು. ಅಲ್ಲಿ ಉಪದೇಶದಿಂದ ಪ್ರಭಾವಿತನಾಗಿ ಅರ್ಹದ್ದಾಸನು ಇತರ ೫೦೦ ಮಂದಿ ಅರಸರೊಡಗೂಡಿ ಆ ಜಿನನ ಬಳಿಯಲ್ಲಿಯೇ ದೀಕ್ಷೆಗೊಂಡನು. ತಂದೆ ದೀಕ್ಷೆಗೊಳ್ಳುತ್ತಲೂ ಅಪರಾಜಿತನು ಸಮ್ಯಕ್ತ್ವವನ್ನು ಧರಿಸಿದನು. ಅಪರಾಜಿತನು ಒಂದು ದಿನ ವಿಮಲವಾಹನಜಿನನೂ ತಂದೆ ಅರ್ಹದ್ದಾಸನೂ ಗಂಧಮಾದನಗಿರಿಯ ಮೇಲೆ ನಿರ್ವಾಣ ಪದವೈದಿದರೆಂದು ಸುದ್ದಿ ಕೇಳಿದನು. ಇದನ್ನು ಕೇಳಿ ಮೂರುದಿನ ಉಪವಾಸವಿದ್ದು ನಿರ್ವಾಣ ಭಕ್ತಿ ಸಲ್ಲಿಸಿದನು. ಒಂದು ಬಾರಿ ಈತನು ಕುಬೇರನಿರ್ಮಿತವಾದ ಜಿನಪ್ರತಿಮೆಗಳನ್ನೂ ಚೈತ್ಯಗೃಹಗಳ ಜಿನಬಿಂಬಗಳನ್ನೂ ಪೂಜಿಸಿ, ಉಪವಾಸನಿಯಮಗೊಂಡು, ಅರಮನೆಯಲ್ಲಿ ತನ್ನ ಪತ್ನಿಯರಿಗೆ ಧರ್ಮೋಪದೇಶ ಮಾಡುತ್ತಿದ್ದನು. ಆ ಹೊತ್ತಿಗೆ ಅಲ್ಲಿಗೆ ಚಾರಣಮುನಿಗಳಿಬ್ಬರು ನಭದಿಂದ ಕೆಳಗಿಳಿದು ಬಂದರು. ಆಯಿಬ್ಬರೂ ನೆಲದ ಮೇಲೆ ಕೂರುತ್ತಲೂ, ಅಪರಾಜಿತನು ಕೈಮುಗಿದು ವಂದಿಸಿ "ಸ್ವಾಮಿ, ಜೈನಸಾಧುಗಳನ್ನು ನೋಡುತ್ತಲೇ ನನಗೆ ಸಹಜವಾಗಿ ಸಂತೋಷವಾಗುತ್ತದೆ; ಆದರೆ ಇಂದು ತಮ್ಮಿಬ್ಬರನ್ನೂ ದರ್ಶಿಸಿದಾಗ ನನಗೆ ಅಪೂರ್ವಾನಂದವುಂಟಾಗುತ್ತಿದೆ; ನನ್ನ ಸಹಜಸ್ನೇಹವು

ಉಬ್ಬಿ ಉಕ್ಕಂದಗೊಂಡಿದೆ; ಇದಕ್ಕೆ ಕಾರಣವೇನು?" ಎಂದು ಪ್ರಶ್ನಿಸಿದನು. ಆಗ ಆ ಮುನಿಗಳಲ್ಲಿ ಹಿರಿಯ ಮುನಿಯು ತನ್ನ ವಾಣಿಯಲ್ಲಿ ವಚನಸುಧೆ ಸೂಸುತ್ತ "ರಾಜಾ, ಪೂರ್ವಭವಸಂಬಂಧವೇ ಈ ಸ್ನೇಹಾಧಿಕ್ಯವನ್ನು ನಿನಗೆ ಉಂಟುಮಾಡುತ್ತಿದೆ; ಈಗ ನಾನು ಆ ಪೂರ್ವಭವ ಸಂಬಂಧವನ್ನು ಹೇಳುತ್ತೇನೆ, ಕೇಳು"—ಎಂದು ನುಡಿದನು. ಅದನ್ನು ಆ ಮುನಿ ಹೀಗೆ ನಿರೂಪಿಸಿದನು:

"ಪಶ್ಚಿಮ ಪುಷ್ಕರಾರ್ಧದ ಪಶ್ಚಿಮ ವಿದೇಹಕ್ಷೇತ್ರದಲ್ಲಿರುವ ರೂಪ್ಯಾಚಲದ ಉತ್ತರಶ್ರೇಣಿಯಲ್ಲಿ ಗಣ್ಯಪುರವೆಂಬುದೊಂದು ನಗರ. ಅದರ ಅರಸು ಸೂರ್ಯಾಭ. ಇವನ ಪತ್ನಿ ಧಾರಿಣಿ. ಇವರಿಗೆ ಚಿಂತಾಗತಿ, ಮನೋಗತಿ, ಚಪಲಗತಿ ಎಂಬ ಮೂವರು ಪುತ್ರರು. ಇವರು ವೇಗವಂತರು, ಸ್ನೇಹವಂತರು, ಸುಪೌರುಷರು. ಆ ಕಾಲದಲ್ಲೇ ಅರಿಂಜಯಪುರದಲ್ಲಿ ಅರಿಂಜಯನೆಂಬರಸು ಇದ್ದನು. ಇವನ ಪತ್ನಿ ಅಜಿತಸೇನೆ. ಇವರ ಮಗಳು ಪ್ರೀತಿಮತಿ. ಈಕೆ ಸಿದ್ಧವಿದ್ಯಳು, ಪ್ರಸಿದ್ಧಳು. ತನ್ನ ಸ್ತ್ರೀಜನ್ಮವನ್ನು ಹಳಿದುಕೊಳ್ಳುತ್ತಿದ್ದಳು. ಒಂದು ದಿನ ತಂದೆಯನ್ನು ಕುರಿತು ತನಗೆ ಇಷ್ಟವಾದ ಒಂದು ವರವನ್ನು ಕೊಡುವಂತೆ ಕೇಳಿದಳು. ಮಗಳ ಇಷ್ಟವೇನೆಂದು ಬಲ್ಲ ತಂದೆ "ಅಮ್ಮಾ, ತಪೋದೀಕ್ಷೆಯೊಂದು ಹೊರತು ನಿನಗೆ ಇಷ್ಟವಾದ ಯಾವುದೇ ವರವನ್ನು ಬೇಡು" ಎಂದನು. ಆಗ ಪ್ರೀತಿಮತಿ "ತಂದೆಯೆ, ತಪೋದೀಕ್ಷೆಗೊಳ್ಳುವ ವರವನ್ನು ತಾವು ಕೊಡದ ಪಕ್ಷಕ್ಕೆ, ಗತಿಯುದ್ಧದಲ್ಲಿ ನನ್ನನ್ನು ಗೆಲ್ಲುವಾತನಿಗೆ ಮಾತ್ರ ನನ್ನನ್ನು ಕೊಡುವುದಾಗುತ್ತದೆ ಎನ್ನುವ ವರ ಕೊಡಿ" ಎಂದಳು. ತಂದೆ ಅದಕ್ಕೆ ಒಪ್ಪಿ 'ಹಾಗೆಯೇ ಆಗಲಿ' ಎಂದನು. ಆತನು ಗತಿಯುದ್ಧಜಿಗೀಷುವಾದ ತನ್ನ ಮಗಳಿಗೆ ಸ್ವಯಂವರವನ್ನು ಏರ್ಪಡಿಸಿ ವಿದ್ಯಾಧರರನ್ನು ಆಮಂತ್ರಿಸಿದನು. ಅವರೆಲ್ಲ ಬಂದ ಮೇಲೆ, ಆ ಕನ್ಯಾಪಿತೃ ಅವರನ್ನು ಕುರಿತು "ನಿಮ್ಮಲ್ಲಿ ಸಮರ್ಥರಾದವರು ನನ್ನ ಮಗಳೊಂದಿಗೆ ಗತಿಯುದ್ಧದಲ್ಲಿ ಸ್ಪರ್ಧಿಸಿ. ಗತಿಯುದ್ಧದ ಕ್ರಮ ಹೀಗೆ: ವಧೂವರರು ಮೇರುಪರ್ವತವನ್ನು ಪ್ರದಕ್ಷಿಣೆಮಾಡಿ, ಜಿನಪೂಜೆಯನ್ನು ಮುಗಿಸಿ ಎಲ್ಲರಿಗಿಂತ ಮೊದಲು ಯಾರು ಬರುತ್ತಾರೋ ಅವರೇ ಗೆದ್ದಹಾಗೆ. ಅತಿವೇಗಿಯಾದಾತನಿಂದ ಈಕೆ ಗತಿಯುದ್ಧದಲ್ಲಿ ಗೆಲ್ಲಲ್ಪಟ್ಟರೆ ನನ್ನ ಮನೋರಥವನ್ನು ಪೂರೈಸಿದ ಆ ವರನೊಂದಿಗೆ ಇವಳ ವಿವಾಹವಾಗುತ್ತದೆ."—ಎಂದನು. ಅದನ್ನು ಕೇಳಿ ಉಳಿದೆಲ್ಲ ವಿದ್ಯಾಧರರೂ ಆಕೆ ವಿದ್ಯೆಯಲ್ಲಿ ತಮಗಿಂತ ಅಧಿಕಳೆಂದು ತಿಳಿದುಕೊಂಡು ಸುಮ್ಮನೆ ಇದ್ದುಬಿಟ್ಟರು. ಆದರೆ ವಿದ್ಯಾವೇಗೋದ್ಯತರಾದ ಧಾರಿಣಿಯ ಪುತ್ರರು ಚಿಂತಾಗತಿ, ಮನೋಗತಿ ಚಪಲಗತಿಗಳು, ಗತಿಯುದ್ಧದಲ್ಲಿ ಸ್ಪರ್ಧಿಸಲು ಸಿದ್ಧರಾಗಿ ಮೇಲೆದ್ದರು. ಉಳಿದ ಜನ ಮಧ್ಯಸ್ಥರಾಗಿದ್ದು ಕರಾಸ್ಫಾಲನೆಮಾಡಿ ಅವರನ್ನು ಸ್ಪರ್ಧೆಗೆ ಬಿಟ್ಟರು. ಅಹಮಹಮಿಕೆಯಿಂದ ಆ ನಾಲ್ವರೂ ತಮ್ಮ ವೇಗದಿಂದ ವಾಯುವೇಗವನ್ನೂ ಮೀರುತ್ತ ಮೇರುಪರ್ವತದತ್ತ ಆಕಾಶದಲ್ಲಿ ಧಾವಿಸಿದರು. ಚಿಂತಾಗತ್ಯಾದಿಗಳು ಅರ್ಧಮಾರ್ಗದವರೆಗೆ ಕನ್ಯೆಯ ಜತೆ ಓಡುತ್ತಿದ್ದರಾದರೂ ಅಲ್ಲಿಂದ ಮುಂದೆ ಪ್ರೀತಿಮತಿಯೊಬ್ಬಳೇ ಅವರನ್ನು ಮೀರಿ ಧಾವಿಸಿದಳು. ಮೇರುವನ್ನು ಪ್ರದಕ್ಷಿಣೆ ಬಂದು ಭದ್ರಶಾಲವನದಲ್ಲಿದ್ದ ಜಿನಪ್ರತಿಮೆ

ಗಳನ್ನು ಪೂಜಿಸಿ ಎಲ್ಲರಿಗೆ ಮೊದಲಾಗಿ ಹಿಂದಿರುಗಿ ಬಂದಳು. ಬೇಗ ಓಡಿಬಂದುದರಿಂದ ಬಳಲಿ ಬೆವರಿದ್ದ ಆಕೆ ಹಾಗೆ ಬಂದು, ತಂದೆಗೆ ವಂದಿಸಿ, ಸಿದ್ಧಶೇಷೆಯನ್ನು ಆತನಿಗಿತ್ತಳು. ಮಗಳ ಗೆಲವಿಂದ ತಂದೆಗೆ ಸಂತೋಷವಾಯಿತು. ಈಗ ವಿಜೇತಳಾದ ಪ್ರೀತಿಮತಿ ಐಹಿಕ ಕಾಂಕ್ಷೆಗಳಿಂದ ಮುಕ್ತಳಾಗಿ ತಪೋದೀಕ್ಷೆಗೊಳ್ಳಲು ತಂದೆಯಿಂದ ಅನುಮತಿಪಡೆದು, ವ್ರತಗಳನ್ನು ತಳೆದು, ನಿರ್ವೃತ್ತಿಯೆಂಬ ಆರ್ಯಿಕೆಯ ಬಳಿ ತಪೋದೀಕ್ಷೆಗೊಂಡಳು.

ಗತಿಯುದ್ಧದಲ್ಲಿ ಪ್ರೀತಿಮತಿಯಿಂದ ಪರಾಜಿತರಾದ ಚಿಂತಾಗತಿ ಮೊದಲಾದ ಮೂವರು ಸೋದರರೂ ದಮವರ ಮುನಿಗಳಲ್ಲಿ ತಪೋದೀಕ್ಷೆಗೊಂಡರು. ಆಯುರಂತದಲ್ಲಿ ಮಾಹೇಂದ್ರಕಲ್ಪದ ತುದಿಯಲ್ಲಿ ಸಪ್ತಸಾಗರ ಆಯುರೊಡೆಯರಾಗಿ ಸಾಮಾನಿಕದೇವರಾದರು. ಅನಂತರ ಪುಷ್ಕಲಾವತಿದೇಶದ, ವಿಜಯಾರ್ಧದ ಉತ್ತರಶ್ರೇಣಿಯ ಗಗನವಲ್ಲಭನಗರದ ಅರಸು ಗಗನಚಂದ್ರನಿಗೆ ಆತನ ಪತ್ನಿ ಗಗನಸುಂದರಿಯಲ್ಲಿ ಮನೋಗತಿ ಚಪಲಗತಿಗಳಿಬ್ಬರೂ ಅಮಿತವೇಗ ಅಮಿತತೇಜ ಎಂಬ ಪುತ್ರರಾಗಿ ಜನಿಸಿದರು. ಅವರೇ ನಾವು. ಪುಂಡರೀಕಿಣಿ ನಗರದಲ್ಲಿ ಸ್ವಯಂಪ್ರಭಜಿನನ ಬಳಿಯಲ್ಲಿ ದೀಕ್ಷೆಗೊಂಡು, ಆತನಲ್ಲಿ ನಮ್ಮ ಪೂರ್ವಭವವನ್ನು ಪ್ರಶ್ನಿಸಿ ತಿಳಿದೆವು. ಅಯ್ಯಾ ರಾಜ, ನಮಗೆ ಆ ಸ್ವಯಂಪ್ರಭಜಿನನು "ನಿಮ್ಮ ಹಿರಿಯಣ್ಣ ಚಿಂತಾಗತಿಯ ಜೀವ ಮಾಹೇಂದ್ರಕಲ್ಪದಿಂದ ಈ ಮೊದಲೇ ಚ್ಯುತವಾಗಿ ಬಂದು ಈ ಸಿಂಹಪುರದಲ್ಲಿ ಅಪರಾಜಿತನೆಂಬ ಹೆಸರಿಂದ ಹುಟ್ಟಿದ್ದಾನೆ" ಎಂದು ಹೇಳಿದನು. ಅದರಿಂದಾಗಿ ನಿನ್ನನ್ನು ನೋಡಲು ಬಂದಿದ್ದೇವೆ. ಹೇ ಅಪರಾಜಿತ, ನೀನು ಇದಕ್ಕೆ ಐದನೆಯ ಭವದಲ್ಲಿ ಭರತಕ್ಷೇತ್ರದ ಹರಿವಂಶದಲ್ಲಿ ಅರಿಷ್ಟನೇಮಿ ಎಂಬ ತೀರ್ಥಂಕರನಾಗಿ ಜನಿಸುವೆ. ಈಗ ನಿನ್ನ ಆಯುಸ್ಸು ಇನ್ನು ಒಂದು ತಿಂಗಳು ಮಾತ್ರ ಉಳಿದಿದೆ. ಆದ್ದರಿಂದ ಆತ್ಮಹಿತದತ್ತ ಲಕ್ಷ್ಯಕೊಡು." ಹೀಗೆ ನುಡಿದ ಆ ಚಾರಣ ಮುನಿಗಳು ಅಪರಾಜಿತನಿಂದ ಬೀಳ್ಕೊಂಡು ವಿಹಾರಕ್ಕೆ ಮುನ್ನಡೆದರು. ಅವರ ಕಥನವನ್ನು ಕೇಳಿದ ಅಪರಾಜಿತನು ಸಂತೋಷಿಸಿದನು. "ಆಹಾ! ನಾನು ತಪೋದ್ಯೋಗದಲ್ಲಿ ತೊಡಗುವುದಕ್ಕೆ ಇಷ್ಟುಕಾಲ ತಡೆದೆನಲ್ಲಾ!" ಎಂದು ತನ್ನಲ್ಲಿಯೇ ವಿಚಾರಮಾಡಿಕೊಂಡನು. ಎಂಟು ದಿನಗಳ ಕಾಲ ಜಿನಪೂಜೆಯಲ್ಲಿ ನಿರತನಾಗಿದ್ದು ಕೊನೆಗೆ ಪ್ರೀತಿಂಕರನೆಂಬ ಮಗನಿಗೆ ರಾಜ್ಯಲಕ್ಷ್ಮಿಯೊಪ್ಪಿಸಿ ಶರೀರಾದಿ ಮೋಹದಿಂದ ನಿಸ್ಪೃಹನಾದನು, ಅಲ್ಲಿಂದತ್ತ ಪ್ರಾಯೋಪಗಮನ ಸಂನ್ಯಸನವಿಧಿಯಿಂದಿದ್ದು ೨೨ ದಿನಗಳ ಕಾಲ ಹಗಲಿರುಳು ಚತುರ್ವಿಧಾರಾಧನೆಯನ್ನು ಆರಾಧಿಸಿ ತೀರಿಕೊಂಡು, ಅಚ್ಯುತಕಲ್ಪದಲ್ಲಿ ೨೨ ಸಾಗರ ಆಯುವಿನ ಅಚ್ಯುತೇಂದ್ರನಾದನು.

ಅಲ್ಲಿಂದ ಚ್ಯುತನಾಗಿ ಬಂದು ಗಜಪುರದಲ್ಲಿ (ನಾಗಪುರ, ಹಸ್ತಿನಪುರ) ಶ್ರೀಚಂದ್ರ ಮತ್ತು ಶ್ರೀಮತಿ ಇವರಿಗೆ ಸುಪ್ರತಿಷ್ಠನೆಂಬ ಮಗನಾಗಿ ಹುಟ್ಟಿದನು. ಈತನು ಜಿನೇಂದ್ರಮತಭಾವಿತನು. ಕೆಲಕಾಲದ ಮೇಲೆ ಶ್ರೀಚಂದ್ರನು ಸುಪ್ರತಿಷ್ಠನನ್ನು ರಾಜ್ಯದಲ್ಲಿ ನಿಲ್ಲಿಸಿ ತಾನು ಸುಮಂದಿರ ಗುರುಗಳ ಬಳಿಯಲ್ಲಿ ತಪೋದೀಕ್ಷೆಗೊಂಡು ಮೋಕ್ಷಕ್ಕೆ ಸಂದನು. ಒಂದು ದಿನ ಮಾಸೋಪವಾಸಿಗಳಾದ ಯಶೋಧರ ಮುನಿಗಳಿಗೆ ಸುಪ್ರತಿಷ್ಠನು ದಾನ

ವಿತ್ತು ಪಂಚಾಶ್ಚರ್ಯಗಳಾದುವು. ಹೀಗಿರಲು ಒಮ್ಮೆ ಈತನು ಕಾರ್ತಿಕ ಹುಣ್ಣಿಮೆಯ ರಾತ್ರಿ ತನ್ನ ೮೦೦ ಪತ್ನಿಯರ ಬಳಸಿನಲ್ಲಿ ಸೌಧದಲ್ಲಿ ಕುಳಿತಿರುವಾಗ ಉಲ್ಕಾಪಾತವಾದುದು ಕಂಡನು. ಅದನ್ನು ಕಂಡು ರಾಜ್ಯಕೋಶಾದಿಗಳೂ ಅಷ್ಟೇ ಕ್ಷಣಿಕವೆಂದು ಅರಸನಿಗೆ ತೋರಿತು. ಆದ್ದರಿಂದ ತನ್ನ ಸುನಂದೆಯೆಂಬ ಪತ್ನಿಯಲ್ಲಾದ ಸುದೃಷ್ಟಿಯೆಂಬ ಮಗನಿಗೆ ರಾಜ್ಯವಿತ್ತು ತಾನು ಸುಮಂದಿರಗುರುಗಳ ಬಳಿಯಲ್ಲಿ ತಪೋದೀಕ್ಷೆಗೊಂಡನು. ಆತನ ಜತೆಗೆ ಮತ್ತೆ ೪೦೦೦ ಅರಸರೂ ತಪಗೊಂಡರು. ಸುಪ್ರತಿಷ್ಠಮುನಿ ಜ್ಞಾನದರ್ಶನಾದಿಗಳಿಂದ ಯುಕ್ತನಾಗಿ, ಸರಹಸ್ಯವಾಗಿ ಅಂಗಗಳನ್ನೂ ಪೂರ್ವಗಳನ್ನೂ ಅಧ್ಯಯನಮಾಡಿ, ಸರ್ವತೋಭದ್ರದಿಂದ ಹಿಡಿದು ಸಿಂಹನಿಷ್ಕ್ರೀಡಿತದ ವರೆಗೆ ವಿಶಿಷ್ಟತಪಸ್ಸನ್ನು ಕೈಗೊಂಡನು.

ಶ್ರವಣಮಾತ್ರದಿಂದಲೇ ಪಾಪಪರಿಹಾರಕವಾದ ಆ ಉಪವಾಸ ಮಹಾವಿಧಿಗಳನ್ನು, ಆಚರಿಸಿ ತೀರ್ಥಂಕರ ಪ್ರಕೃತಿನಾಮಕ ಮಹಾಪುಣ್ಯಪ್ರಕೃತಿಯನ್ನು ಆರ್ಜಿಸಿ, ಸುಪ್ರತಿಷ್ಠಮುನಿ ಒಂದು ತಿಂಗಳು ಆಹಾರಪ್ರತ್ಯಾಖ್ಯಾನ ಮಾಡಿ, ಚತುರ್ವಿಧಾರಾಧನೆಯನ್ನು ಆರಾಧಿಸಿ ತೀರಿಕೊಂಡು, ೨೨ ಸಾಗರ ಆಯುಃಪ್ರಮಾಣ ಪಡೆದು ಜಯಂತವೆಂಬ ಅನಂತ್ತರವಿಮಾನದಲ್ಲಿ ಹುಟ್ಟಿ ಸುಖಾನುಭವ ಮಾಡುತ್ತಿದ್ದಾನೆ. ಆ ಸುಪ್ರತಿಷ್ಠಮುನಿ ಜಯಂತ ವಿಮಾನದಲ್ಲಿ ಅಹಮಿಂದ್ರಯೋಗ್ಯವಾದ ಅತಿಶಯ ಸುಖಾನುಭವವನ್ನು ಹಾಗೆ ಅನುಭವಿಸಿ ಅಲ್ಲಿಂದ ಚ್ಯುತನಾದಮೇಲೆ ಸಮುದ್ರವಿಜಯನಿಗೆ ಶಿವಾದೇವಿಯಲ್ಲಿ ಹರಿವಂಶಶೈಲತಿಲಕನಾಗಿ ನೇಮೀಶ್ವರನೆಂಬ ೨೨ ನೆಯ ತೀರ್ಥಂಕರನಾಗಿ ಹುಟ್ಟುತ್ತಾನೆ."—ಹೀಗೆಂದು ಅತಿಮುಕ್ತಕಮುನಿ ವಸುದೇವನಿಗೆ ನಿರೂಪಿಸಿದನು.

೩೫. ಕೃಷ್ಣಬಾಲಕ್ರೀಡಾ ವರ್ಣನ

ಗೌತಮಸ್ವಾಮಿ ಶ್ರೇಣಿಕನಿಗೆ ಹೇಳುತ್ತಾನೆ : "ಎಲೈ ಶ್ರೇಣಿಕ, ಹೀಗೆ ಅತಿಮುಕ್ತಕ ಮುನಿಯಿಂದ ಅರಿಷ್ಟನೇಮಿಯ ಚರಿತೆಯನ್ನು ಕೇಳಿ ವಸುದೇವನು ಆನಂದಗೊಂಡು ಮುನಿಗೆ ನಮಸ್ಕರಿಸಿ ದೇವಕಿಯೊಂದಿಗೆ ಮನೆಗೆ ಮರಳಿದನು. ಆ ಭೋಗೇಚ್ಛೆಯ ದಂಪತಿಗಳು ಸ್ವೇಚ್ಛೆಯಿಂದ ಕ್ರೀಡಾಸಕ್ತರಾಗಿ ಮಥುರೆಯಲ್ಲಿ ಮುನ್ನಿನಂತೆ ಇರುತ್ತಿದ್ದರು. ಮೃತ್ಯುಶಂಕಾಗ್ರಸ್ತನಾದ ಕಂಸನು ನಿರಂತರವೂ ಅವರ ಸೇವಾ ಶುಶ್ರೂಷೆಗಳಲ್ಲಿರುತ್ತಿದ್ದನು. ಅನಂತರ ದೇವಕಿ ಕಂಸನ ಭಯಕ್ಕೆ ಕಾರಣವಾದ ಅವಳಿಮಕ್ಕಳ ಗರ್ಭವನ್ನು ಧರಿಸಿದಳು. ಕೆಲವು ದಿನಕ್ಕೆ ಅವಳಿಗೆ ಅವಳಿಪುತ್ರರು ಜನಿಸಿದರು. ಇಂದ್ರನ ಆಜ್ಞೆಯಂತೆ ಸುನೈಗಮದೇವನು ಕೂಡಲೆ ಬಂದು ಆ ಮಕ್ಕಳನ್ನು ಎತ್ತಿಕೊಂಡು ಸುಭದ್ರಿಲಪುರದ ಶ್ರೇಷ್ಠಿಯಾದ ಸುದೃಷ್ಟಿಯ ಪತ್ನಿ ಅಲಕೆಯ ಬಳಿಗೆ ತಲಪಿಸಿದನು. ಆಗಲೇ ಅಲಕೆಗೂ ಅವಳಿಪುತ್ರರು ಜನಿಸಿದ್ದು, ದೈವಯೋಗದಿಂದ ಅವು ಹುಟ್ಟುತ್ತಲೇ ತೀರಿಕೊಂಡಿದ್ದವು. ನೈಗಮದೇವನು ಆ ಮೃತಪುತ್ರಯುಗ್ಮವನ್ನು ಎತ್ತಿಕೊಂಡುಹೋಗಿ ದೇವಕಿಯ ಹೆರಿಗೆ ಮನೆಯಲ್ಲಿರಿಸಿ ತನ್ನ ದೇವಲೋಕಕ್ಕೆ ಹೋದನು. ಸಶಂಕನಾಗಿ ಕಂಸನು ತಂಗಿಯ

ಪ್ರಸೂತಿಗೃಹಕ್ಕೆ ಬಂದು ಆ ಸತ್ತ ಅವಳಿಮಕ್ಕಳನ್ನು ನೋಡಿದನು. ಕಾಡ ಬೇಡರಂತೆ ಕೆರಳಿ ಅವುಗಳ ಕಾಲು ಹಿಡಿದು ಶಿಲಾತಲದ ಮೇಲೆ ಬಡಿದಿಕ್ಕಿದನು.

ಇದಾದಮೇಲೆ ದೇವಕಿ ಕ್ರಮವಾಗಿ ಇನ್ನೂ ಎರಡು ಬಾರಿ ಅವಳಿ ಗಂಡುಮಕ್ಕಳನ್ನು ಹಡೆದಳು. ಆಗಲೂ ನೈಗಮದೇವನು ಅವುಗಳನ್ನು ಅಲಕೆಯಲ್ಲಿಗೆ ತಲಪಿಸಿದನು. ಪಾಪಿ ಕಂಸನು ಮುನ್ನಿನಂತೆಯೇ ಆ ಮೃತಶಿಶುಯುಗಳವನ್ನೂ (ಅಲಕೆಯು ಮತ್ತೆರಡು ಬಾರಿ ಹಡೆದು ನೈಗಮದೇವನು ದೇವಕಿಯ ಬಳಿ ತಂದಿರಿಸುತ್ತಿದ್ದುವನ್ನು) ಶಿಲಾತಲದ ಮೇಲೆ ಬಡಿದಿಕ್ಕಿದನು. ಆಮೇಲೆ ತಮ್ಮ ಪುಣ್ಯವೇ ತಮ್ಮನ್ನು ಕಾಯುತ್ತಿದ್ದ, ಅಲಕೆಗೆ ಮೆಚ್ಚಾಗಿದ್ದ, ಆ ವಸುದೇವಪುತ್ರರು, ನೃಪದತ್ತ ದೇವಪಾಲ ಅನೀಕದತ್ತ ಅನೀಕಪಾಲ ಶತ್ರುಘ್ನ ಜಿತಶತ್ರು ಎಂದು ಹೆಸರಾದವರು, ಅಲಕೆಯ ಮನೆಯಲ್ಲಿ ಆರೈಕೆಗೊಂಡು ಸುಖವಾಗಿ ಬೆಳೆದು ದೊಡ್ಡವರಾದರು. ಅವರು ಹಾಗೆ ಬೆಳೆಯುತ್ತಿದ್ದಂತೆ ಸುದೃಷ್ಟಿಶ್ರೇಷ್ಠಿಯ ಭಾಗ್ಯವೂ ಬೆಳೆಯಿತು. ಅವನಿಗೆ ಅಪೂರ್ವವಸ್ತುಗಳು ಲಭಿಸಿದುವು. ಅವನ ವೈಭವ ರಾಜವೈಭವವನ್ನು ಮೀರಿಸಿತು.

ಇತ್ತ ದೇವಕಿಯು ಭರ್ತೃವಾಕ್ಯದಿಂದಾಗಿ ಪುತ್ರವಿಯೋಗಜನ್ಯ ದುಃಖವನ್ನು ಮರೆತು ಕ್ರಮಕ್ರಮವಾಗಿ ಮೊದಲಿನಂತಾದಳು. ಒಂದು ದಿನ ದೇವಕಿ ಹಾಸಿಗೆಯಲ್ಲಿ ಮಲಗಿರಲು ನಿಶಾಂತದ ವೇಳೆಯಲ್ಲಿ ಅಭ್ಯುದಯಸೂಚಕವಾದ ಏಳು ಪದಾರ್ಥಗಳನ್ನು ಸ್ವಪ್ನದಲ್ಲಿ ಕಂಡಳು. ಪ್ರಜ್ವಲಿಸುವ ಸೂರ್ಯ, ಮನೋಹರನಾದ ಚಂದ್ರ, ದಿಗ್ಗಜದಿಂದ ಅಭಿಷಿಕ್ತೆಯಾಗುತ್ತಿದ್ದ ಲಕ್ಷ್ಮಿ, ಆಕಾಶದಿಂದ ಕೆಳಗಿಳಿಯುತ್ತಿದ್ದ ವಿಮಾನ, ಜ್ವಲಿಸುವ ಬೃಹತ್‌ಜ್ವಾಲೆಗಳ ಅಗ್ನಿ, ಉನ್ನತಾಕಾಶದಲ್ಲಿ ರತ್ನಮರೀಚಿಚಕ್ರವಾದ ಸುರಧ್ವಜ, ತನ್ನ ಮೊಗಂಬುಗುವ ಸಿಂಹ ಇವೇ ಆ ಸ್ವಪ್ನಗಳು. ಈ ಸ್ವಪ್ನಗಳನ್ನು ಕಂಡು ಭಯಕಂಪಿತೆಯಾಗಿ ದೇವಕಿ ಎಚ್ಚರಗೊಂಡಳು. ವಿಸ್ಮಯಪಟ್ಟು, ಪುಲಕಿತಗಾತ್ರೆಯಾಗಿ ಪತಿಯಲ್ಲಿಗೆ ಹೋಗಿ ತಾನು ಕಂಡ ಸ್ವಪ್ನಗಳನ್ನು ಅವನಿಗೆ ತಿಳಿಸಿದಳು. ವಸುದೇವನು ಅವುಗಳ ಫಲವನ್ನು ಹೀಗೆ ನಿರೂಪಿಸಿದನು: ‘‘ನಿನಗೆ ಶೀಘ್ರದಲ್ಲಿಯೇ ಸಮಸ್ತಪೃಥ್ವೀನಾಥನಾದ ಪುತ್ರನಾಗುತ್ತಾನೆ. ಈ ಏಳು ಸ್ವಪ್ನಗಳ ಫಲಗಳು ಕ್ರಮವಾಗಿ, ಹುಟ್ಟುವ ಮಗನು ಸ್ವಪ್ರತಾಪದಿಂದ ಶತ್ರುನಾಶಕನಾಗುವನು, ಸರ್ವಜನ ಪ್ರಿಯನಾಗುವನು. ಅತಿಸೌಭಾಗ್ಯಶಾಲಿಯೂ ರಾಜ್ಯಾಭಿಷಿಕ್ತನೂ ಆಗುವನು, ಸ್ವರ್ಗದಿಂದ ಅವತರಿಸುವನು, ಅತ್ಯಂತ ಶೋಭಾಕರನಾಗಿರುವನು, ಸ್ಥಿರ ಪ್ರಕೃತಿಯವನಾಗುವನು, ನಿರ್ಭೀತನಾಗಿರುವನು-ಎಂಬುವೇ ಆಗಿವೆ’’ ಎಂದು ವಿವರಿಸಿದನು. ದೇವಕಿ ‘ತಥಾಸ್ತು’ ಎಂದು ನುಡಿದು ಸಂತೋಷಿಸಿದಳು. ಕೆಲಕಾಲದಲ್ಲಿಯೇ ಲೋಕಕಲ್ಯಾಣಕರವಾಗುವ ಗರ್ಭಧಾರಣೆ ಮಾಡಿದಳು. ದೇವಕಿಯ ಶಾರೀರಿಕ ಮಾನಸಿಕ ಸೌಖ್ಯ ಬೆಳೆಯಿತು. ಅವಳ ಗರ್ಭವು ಬೆಳೆದ ಹಾಗೆಲ್ಲ ಲೋಕದ ಸಮಸ್ತರ ಸೌಮನಸ್ಯವೂ ಬೆಳೆಯಿತು. ಆದರೆ ಕಂಸನ ಕ್ಷೋಭೆ ಮಾತ್ರ ಹೆಚ್ಚುತ್ತಾ ಹೋಯಿತು. ಇದರ ಫಲವಾಗಿ ಆ ನೀಚಾತ್ಮನು ಗರ್ಭಸ್ಥಶಿಶುವಿನ ಗುಣಗಳತ್ತ ನಿರ್ಲಕ್ಷ್ಯನಾಗಿ ಗರ್ಭ ಬೆಳೆಯುವುದರ ತಿಂಗಳು ದಿನಗಳನ್ನು ಲೆಕ್ಕಹಾಕುತ್ತಿದ್ದನು. ಹೆರಿಗೆಯಾಗುವುದನ್ನೇ ಕಾಯು

ತ್ತಿದ್ದನು. ಇದಕ್ಕಾಗಿ ಗರ್ಭಿಣಿ ದೇವಕಿಯನ್ನು ಚಚ್ಚರದಿಂದ ನೋಡಿಕೊಳ್ಳುತ್ತಿದ್ದನು. ಮಕ್ಕಳೆಲ್ಲ ೯ ನೆಯ ತಿಂಗಳಲ್ಲೆ ಹುಟ್ಟುವುದಾದರೆ ಕೃಷ್ಣನು ಶ್ರವಣನಕ್ಷತ್ರದಲ್ಲಿ ಭಾದ್ರಪದ ಶುಕ್ಲಪಕ್ಷದ ದ್ವಾದಶೀತಿಥಿಯಂದು ೭ನೆಯ ತಿಂಗಳಲ್ಲಿಯೇ ಅನಿರೀಕ್ಷಿತವಾಗಿ ಹುಟ್ಟಿದನು. ಆತನ ದೇಹದಲ್ಲಿ ಶಂಖ ಚಕ್ರಾದಿ ಶುಭಲಕ್ಷಣಗಳಿದ್ದುವು. ದೇಹದಿಂದ ಮಹಾನೀಲ ಮಣಿಯಂತೆ ಪ್ರಕಾಶ ಹೊಮ್ಮುತ್ತಿತ್ತು. ತನ್ನ ದೇಹಕಾಂತಿಯಿಂದ ಕೃಷ್ಣನು ದೇವಕಿಯ ಪ್ರಸೂತಿಗೃಹವನ್ನೆ ಬೆಳಗುತ್ತಿದ್ದನು. ಆಗ ಆ ಪುರುಷೋತ್ತಮನ ಪ್ರಭಾವದಿಂದ ಸ್ನೇಹಯುತರಾದ ಬಂಧುಜನರ ಮನೆಗಳಲ್ಲಿ ಶುಭನಿಮಿತ್ತಗಳಾದುವು. ಶತ್ರುಗಳ ಮನೆಗಳಲ್ಲಿ ಭಯೋತ್ಪಾದಕನಿಮಿತ್ತಗಳಾದುವು. ಆ ದಿನಗಳಲ್ಲಿ ೭ ದಿನಗಳ ಕಾಲ ಒಂದೇ ಸಮನೆ ಜಡಿ ಮಳೆ ಹೊಡೆಯುತ್ತಿತ್ತು. ಹೀಗಿದ್ದೂ ಮಗು ಹುಟ್ಟುತ್ತಲೇ ಆ ಕೃಷ್ಣನನ್ನುಬಲದೇವನು ಎತ್ತಿಕೊಂಡನು ; ತಂದೆ ವಸುದೇವನು ಅವನ ಮೇಲೆ ಕೊಡೆ ಹಿಡಿದನು. ಇಬ್ಬರೂ ಆ ರಾತ್ರಿ ಶೀಘ್ರವಾಗಿ ಮನೆಯಿಂದ ಹೊರಬಿದ್ದರು. ಆಗ ನಗರವಾಸಿಗಳೆಲ್ಲ ಮಲಗಿದ್ದರು. ಕಂಸಭಟರೂ ಗಾಢನಿದ್ರೆಯಲ್ಲಿದ್ದರು. ಯಾರೂ ಇವರನ್ನು ಲಕ್ಷಿಸಲಿಲ್ಲ. ಗೋಪುರದ್ವಾರದ ಬಳಿಗೆ ಬಂದಾಗ ಬಾಗಿಲು ಹಾಕಿತ್ತು. ಆದರೆ ಕೃಷ್ಣನ ಪಾದಯುಗ್ಮಗಳ ಸ್ಪರ್ಶವಾಗುತ್ತಲೇ ಅಲ್ಲಿಂದ ಹೊರಬೀಳುವುದಕ್ಕೆ ತಕ್ಕ ಸಂಧಿಯಾಯಿತು. ಇಬ್ಬರೂ ಅದನ್ನು ದಾಟಿ ಮುನ್ನಡೆದರು. ಅಷ್ಟರಲ್ಲಿ ನೀರಿನ ಹನಿಯೊಂದು ಮಗುವಿನ ಮೂಗಿನಲ್ಲಿ ಸೇರಿ ಮಗು ಒಮ್ಮೆ ಸೀನಿತು. ಆ ದನಿ ಸಿಡಿಲು ವಾಯುಗಳ ದನಿಯಂತೆ ಗಂಭೀರವಾಗಿತ್ತು. ಆ ವೇಳೆಗೆ ಮೇಲಿಂದ ‘‘ನೀನು ಚಿರಂಜೀವಿಯಾಗಿ ನಿರ್ವಿಘ್ನವಾಗಿ ಬಾಳು’’ ಎಂಬೊಂದು ಧ್ವನಿ ಕೇಳಿಸಿತು. ಗೋಪುರದ್ವಾರದ ಮೇಲೆ ಕಂಸನ ತಂದೆ ಉಗ್ರಸೇನನಿದ್ದನು. ಅವನೇ ಹಾಗೆ ಹರಸಿದ್ದು. ಆ ಹರಕೆಯ ಮಾತು ಕೇಳಿ ಬಲದೇವ ವಸುದೇವರು ಹರ್ಷಿಸಿದರು. ಉಗ್ರಸೇನನನ್ನು ಕುರಿತು ‘‘ಪೂಜ್ಯ, ಇದೊಂದು ರಹಸ್ಯ ಗೂಢವಾಗಿರಲಿ ; ಈ ದೇವಕಿಯ ಪುತ್ರನಿಂದ ನಿನಗೆ ಬಿಡುಗಡೆಯಾಗುತ್ತದೆ’’ ಎಂದರು. ಉಗ್ರಸೇನನು ಪ್ರತಿಯಾಗಿ “ಈತನು ನಮ್ಮ ಸೋದರನ ಮಗಳ ಮಗ ; ಶತ್ರುವಿನಿಂದ ಅಜ್ಞಾತವಾಗಿದ್ದು ವೃದ್ಧಿಂಗತನಾಗಲಿ’’ ಎಂದನು. ಆ ಮಾತಿಗೆ ಅವನನ್ನು ಪ್ರಶಂಸಿಸಿ ಇಬ್ಬರೂ ಶೀಘ್ರವಾಗಿ ನಗರದಿಂದ ಹೊರಹೊರಟರು.

ಆಗ ದೇದೀಪ್ಯಮಾನವಾದ ಕೊಂಬುಗಳನ್ನುಳ್ಳ ಒಂದು ವೃಷಭವು ಮುಂದೆ ಮುಂದೆ ಮಾರ್ಗದರ್ಶನ ಮಾಡಿಸುತ್ತ ಬಲುವೇಗದಿಂದ ಸಾಗುತ್ತಿತ್ತು. ಎದುರಿಗೆ ಯಮುನೆಯ ಪ್ರವಾಹ ಅಖಂಡವಾಗಿ ಹರಿಯುತ್ತಿತ್ತು. ಆದರೆ ಕೃಷ್ಣನ ಪ್ರಭಾವದಿಂದ ಆ ಮಹಾಪ್ರವಾಹ ಶೀಘ್ರದಲ್ಲಿಯೇ ವಿಚ್ಛಿನ್ನವಾಯಿತು. ಅವರು ನದಿಯನ್ನು ದಾಟಿ ಹೋಗಿ ವೃಂದಾವನದತ್ತ ನಡೆದರು. ಅಲ್ಲಿ ಹಳ್ಳಿಯ ಹೊರಗೆ ಗೋಕುಲದಲ್ಲಿ ಯಶೋದೆಯೆಂಬ ಪತ್ನಿಯೊಂದಿಗೆ ಸುನಂದನೆಂಬ ಗೋಪನು (ನಂದಗೋಪನು) ಇರುತ್ತಿದ್ದನು. ಅವನು ಇವರಿಗೆ ವಂಶಪರಂಪರೆಯಿಂದ ಬಂದ ವಿಶ್ವಾಸಪಾತ್ರನಾದ ವ್ಯಕ್ತಿ. ಬಲದೇವ ವಸುದೇವರು ರಾತ್ರಿಯಲ್ಲಿಯೇ ಅವನನ್ನು ನೋಡಿದರು. ಆ ದಂಪತಿಗಳಿಗೆ ಕೃಷ್ಣನನ್ನೊಪ್ಪಿಸಿ

“ಈ ಶಿಶು ವಿಶಾಲಾಕ್ಷನು ; ನೋಡುವ ಕಣ್ಣುಗಳಿಗೆ ಅಮೃತಧಾರೆ ಸುರಿಸುವವನು ; ಇವನನ್ನು ನಿಮ್ಮ ಮಗನೆಂದು ತಿಳಿದು ಬೆಳೆಸಿ. ಈ ರಹಸ್ಯ ಯಾರಿಗೂ ಗೊತ್ತಾಗದಿರಲಿ, ಈ ಮಾತು ನೆನಪಿರಲಿ” ಎಂದು ಹೇಳಿದರು. ಅನಂತರ ಆಗಲೇ ಜನಿಸಿದ್ದ ಯಶೋದೆಯ ಹೆಣ್ಣುಮಗುವನ್ನು ತೆಗೆದುಕೊಂಡು ಇಬ್ಬರೂ ಶೀಘ್ರವಾಗಿ ಹಿಂದಿರುಗಿದರು. ಶತ್ರುವಿಗೆ ವಿಶ್ವಾಸ ಹುಟ್ಟುವಂತೆ ಅದನ್ನು ದೇವಕಿಗೆ ಕೊಟ್ಟು, ತಮ್ಮ ಪಾಡಿಗೆ ತಾವು ಏನೂ ಗೊತ್ತಿಲ್ಲದ ಹಾಗೆ ಇದ್ದುಬಿಟ್ಟರು. ಆಮೇಲೆ ಹೆರಿಗೆಯ ಸುದ್ದಿ ತಿಳಿದು ನಿರ್ದಯಿ ಕಂಸನು ಹೆರಿಗೆಮನೆ ಹೊಕ್ಕು ಅಲ್ಲಿ ಆ ನಿರ್ದುಷ್ಟ ಬಾಲಿಕೆಯನ್ನು ಕಂಡನು. ಅದನ್ನು ಕಾಣುತ್ತಲೂ ಅವನ ಕೋಪ ಇಳಿದುಹೋದರೂ “ಅಕಸ್ಮಾತ್ತಾಗಿ ಒಂದು ಪಕ್ಷ ಇವಳ ಪತಿ ನನ್ನ ಶತ್ರುವಾಗಲು ಸಾಧ್ಯವಿದೆ” ಎಂದು ಯೋಚಿಸಿದನು. ಈ ಶಂಕೆಯಿಂದ ವ್ಯಾಕುಲಗೊಂಡು ಆ ಹೆಣ್ಣುಮಗುವನ್ನು ತಾನೇ ಎತ್ತಿಕೊಂಡು ಕೈಯಿಂದ ಒತ್ತಿ ಅದರ ಮೂಗನ್ನು ಚಪ್ಪಟೆಮಾಡಿ ಹಾಕಿದನು. ಹೀಗೆ ದೇವಕಿಯ ಮನಸ್ಸಿಗೆ ಸಂತಾಪವನ್ನುಂಟುಮಾಡಿದ ಕಂಸನು ಇನ್ನು ಇವಳಿಗೆ ಪುತ್ರಪ್ರಾಪ್ತಿ ನಿಂತಿತೆಂದು ತಿಳಿದು ಸಂತುಷ್ಟನಾಗಿ ತನ್ನೆದೆಯ ಕ್ರೌರ್ಯವನ್ನು ತನ್ನಲ್ಲಿಯೇ ಮುಚ್ಚಿಕೊಂಡು ಕೆಲದಿನಗಳ ಕಾಲ ಸುಖದಿಂದಿರತೊಡಗಿದನು.

ಇತ್ತ ನಂದನ ಮನೆಯಲ್ಲಿ ಬಿಟ್ಟ ವಸುದೇವಪುತ್ರನಿಗೆ ಜಾತಕರ್ಮಮಾಡಿ ಕೃಷ್ಣನೆಂದು ಹೆಸರಿಡಲಾಯಿತು. ಆ ವ್ರಜವಾಸಿಯು ನಂದ ಯಶೋದೆಯರ ಪ್ರೀತಿಯನ್ನು ಉಕ್ಕಿಸುತ್ತ ಸುಖವಾಗಿ ಬೆಳೆದನು. ಮಗು ಉತ್ತಾನಶಯ್ಯೆಯಲ್ಲಿ ಮಲಗಿರುವಾಗ ಗದೆ ಖಡ್ಗ ಚಕ್ರ ಅಂಕುಶ ಶಂಖ ಪದ್ಮ ಮುಂತಾದ ಶುಭಚಿಹ್ನೆಗಳಿಂದ ಅಂಕಿತವಾದ ಪಾಣಿತಲ ಪಾದತಲಗಳನ್ನು ಆಡಿಸುವನು. ಇದು ತಾಯಿತಂದೆಗಳ ಮನಸ್ಸನ್ನು ನಲಿಸುತ್ತಿತ್ತು. ಸುಂದರನಾದ ಇಂದೀವರವರ್ಣಾಭನಾದ ಕೃಷ್ಣನಿಗೆ ಮೊಲೆಯೂಡಿಸುವ ನೆಪದಲ್ಲಿ ಗೋಪಿಯರು ಅತೃಪ್ತನಯನಗಳಿಂದ ಅವನನ್ನೇ ನೋಡುತ್ತಿದ್ದರು.

ಇತ್ತ ಕಂಸನ ಹಿತೈಷಿ ವರುಣನೆಂಬ ನೈಮಿತ್ತಿಕನು ಒಂದು ದಿನ ಅವನೊಂದಿಗೆ “ರಾಜಾ, ಇಲ್ಲಿ ಯಾವುದೋ ನಗರದಲ್ಲಿ ಅಥವಾ ವನದಲ್ಲಿ ನಿನ್ನ ಶತ್ರು ಬೆಳೆಯುತ್ತಿದ್ದಾನೆ. ಅವನನ್ನು ಹುಡುಕಿ ತೆಗೆಯಬೇಕು” ಎಂದನು. ಆಮೇಲೆ ಕಂಸನು ರಿಪುನಾಶಬುದ್ಧಿಯಿಂದ ಮೂರು ದಿನ ಉಪವಾಸವಾಚರಿಸಿದನು. ಪೂರ್ವಭವದಲ್ಲಿ ಸಪ್ತದೇವತೆಯರು ಕಾಣಿಸಿದಾಗ “ಈಗೇನೂ ಕೆಲಸವಿಲ್ಲ ; ಮುಂದಿನ ಜನ್ಮದಲ್ಲಿ ಸಂದರ್ಭಬಿದ್ದರೆ ಸಹಾಯ ಮಾಡುವಿರಂತೆ” ಎಂದು ಕಂಸನು ಹಿಂದಿರುಗಿಸಿದ್ದನಷ್ಟೆ. ಆ ದೇವಿಯರು ಆಗ ತಾವು ಅದಕ್ಕೆ ಒಪ್ಪಿದ್ದರಿಂದ ಅದನ್ನು ಪೂರೈಸಿಕೊಡಲೆಂದು ಈಗ ಬಂದು ಕಂಸನನ್ನು ಕುರಿತು, “ನಾವೆಲ್ಲ ನಿನ್ನ ಪೂರ್ವಭವದ ತಪಸ್ಸಿನಿಂದ ಸಿದ್ಧರಾದ ದೇವಿಯರು. ನಿನ್ನ ಕೆಲಸವೇನುಂಟೋ ಅದನ್ನು ಹೇಳು ; ಬಲದೇವ ನಾರಾಯಣರಿಬ್ಬರನ್ನು ಬಿಟ್ಟು ನಿನ್ನ ಮತ್ತಾವ ಶತ್ರುವನ್ನು ಕ್ಷಣದಲ್ಲಿ ನಾಶಮಾಡಬೇಕಾಗಿದೆ, ಅದನ್ನು ಹೇಳು” ಎಂದರು. ಕಂಸನು “ನನ್ನ ಯಾವನೋ ಒಬ್ಬ ವೈರಿ ಎಲ್ಲಿಯೋ ಗೊತ್ತಾಗದ ಹಾಗೆ ಬೆಳೆಯುತ್ತಿದ್ದಾನೆ. ನೀವು ದಯೆತೋರಿ ಕೂಡಲೇ ಅವನನ್ನು ಗೊತ್ತುಹಚ್ಚಿ ನಿರ್ಮಮತೆಯಿಂದ ಕೊಂದು ಹಾಕಬೇಕು” ಎಂದನು. ದೇವಿಯರು ಆ ಮಾತಿಗೆ ಒಪ್ಪಿ ಅಲ್ಲಿಂದ ಹೊರಟುಹೋದರು.

ಆ ದೇವಿಯರಲ್ಲಿ ಒಬ್ಬಳು ಒಂದು ಉಗ್ರಶಕುಂತಪಕ್ಷಿಯ ರೂಪದಲ್ಲಿ ಕೃಷ್ಣನಲ್ಲಿಗೆ ಬಂದಳು. ಕೊಕ್ಕಿನಿಂದ ಬಡಿದು ಕೊಲ್ಲಲು ಯತ್ನಿಸಿದಳು. ಆದರೆ ಕೃಷ್ಣನು ಅದರ ಕೊಕ್ಕು ಹಿಡಿದು ಬಲವಾಗಿ ಹಿಂದಕ್ಕೊತ್ತಿಬಿಡಲು ಆ ದೇವತೆ ಹೆದರಿ ಅರಚುತ್ತಾ ಓಡಿಹೋದಳು. ಇನ್ನೊಬ್ಬಳು ದೇವಿ ಪೂತನಭೂತದ ರೂಪಧರಿಸಿ ಕುಪೂತನೆಯಾಗಿ ಬಂದು ಕೃಷ್ಣನಿಗೆ ವಿಷಸ್ತನ್ಯವೂಡಿಸಿದಳು. ಆದರೆ ದೇವತಾಧಿಷ್ಠಿತ ಕೃಷ್ಣನು ಉಗ್ರಮುಖನಾಗಿ ಅವಳ ಸ್ತನಚೂಚಕವನ್ನು ಬಿರುಸಾಗಿ ಹೀರಿಹಾಕಿದ್ದರಿಂದ ಅ ಬಡಪಾಯಿ ಕಿರಿಚಿಕೊಂಡು ಓಡಿಹೋದಳು. ಕೃಷ್ಣನು ಕೆಲವೊಮ್ಮೆ ಮಲಗುವುದು, ಕೂರುವುದು, ಹೊಟ್ಟೆಯಲ್ಲಿ ಸರಿಯುವುದು, ಹೆಜ್ಜೆ ಹಾಕುವುದು, ಓಡುವುದು, ಮುದ್ದುಮಾತಾಡುವುದು, ಬೆಣ್ಣೆ ತಿನ್ನುವುದು—ಮೊದಲಾದವನ್ನು ಮಾಡುತ್ತಿದ್ದನು. ಮೂರನೆಯ ಪಿಶಾಚಿ ಶಕಟರೂಪದಿಂದ ಅವನೆದುರು ಬಂದಳು. ಕೃಷ್ಣನು ಬಾಲಕನಾಗಿಯೂ ನಿರ್ಭೀತನು ; ಅಂಜನಗಿರಿಯಂತೆ ಶೋಭಾವಹನು, ಅಭ್ಯುದಯಶಾಲಿ. ಆದ್ದರಿಂದ ಜೋರಾಗಿ ಒಮ್ಮೆ ಆ ಗಾಡಿಯನ್ನು ಕಾಲಿಂದ ಒದ್ದು ಘಾತಿಸಲು, ಅದು ನಾಶವಾಯಿತು.

ಒಂದು ದಿನ ಅವನ ಕೋಟಲೆ ಹೆಚ್ಚಾಗಿ ಯಶೋದೆ ಕೃಷ್ಣನ ಕಾಲುಗಳನ್ನು ಹಗ್ಗದಿಂದ ಬಿಗಿದು ಒರಳಿಗೆ ಅವನನ್ನು ಕಟ್ಟಿಹಾಕಿದಳು. ಅದೇ ದಿನವೇ ಶತ್ರುವಿನ ಇನ್ನಿಬ್ಬರು ದೇವಿಯರು ಯಮಳಾರ್ಜುನ ವೃಕ್ಷಗಳ ರೂಪದಲ್ಲಿ ಕೃಷ್ಣನನ್ನು ಕಾಡಲೆಂದು ಬಂದರು. ಕೃಷ್ಣನು ಆ ಸ್ಥಿತಿಯಲ್ಲಿಯೂ ಅವರನ್ನು ಕೆಡವಿ ಓಡಿಸಿದನು. ಹೀಗೆ ಬಾಲ್ಯದ ಆರಂಭದೆಸೆಯಲ್ಲೇ ನಂದಯಶೋದೆಯರು ಅವನ ಅದ್ಭುತಶಕ್ತಿಗೆ ಬೆರಗಾದರು, ಪ್ರಶಂಸಿಸಿದರು. ಹೀಗೆ ಕೃಷ್ಣನು ವನಮಧ್ಯದಲ್ಲಿ ಬೆಳೆಯತೊಡಗಿದನು. ಒಂದು ದಿನ ಆರನೆಯ ದೇವಿ ಗೂಳಿಯ ರೂಪದಲ್ಲಿ ಬಂದಳು. ಅದು ದರ್ಪಾತಿಶಯದಿಂದ ಗೋಪರ ನೆಲೆಗಳಲ್ಲಿ ಕಂಡಕಂಡ ಕಡೆ ನುಗ್ಗಿ ಎಲ್ಲರನ್ನೂ ಉರುಳಿಸುತ್ತ ಅಬ್ಬರಿಸುತ್ತ ಬರುತ್ತಿತ್ತು. ಕೃಷ್ಣನು ಅದರ ಕೊರಳನ್ನು ತಿರುಚಿ ಹಾಕಿ ಅದನ್ನು ನಾಶಮಾಡಿದನು.

ಕೃಷ್ಣನ ಈ ಲೋಕೋತ್ತರವಾದ ಚೇಷ್ಟೆಗಳ ವಿಚಾರ ಕರ್ಣಾಕರ್ಣಿಕೆಯಾಗಿ ಬಲದೇವನಿಗೂ ಮುಟ್ಟಿತು. ಅವನು ದೇವಕಿಯೆದುರು ಇದರ ವರ್ಣನೆ ಮಾಡಿದನು. ಅದನ್ನು ಕೇಳಿ ಮಾಡಲಿರುವ ಉಪವಾಸದ ವ್ಯಾಜದಿಂದ ಮಗನನ್ನು ನೋಡಲು ದೇವಕಿ ಗೋಕುಲಕ್ಕೆ ಹೋದಳು. ಅಲ್ಲಿ ಗೋಧನಯುಕ್ತವಾದ ವನಖಂಡದಲ್ಲಿ ಕುಳಿತು ಅವಳಿಗೆ ತುಂಬ ಸಂತೋಷವಾಯಿತು. ಅಲ್ಲಿ ಎಲ್ಲೆಲ್ಲಿಯೂ ಕೃಷ್ಣಬಲದೇವರಂತೆ ಕರಿ ಬಿಳಿಯ ಬಣ್ಣದ ದನಕರುಗಳು ಒಂದಕ್ಕಿಂತ ಒಂದು ಸುಂದರವೂ ಸುಪುಷ್ಟವೂ ಆದುವನ್ನು ನೋಡಿ ದೇವಕಿಗೆ ಪರಮಸಂತೋಷವಾಯಿತು. ದನಕರುಗಳ ಅಂಬಾದನಿ, ಗೋಪಿಯರು ಮೊಸರು ಕಡೆವ ದನಿ ಅವಳನ್ನು ಆಕರ್ಷಿಸಿತು. ನಂದನು ಯಶೋದೆಯೊಂದಿಗೆ ಹಾಗೂ ಇತರರೊಂದಿಗೆ ಬಂದು ಸ್ವಾಮಿನಿಯಾದ ದೇವಕಿಯನ್ನು ಕಂಡು ಭಕ್ತಿಯಿಂದ ವಂದಿಸಿದನು. ಆಮೇಲೆ ಪೀತವಸನನೂ ಬರ್ಹಿಕಲಾಪನೂ, ನೀಲಕಮಲ ಶಿರೋಭೂಷನೂ, ಉತ್ತಮಕಂಠಹಾರನೂ, ಸ್ವರ್ಣಕರ್ಣಾಭರಣನೂ, ಉಚ್ಚಮೌಲಿಯುತನೂ, ಹೊಂಗಡ